ಕೃಷಿ ವಿಶ್ವವಿದ್ಯಾಲಯ ಧಾರವಾಡ

ಕೃಷಿ ವಿಶ್ವವಿದ್ಯಾಲಯದ 2017–18 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಸರಣಾ ವರದಿ

ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಕೃಷಿ ವಿಶ್ವವಿದ್ಯಾಲಯ, ಧಾರವಾಡದ 2017–18 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಶಾಸಕಾಂಗ ಪಕ್ಷದ ಉಭಯ ಸದನಗಳಲ್ಲಿ ಮಂಡಿಸಲು ಆಗಿರುವ ವಿಳಂಬಕ್ಕೆ ವಿವರ ಪೂರ್ಣ ಟಿಪ್ಪಣಿ

***

ಕೃಷಿ ವಿಶ್ವವಿದ್ಯಾಲಯ, ಧಾರವಾಡದ 2017–18 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯು ಸರ್ಕಾರಿ ಲೆಕ್ಕ ಪರಿಶೋಧಕರು, ಕೃ.ವಿ.ವಿ ಧಾರವಾಡ, ಇವರ ಪತ್ರ ಸಂಖ್ಯೆ ಅನಿ/ಪ್ರಾಕಬೆ/ಕೃವಿವಿಧಾ/ಲೆಪವಪುಪ/1154/2020–21 ದಿನಾಂಕ: 03.03.2021 ರಂತೆ ಬಿಡುಗಡೆಯಾಗಿ ಈ ಕಛೇರಿಯಲ್ಲಿ ದಿನಾಂಕ: 08.03.2021 ರಂದು ಸ್ವೀಕರಿಸಲ್ಪಟ್ಟಿತು. ಸದರಿ ವರದಿಯು ನೈಜವಾಗಿ ಸಪ್ಟಂಬರ 30.2018 ರಂದು ವಿಶ್ವವಿದ್ಯಾಲಯದಲ್ಲಿ ಸ್ವೀಕೃತಿ ಆಗಬೇಕಾಗಿತ್ತು. ಇದರನ್ವಯ 2017–18 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯು 2 ವರ್ಷ 5 ತಿಂಗಳು ತಡವಾಗಿ ಬಿಡುಗಡೆಗೊಂಡಿರುವ ಕಾರಣ ಸದರಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ವಿಳಂಬವಾಗಿದೆ.

ತದನಂತರ ವರದಿಯಲ್ಲಿಯ ಆಕ್ಷೇಪಿತ ಪದಪುಂಜಗಳ ಝೆರಾಕ್ಸ ಪ್ರತಿಗಳನ್ನು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ 68 ಘಟಕಗಳಾದ ಮಹಾವಿದ್ಯಾಲಯಗಳು, ಮುಖ್ಯ/ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರಗಳು, ಕೃಷಿ ವಿಜ್ಞಾನ/ವಿಸ್ತರಣಾ ಕೇಂದ್ರಗಳು, ಕೃಷಿ ಅನುಸಂಧಾನ ಮತ್ತು ಭಾರತ ಸರ್ಕಾರದ ಅನುದಾನಿತ ಯೋಜನೆಗಳಿಗೆ ಸಂಬಂಧಿಸಿದ ಅನುಸರಣೆಗಳನ್ನುಸಲ್ಲಿಸಲು ಸೂಚಿಸಲಾಯಿತು. ಇದರನ್ವಯ ಎಲ್ಲ ಘಟಕಗಳಿಂದ ಅನುಸರಣೆ ಪಡೆದು ಅವುಗಳನ್ನು ಕ್ರೋಢಿಕರಿಸಲಾಯಿತು.

ಕೃಷಿ ವಿಶ್ವವಿದ್ಯಾಲಯದ ಅಧಿನಿಯಮ 2009 ಕಲಂ–40(3)ರ ಪ್ರಕಾರ ಈ ವರದಿಯನ್ನು ಕೃಷಿ ವಿಶ್ವವಿದ್ಯಾಲಯ ಆರ್ಥಿಕ ಸಮಿತಿ ಹಾಗೂ ವ್ಯವಸ್ಥಾಪನಾ ಮಂಡಳಿಯ ಸಭೆ ದಿನಾಂಕ: 05.04.2021 ರಂದು ಮಂಡಿಸಿ ಒಪ್ಪಿಗೆ ಪಡೆದು ಅನುಸರಣಾ ವರದಿಯನ್ನು ವಿಧಾನ ಮಂಡಳದ ಉಭಯ ಸದನಗಳಲ್ಲಿ ಮಂಡಿಸಲು 80 ಪ್ರತಿಗಳಲ್ಲಿ ಮುದ್ರಿಸಲು ಪತ್ರ ಸಂಖ್ಯೆ: ಹನಿಅ/ಲೆಪವಿ/ /2021–22 ದಿನಾಂಕ: 26.04.2021 ರಂದು ಆದೇಶಿಸಲಾಯಿತು. ಹಾಗೂ ಪತ್ರ ಸಂಖ್ಯೆ: ಲೆನಿ/ಲೆಪವಿ/ /2021–22 ದಿನಾಂಕ: 12/05/2021 ರಂತೆ ಸರ್ಕಾರಕ್ಕೆ ಸಲ್ಲಿಸಲಾಯಿತು.

ಲೆಕ್ಕ ನಿಯಂತ್ರಕರು
ಕೃಷಿ ವಿಶ್ವವಿದ್ಯಾಲಯ ಧಾರವಾಡ

UNIVERSITY OF AGRICULTURAL SCIENCES, DHARWAD

A NOTE ON DELAY IN SUBMISSION OF AUDIT COMPLIANCE REPORT ON THE AUDIT REPORT FOR THE YEAR 2017-18

The Govt. Auditor, UAS, Dharwad has released the Audit report for the year 2017-18 vide their letter No. ಅನಿ/ಪ್ರಾಕಬೆ/ಕೃವಿಧಾ/ಲೆಪವಪುಪ/1154/2020–21 Date: 03.03.2021 and received by this office on 08.03.2021. The report was supposed to be released on 30th September,2018 as per the schedule. Therefore, the release of the report for the year 2017-18 has been released delayed by 2 year 6 months.

After receipt of the audit Report, the observations coming under all the 68 units of the University such as Colleges, Main/Regional Agricultural research Stations, Agricultural Research Stations, Krishi Vignyana Kendra, Agricultural Extension Units and Schemes pertaining to ICAR and Government of India were sent to the concerned units for compliances. The compliance from all the units were obtained and compiled.

As per University of Agricultural Sciences Act 2009 section 40 (3) the Audit compliance report was placed before the Finance committee and Board of Management Committee Meeting held on 05.04.2021 and got approved. Accordingly the compliances are ordered for printing of 80 copies as per the letter No. ಲೆನಿ/ಲೆಪವಿ/ 2021–22 ದಿನಾಂಕ: 26.04.2021 and submitted to the Government as per the letter No.ಲೆನಿ/ಲೆಪವಿ/ /2021–22 Date:12/05/2021 For placing before both the houses.

ಲೆಕ್ಕ ನಿಯಂತ್ರಕರು
ಕೃಷಿ ವಿಶ್ವವಿದ್ಯಾಲಯ ಧಾರವಾಡ

ಕೃಷಿ ವಿಶ್ವವಿದ್ಯಾಲಯ ಧಾರವಾಡ

ದಿ.01.04.2017 ರಿಂದ 31.03.2018 ರ ಅವಧಿಯ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಪರಿವಿಡಿ

ಪದ ಪುಂಜ ಸಂಖ್ಯೆ	ವಿವರ	ಪುಟ ಸಂ	ಪದ ಪುಂಜ ಸಂಖ್ಯೆ	ವಿವರ	ಪುಟ ಸಂ
1	ಆಯವ್ಯಯ ಅಂದಾಜು ಪತ್ರಿಕೆ ಪರಿಶೀಲನೆ. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.6.1)	15–16	6	ತಳಿವರ್ಧಕ ಬೀಜ ಆವರ್ತ ನಿಧಿಯಿಂದ ಬೀಜೋತ್ಪಾದನಾ ಆವರ್ತ ನಿಧಿಗೆ ಹಣ ವರ್ಗಾಯಿಸಿರುವ ಕುರಿತು. (ಬಿ.ಎಸ್.ಪಿ/ಎನ್.ಎಸ್.ಪಿ.ಕಂ.ಸಂ.33)	31
2	ವಾರ್ಷಿಕ ಲೆಕ್ಕ ಪತ್ರಗಳ ಕುರಿತು.	16–17	7	ರಾಜ್ಯ ಸರ್ಕಾರದ ಬ್ಲಾಕ್ ಗ್ರ್ಯಾಂಟ್ (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.–14.1)	32
3	ಕೃಷಿ ವಿಶ್ವವಿದ್ಯಾಲಯ ಧಾರವಾಡದ 2017–18 ನೇ ಆರ್ಥಿಕ ಸಾಲಿನ ವಾರ್ಷಿಕ ಲೆಕ್ಕ ಪತ್ರ ಹಾಗೂ ಹಣಕಾಸು ವಹಿವಾಟುಗಳಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.7)	17–26	8	ಭಾರತೀಯ ಕೃಷಿ ಅನುದಾನ ಪರಿಷತ್–ಐ.ಸಿ.ಎ.ಆರ್ (Indian Institute of Agricultural Research) ರಾಜ್ಯ ಸರ್ಕಾರದಿಂದ ಹಾಗೂ ಇತರೆ ಪ್ರಾಧಿಕಾರಗಳಿಂದ ಪ್ರಾಯೋಜಿತ ವಿಶೇಷ ಸಂಶೋಧನಾ ಯೋಜನೆಗಳು(ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ. 14.3)	32–33
3.19	ವಾರ್ಷಿಕ ಲೆಕ್ಕ ಪತ್ರದಲ್ಲಿಯ ಮೊತ್ತಕ್ಕೂ ಹಾಗೂ ಲೆಕ್ಕ ಶೀರ್ಷಿಕೆ 3630 ರಲ್ಲಿ ಖರ್ಚಿನ ಮೊತ್ತಕ್ಕೂ ವ್ಯತ್ಯಾಸದ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.9)	26	9	ಅನುದಾನ ಲೆಕ್ಕವನ್ನು ಕ್ರಮಬದ್ಧವಾಗಿ ನಿರ್ವಹಿಸದಿರುವುದು.(– ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.14.4)	34
3.20	ಲೆಕ್ಕ ಶೀರ್ಷಿಕೆ 6700/300 ಅಡಿ ಪರಿಷ್ಕೃತ ಆಯವ್ಯಯ ಅಂದಾಜು ಮೊತ್ತದಿಂದ ಅಧಿಕ ವೆಚ್ಚ ಭರಿಸಿದ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.10)	26	10	ADHOC PROJECTS GOI ಈ ಶೀರ್ಷಿಕೆಯಡಿ 2017–18 ನೇ ಸಾಲಿನಲ್ಲಿ ಮಂಜೂರಾದ ಮೊತ್ತ ಉಳಿಕೆ ಮೊತ್ತದ ವಿವರ ಲೆಕ್ಕ ಪರಿಶೋಧನೆಗೆ ಹಾಜರುಪಡಿಸದೆ ಇರುವ ಕುರಿತು (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.47)	35
3.21	ವಾರ್ಷಿಕ ಲೆಕ್ಕಪತ್ರದಲ್ಲಿಯ ಮೊತ್ತಕ್ಕೂ ಹಾಗೂ ಲೆಕ್ಕ ಶೀರ್ಷಿಕೆ 7163 ರಲ್ಲಿ ಖರ್ಚಿನ ಮೊತ್ತಕ್ಕೂ ವ್ಯತ್ಯಾಸದ ಕುರಿತು.(ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.11)	27	11	ಬ್ಯಾಂಕಗಳಲ್ಲಿ ತೊಡಗಿಸಿದ ಹಣ	36
4	ವಿತ್ತೀಯ ಸ್ಥಿತಿ ಹಣಕಾಸು ವಿಭಾಗದಲ್ಲಿ ನಿರ್ವಹಿಸಲಾಗುವ ವಿವಿಧ ಖಾತೆಗಳ ವಿವರ.(ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.3)	29–30	12	ಕೃಷಿ ವಿಶ್ವವಿದ್ಯಾಲಯ ಧಾರವಾಡ ಕಾಲೇಜು/ಮಹಾವಿದ್ಯಾಲಯಗಳ ಹಾಗೂ ಪಿ.ಜಿ.ಡಿಪ್ಲೋಮಾ ಕೋರ್ಸ್‌ಗಳ ವಿದ್ಯಾರ್ಥಿಗಳ 2017–18 ನೇ ಸಾಲಿನ ಪ್ರವೇಶಾತಿ ಶುಲ್ಕಗಳ ವಿವರ	36–37
5	ಹೆಚ್ಚಿನ ಹಣಕಾಸಿನ ವ್ಯವಹಾರವನ್ನು ವರ್ಷದ ಕೊನೆ ದಿನ ಅಂದರೆ ದಿ.31.03.2018 ರಂದು ನಡೆಸಿದ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.4)	31	13	ವಿಭಾಗದಲ್ಲಿ ನಿರ್ವಹಿಸಿರುವ Scale register ಹಾಜರುಪಡಿಸದೇ ಇರುವ ಕುರಿತು.(ಕುಲಸಚಿವರ ಕಛೇರಿ ಕಂ.ಸಂ.11}	38

ಪದ ಪುಂಜ ಸಂಖ್ಯೆ	ವಿವರ	ಪುಟ ಸಂ
14	ಶಿಕ್ಷಕೇತರ ಸಿಬ್ಬಂದಿಗಳಿಗೆ ಹಿಂದಿನಿಂದ ಕಾಲ್ಪನಿಕ ಬಡ್ತಿ ನೀಡಿ ನಿಯಮಬಾಹಿರವಾಗಿ ವೇತನ ನಿಗದಿಪಡಿಸಿರುವ ಕುರಿತು. (ಮುಂದುವರೆದ ಪ್ಯಾರಾ/2013–2014/2014–2015) (ಆಡಳಿತಾಧಿಕಾರಿಗಳ ಕಛೇರಿ ಕಂ.ಸಂ.6)	39–44
15	ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾದ ಕೃಷಿ ಕಾರ್ಮಿಕರ/ಸಿಬ್ಬಂದಿಗಳ ಶಾಸನಬದ್ಧ ವಂತಿಕೆಗಳನ್ನು EPF ಮತ್ತು ESIC ಖಾತೆಗಳಿಗೆ (ಆಯಾ ನೌಕರರ) ಜಮೆ ಮಾಡಿರುವ ಮಾಹಿತಿಯನ್ನು ಒದಗಿಸದೇ ಇರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.53)	45–46
16	1E-TDS Data conversion ಗಾಗಿ ಟೆಂಡರ್ ಕರೆಯದೇ ಕೇವಲ ಕೊಟೇಶನ್ ಕರೆದು ಪಾವತಿ ಮಾಡಿರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.24)	47
17	ಕಂಪ್ಯೂಟರ್‌ಗಳಿಗೆಸಂಬಂಧಿಸಿದಂತೆ Repair work, stationary antivirus ಇತ್ಯಾದಿಗಳ ಪೊರೈಕೆಗೆ ಒಟ್ಟಾರೆ ಟೆಂಡರ್ ಕರೆದು Rate contract ಮಾಡಿಕೊಳ್ಳದೆ ಬಿಲ್ಲುಗಳನ್ನು ವಿಂಗಡಿಸಿ ಖರೀದಿಸಿರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.27)	48
18	ಲೆಕ್ಕ ಶೀರ್ಷಿಕೆ -5419 DAC 300 2nd National Conference Of Genetics and Cytogenetics AC Dharawad ದಲ್ಲಿ ಆಹಾರ ಪೂರೈಕೆಗಾಗಿ ನಿರ್ವಹಿಸಿದ ಟೆಂಡರನಲ್ಲಿ ಕಂಡುಬಂದ ನ್ಯೂನತೆಗಳು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.28)	48–49
19	ಗುತ್ತಿಗೆ ಆಧಾರದ ಸಿಬ್ಬಂದಿಯನ್ನು ಟೆಂಡರ್ ಮೂಲಕ ನೇಮಿಸದೇ ಕೊಟೇಶನ್ ಮೂಲಕ ನೇಮಿಸಿಕೊಂಡಿರುವ ಕುರಿತು.	50
20	ಟೆಂಡರ್ ಕರೆಯದೇ ಪರಿಣಿತ ತಂತ್ರಜ್ಞರ ಸೇವೆಗಳನ್ನು ಪಡೆದಿರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.30)	51
21	ಟೆಂಡರ್ ಕರೆಯದೇ ಬ್ರೋಚರ್ಸ್‌ಗಳ ಮುದ್ರಣವನ್ನು ಕೋಟೇಶನ್ ಮೂಲಕ ನಿರ್ವಹಿಸಿದ ಕುರಿತು.(ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.31)	52
22	ಟೆಂಡರ್ ಕರೆಯದೇ ಬಿಲ್ಲುಗಳನ್ನು ವಿಂಗಡಿಸಿ ಸಂದಾಯ ಮಾಡಿದ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.32)	53
23	ಟೆಂಡರ್ ಕರೆಯದೆ ಬಿಲ್ಲುಗಳನ್ನು ವಿಭಜಿಸಿ ದರಪಟ್ಟಿ ಮೂಲಕ ಸೇವೆ ಪಡೆದಿರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.33)	54
24	ಟೆಂಡರ್ ಕರೆಯದೆ ದರಪಟ್ಟಿ ಮೂಲಕ ಮುದ್ರಣ ಸೇವೆ ಪಡೆದಿರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.34)	55
25	ಲೆಕ್ಕ ಶೀರ್ಷಿಕೆ 6803 ಅಡಿ ಖರ್ಚು ಭರಿಸಿದ ವೋಚರನಲ್ಲಿ ಕಂಡು ಬಂದ ನ್ಯೂನ್ಯತೆ (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.36)	56–57
26	(KTPP) ಕೆಟಿಪಿಪಿ ಕಾಯ್ದೆ 4 (ಇ) ಉಲ್ಲಂಘಿಸಿ ವಿವಿಧ ಸರಕು/ಸಾಮಗ್ರಿ ಖರೀದಿಸಿರುವ ಕುರಿತು (ಕುಲಸಚಿವರ ಕಛೇರಿ–ಕಂ.ಸಂ.16,17,21)	58
27	ಖರೀದಿ ಮತ್ತು ಸಂಗ್ರಹ ವಿಭಾಗದಿಂದ ನೀಡಲಾಗುವ ಪತ್ರಿಕಾ ಪ್ರಕಟಣೆಗಳನ್ನು ವಾರ್ತಾ ಇಲಾಖೆಯಿಂದ ಪ್ರಕಟಿಸದಿರುವ ಕುರಿತು. (ಸರಕು ಖರೀದಿ ಅಧಿಕಾರಿಗಳ ಕಛೇರಿ ಕಂ.ಸಂ.6)	59
28	CAMERA WITH ACCESSORIES NIKON/CANON ಖರೀದಿ ಪ್ರಕ್ರಿಯೆಯಲ್ಲಿ ಕಂಡು ಬಂದ ನ್ಯೂನ್ಯತೆ (ಸರಕು ಖರೀದಿ ಅಧಿಕಾರಿಗಳ ಕಛೇರಿ ಕಂ.ಸಂ.10)	60–61
29	E-8 Providing & fixing auditorium chairs for farmers knowledge centre at UAS DWD ಈ ಪ್ರಕ್ರಿಯೆಯಲ್ಲಿ ಕಂಡು ಬಂದ ನ್ಯೂನ್ಯತೆ ಕುರಿತು. (ಸರಕು ಖರೀದಿ ಅಧಿಕಾರಿಗಳ ಕಛೇರಿ ಕಂ.ಸಂ.11)	61

ಪದ ಪುಂಜ ಸಂಖ್ಯೆ	ವಿವರ	ಪುಟ ಸಂ
30	Tender file E(3) (audio visual system & stage lighting) ಪ್ರಕ್ರಿಯೆಯಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತು. (ಸರಕು ಖರೀದಿ ಅಧಿಕಾರಿಗಳ ಕಛೇರಿ ಕಂ.ಸಂ.14)	62
31	ಟೆಂಡರ್ ಪ್ರಕ್ರಿಯೆ E-7 ಅಡಿಯಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತು. (ಸರಕು ಖರೀದಿ ಅಧಿಕಾರಿಗಳ ಕಛೇರಿ ಕಂ.ಸಂ.17)	63–64
32	FT N/R spectrometer & software & additional accessories for FT N/R spectrometer ಖರೀದಿ ಪ್ರಕ್ರಿಯೆಯಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತು. (ಸರಕು ಖರೀದಿ ಅಧಿಕಾರಿಗಳ ಕಛೇರಿ ಕಂ.ಸಂ.18)	64–65
33	2017–18 ನೇ ಸಾಲಿನ ವಿವಿಧ ಉಪಕರಣಗಳ ಖರೀದಿಯಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತು. (ಸರಕು ಖರೀದಿ ಅಧಿಕಾರಿಗಳ ಕಛೇರಿ ಕಂ.ಸಂ.19)	66–68
34	ದರಪಟ್ಟಿ ಕರೆಯದೇ ನೇರವಾಗಿ ಸರಕು ಖರೀದಿಸಿರುವ ಕುರಿತು.(ಬಿ.ಎಸ್.ಪಿ/ಎನ್.ಎಸ್.ಪಿ ಕಂ.ಸಂ.26)	69
35	ಟೆಂಡರ್ ಕರೆಯದೆ ನೇರವಾಗಿ ಸರಕು ಖರೀದಿಸಿದ ಬಗ್ಗೆ (ತಳಿವರ್ಧಕ ಬೀಜ). (ಬಿ.ಎಸ್.ಪಿ/ಎನ್.ಎಸ್.ಪಿ ಕಂ.ಸಂ.29)	70–72
36	KTPP ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿ ಅನಿಯಮಿತವಾಗಿ ಗುತ್ತಿಗೆ ಕೃಷಿ ಕಾರ್ಮಿಕರ ವೇತನ ಖರ್ಚು ಭರಿಸಿದ ಕುರಿತು. (ಸಾವಯವ ಕೃಷಿ ಘಟಕ ಕಂ.ಸಂ.8)	72–73
37	2016–17 ರ Rate contract ಆಧಾರದ ಮೇಲೆ 2017–18 ರಂದು ಕೆಮಿಕಲ್ಸ್ ಖರೀದಿ ಕುರಿತು. (ಕೃಷಿ ಸಂಶೋಧನಾ ಕೇಂದ್ರ ಹೆಬ್ಬಳ್ಳಿ ಕಂ.ಸಂ.20)	73

ಪದ ಪುಂಜ ಸಂಖ್ಯೆ	ವಿವರ	ಪುಟ ಸಂ
38	ಟೆಂಡರ್ ಆಹ್ವಾನಿಸದೆ ದರಪಟ್ಟಿ ಮೂಲಕವಾಗಿ NOVEL TECH INC Bangalore ಇವರಿಗೆ ವೆಚ್ಚ ಪಾವತಿ ಕುರಿತು. (ಕೃಷಿ ಮಹಾವಿದ್ಯಾಲಯ ವಿಜಯಪುರ ಕಂ.ಸಂ.27)	74
39	Tender ಕರೆಯದೇ Quoatation ಆಧಾರದ ಮೇಲೆ Labour Service ಪಡೆದಿರುವ ಕುರಿತು. (ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ ವಿಜಯಪುರ ಕಂ.ಸಂ.19)	75
40	ಟೆಂಡರ್ ಕರೆಯದೆ ಕೊಟೇಶನ್ ಆಧಾರದ ಮೇಲೆ ಸಮೀಕ್ಷೆ ಕಾರ್ಯದ ಸೇವೆ ಪಡೆದಿರುವ ಕುರಿತು. (ಅರಣ್ಯ ಪದವಿ ಮಹಾವಿದ್ಯಾಲಯ ಶಿರಸಿ ಕಂ.ಸಂ.20)	76
41	ಟೆಂಡರ್ ಕರೆಯದೇ ದರಪಟ್ಟಿ ಆಧಾರದ ಮೇಲೆ ಗುತ್ತಿಗೆ ಕೆಲಸಗಾರರ ಸೇವೆಯನ್ನು ಪಡೆದಿರುವ ಕುರಿತು. (ಕೃಷಿ ಸಂಶೋಧನಾ ಕೇಂದ್ರ ಕೊಣ್ಣೂರು ಕಂ.ಸಂ.16)	77
42	ಟೆಂಡರ್ ಕರೆಯದೇ ದರಪಟ್ಟಿ ಆಧಾರದ ಮೇಲೆ ಕಾರ್ಮಿಕ ಸೇವೆಯನ್ನು ಪಡೆದ ಕುರಿತು. (ಕೃಷಿ ಸಂಶೋಧನಾ ಕೇಂದ್ರ ಸೌಂದಲಗಾ ಕಂ.ಸಂ.11)	78
43	2015–16ನೇ ಸಾಲಿನ ಮುದ್ರಣ ಕಾರ್ಯಕ್ಕಾಗಿ ಕರೆದ ಟೆಂಡರ್ ಪ್ರಕ್ರಿಯೆಯಲ್ಲಿ ಕಂಡುಬಂದ ನ್ಯೂನ್ಯತೆಗಳು. (ಪ್ರಕಟಣಾ ವಿಭಾಗ ಕಂ.ಸಂ.4)	79–80
44	ಪ್ರಕಟಣಾ ವಿಭಾಗದಲ್ಲಿ 2016–17ನೇ ಸಾಲಿನಲ್ಲಿ ಮುದ್ರಣಾ ಕಾರ್ಯಕ್ಕಾಗಿ ಕರೆದ ಟೆಂಡರ್ ಪ್ರಕ್ರಿಯೆಯಲ್ಲಿ ಕಂಡು ಬಂದ ನ್ಯೂನ್ಯತೆ.(ಪ್ರಕಟಣಾ ವಿಭಾಗ ಕಂ.ಸಂ.5)	80–81
45	ಕೆಟಿಪಿಪಿ ಕೊಟೇಶನ್ ಸ್ಪರ್ಧಾತ್ಮಕ ದರಪಟ್ಟಿ ಮೂಲಕ ಖರೀದಿಸಿದ/ಪಡೆದ ಸರಕು/ಸೇವೆಗಳ ಸಂಗ್ರಹಣಾ ಪ್ರಕ್ರಿಯೆಯಲ್ಲಿ ಕಂಡು ಬಂದ ನ್ಯೂನ್ಯತೆಗಳು.	82–83

ಪದ ಪುಂಜ ಸಂಖ್ಯೆ	ವಿವರ	ಪುಟ ಸಂ
46	ಕೊಟೇಶನ್ (ದರಪಟ್ಟಿ) ಕರೆಯದೇ ನೇರವಾಗಿ ಸರಕುಗಳನ್ನು ಖರೀದಿಸಿರುವ ಕುರಿತು. (ಬಿ.ಎಸ್.ಪಿ/ಎನ್.ಎಸ್.ಪಿ ಕಂ.ಸಂ.30)	84
47	ಕೋಟೇಶನ್ ಕರೆಯದೇ ನೇರವಾಗಿ ಸರಕು ಖರೀದಿಸಿದ ಕುರಿತು. (ಕೃಷಿ ಸಂಶೋಧನಾ ಕೇಂದ್ರ ಪ್ರಭುನಗರ ಕಂ.ಸಂ.13)	85
48	Konark enterprises ಅವರಿಂದ ಕೊಟೇಶನ್ ಆಧಾರದ ಮೇಲೆ ಖರೀದಿ ಕುರಿತು. (ಕೃಷಿ ಸಂಶೋಧನಾ ಕೇಂದ್ರ ಹೆಬ್ಬಳ್ಳಿ ಕಂ.ಸಂ.21)	86–87
49	ಸರ್ಧಾತ್ಮಕ ದರಪಟ್ಟಿ ಮೂಲಕ ಖರೀದಿಸಿದ/ಪಡೆದ ಸರಕು/ಸೇವೆಗಳ ಸಂಗ್ರಹಣಾ ಪ್ರಕ್ರಿಯೆಯಲ್ಲಿ ಕಂಡು ಬಂದ ನ್ಯೂನತೆಗಳ ಕುರಿತು. (ಕೃಷಿ ಸಂಶೋಧನಾ ಕೇಂದ್ರ ಮುಗದ ಕಂ.ಸಂ.14)	88–89
50	ಮೌಲ್ಯಮಾಪನ ಕಾರ್ಯಕ್ಕೆ ಬೋಧಕ ಸಿಬ್ಬಂದಿಗಳಿಗೆ ಸಂಭಾವನೆ ನೀಡಿರುವ ಕುರಿತು.(ಸ.ಹ.ನಿ–ವೈಯಕ್ತಿಕ ಖಾತೆ ಕಂ.ಸಂ.8)	90
51	ಹಾಜರಾತಿಯನ್ನು ದೃಢೀಕರಿಸದೆ ಅರೆಕಾಲಿಕ ಶಿಕ್ಷಕರಿಗೆ ಗೌರವ ಧನ ಪಾವತಿಸಿರುವ ಕುರಿತು.(ಕೃಷಿ ಮಹಾವಿದ್ಯಾಲಯ ವಿಜಯಪುರ ಕಂ.ಸಂ.28)	91
52	ABAC 6700/300 ಅಡಿ ಖರ್ಚು ಭರಿಸಿದ ವೋಚರಿನಲ್ಲಿ ಕಂಡುಬಂದ ನ್ಯೂನತೆ. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.46)	92
53	ಏಕ ಬಿಡ್ (single bid) ಅನ್ನು ಒಪ್ಪಿಕೊಂಡಿರುವ ಕುರಿತು. (ಆಸ್ತಿ ಅಧಿಕಾರಿಗಳ ಕಛೇರಿ ಕಂ.ಸಂ.19)	93–94
54	ಲೆಕ್ಕ ಶೀರ್ಷಿಕೆ 1655/300 ಅಡಿಯಲ್ಲಿ maintainance of buildings of UAS ಖರೀದಿಸಿದ ಸಾಮಗ್ರಿ/ರಿಪೇರಿ ಕೆಲಸಕ್ಕಾಗಿ ಯಾವುದೇ ಬೇಡಿಕೆ ಪತ್ರ ಪಡೆಯದಿರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.57)	94–95
55	ವಾರ್ಷಿಕ ಲೆಕ್ಕ ಪತ್ರ ಮತ್ತು ಮೈಗ್ರೇಷನ್ ಸರ್ಟಿಫಿಕೇಟ ರಿಜಸ್ಟರ ವ್ಯತ್ಯಾಸ ಕುರಿತು. (ಕುಲಸಚಿವರ ಕಛೇರಿ–ಕಂ.ಸಂ.19)	95
56	ವಾರ್ಷಿಕ ಭೌತಿಕ ಪರಿಶೀಲನೆ ವರದಿಯಲ್ಲಿ ಕಂಡು ಬಂದ ನ್ಯೂನ್ಯತೆ. (ವಿಸ್ತರಣಾ ನಿರ್ದೇಶಕರ ಕಛೇರಿ ಕಂ.ಸಂ.15)	96
57	ಹೆಚ್ಚಿನ ಪ್ರಮಾಣದಲ್ಲಿ ಡಿಸೇಲ್ ಖರೀದಿ ಮಾಡಿ ಸಂಗ್ರಹದಲ್ಲಿ ಇಟ್ಟಿರುವ ಕುರಿತು. (ಮುಖ್ಯ ಸಂಶೋಧನಾ ಕೇಂದ್ರ ಕಂ.ಸಂ.26)	96
58	ಹೆಚ್ಚಿನ ಪ್ರಮಾಣದಲ್ಲಿ ಡಿಸೇಲ್ ಖರೀದಿ ಮಾಡಿ ಸಂಗ್ರಹದಲ್ಲಿಟ್ಟಿರುವ ಕುರಿತು.(ಬಿ.ಎಸ್.ಪಿ/ಎನ್.ಎಸ್.ಪಿ ಕಂ.ಸಂ.18)	97–98
59	ಕೆಮಿಕಲ್ಸ್ ಒಂದೇ ದಿನ ಖರೀದಿ ಮಾಡಿ ಒಂದೇ ದಿನ ವಿತರಣೆ ಮಾಡಿರುವ ಕುರಿತು. (ಮುಖ್ಯ ಸಂಶೋಧನಾ ಕೇಂದ್ರ ಕಂ.ಸಂ.31)	99
60	ವಿವಿಧ ಅಳತೆಯ ಬೀಜ ಚೀಲಗಳ ಲೆಕ್ಕದ ರಜಿಸ್ಟರ ನಿರ್ವಹಿಸಿರದೆ ಇರುವ ಕುರಿತು. (ಬಿ.ಎಸ್.ಪಿ/ಎನ್.ಎಸ್.ಪಿ ಕಂ.ಸಂ.34)	99–100
61	Biofertilizer packing plastic bottles ಖರೀದಿಸಿ ಸ್ಟಾಕ್‌ನಲ್ಲಿಯೇ ಇಟ್ಟಿರುವ ಬಗ್ಗೆ.(ಸಾವಯವ ಕೃಷಿ ಕಂ.ಸಂ.9)	101–102
62	ಪಾಲಿಥಿನ್ ಬ್ಯಾಗ್‌ಗಳನ್ನು ಖರೀದಿಸಿ ಬಳಕೆ ಮಾಡದಿರುವ ಕುರಿತು ABAC-7201 (ಕೃಷಿ ಸಂಶೋಧನಾ ಕೇಂದ್ರ ಅಣ್ಣಿಗೇರಿ ಕಂ.ಸಂ.9)	102
63	ABAC 6878 ಗೆ ಸಂಬಂಧಿಸಿದ ಖರ್ಚಿನ ವೋಚರಗಳಲ್ಲಿ ಕಂಡು ಬಂದ ನ್ಯೂನ್ಯತೆ. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.58)	103–104
64	ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ವಾಹನ ದುರಸ್ಥಿಗೆ ಅನುಮತಿ ಪಡೆಯದೆ ಇರುವ ಕುರಿತು.	105
65	ಸಂಕ್ಷಿಪ್ತ ಸಾದಿಲ್ವಾರ ಬಿಲ್ಲು ಲೆಕ್ಕ (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.15)	106–107

ಪದ ಪುಂಜ ಸಂಖ್ಯೆ	ವಿವರ	ಪುಟ ಸಂ
66	ಸಂಕ್ಷಿಪ್ತ ಸಾದಿಲ್ವಾರು ಬಿಲ್‌ಗಳ ಹೊಂದಾಣಿಕೆಯಲ್ಲಿ ಒಂದು ತಿಂಗಳಿಗಿಂತ ಹೆಚ್ಚಿನ ಸಮಯ ತೆಗೆದುಕೊಂಡು ಹೊಂದಾಣಿಕೆ ಮಾಡಿರುವ ಕುರಿತು.	107
67	ಖರ್ಚು ಭರಿಸಲು ರೂ.2,00,000/– ಗಿಂತ ಮೀರಿದ ಸಂಕ್ಷೀಪ್ತ ಸಾದಿಲ್ವಾರು ಬಿಲ್‌ಗಳನ್ನು ತೆಗೆದ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.15.2)	108
68	ಶಿಕ್ಷಕೇತರ ಸಿಬ್ಬಂದಿಗಳಿಗೆ ಹಿಂದಿನಿಂದ ಕಾಲ್ಪನಿಕ ಬಡ್ತಿ ನೀಡಿ ನಿಯಮಬಾಹಿರವಾಗಿ ವೇತನ ನಿಗದಿಪಡಿಸಿರುವ ಕುರಿತು. Notional(ಪಿಂಚಣಿ ನಿಧಿ ಕಂ.ಸಂ.6)	109–110
69	ಬೋಧಕ ಸಿಬ್ಬಂದಿಗಳಿಗೆ ದಿನಾಂಕ 01.01.1996ರ ವಾರ್ಷಿಕ ವೇತನ ಬಡ್ತಿ ನಿಗದಿ ತಪ್ಪಾಗಿರುವ ಕುರಿತು.(ಮುಂದುವರೆದ ಪ್ಯಾರಾ) (ಪಿಂಚಣಿ ನಿಧಿ ಕಂ.ಸಂ.7)	111–112
70	ಶ್ರೀ. ಇಸ್ಮಾಯಿಲ್ ಐ. ಟಪಾಲ, ನಿವೃತ್ತ ಹಿರಿಯ ಮಾಲಿ ಇವರು ಮಾಲಿ ಹುದ್ದೆಯಿಂದ ಹಿರಿಯ ಮಾಲಿ ಹುದ್ದೆಗೆ ಪದೋನ್ನತಿ ಹೊಂದ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ವೇತನ ನಿಗದಿಗೊಳಿಸದೇ ಇರುವ ಕುರಿತು.(ಮುಂದುವರೆದ ಪ್ಯಾರಾ) (ಪಿಂಚಣಿ ನಿಧಿ ಕಂ.ಸಂ.9)	113–114
71	ಮುಂದುವರೆದ ಕಂಡಿಕೆ: ಶ್ರೀಯುತ ಎನ್.ಎಸ್. ಗಲಗಲಿ ಇವರಿಗೆ ಅನಿಯಮಿತವಾಗಿ ಇಲಾಖಾ ಪರೀಕ್ಷೆಗೆ ಹೆಚ್ಚುವರಿ ವೇತನ ಬಡ್ತಿ ನೀಡಿದ್ದು ಹಾಗೂ ಹೊಸ ವೇತನ ಶ್ರೇಣಿಯಲ್ಲಿ ತಪ್ಪು ವೇತನ ಹಾಗೂ ಪಿಂಚಣಿ ನಿಗದಿ.(ಪಿಂಚಣಿ ನಿಧಿ ಕಂ.ಸಂ.10)	115
72	ಮುಂದುವರೆದ ಕಂಡಿಕೆ: ಶ್ರೀಯುತ ಆರ್.ಜಿ. ಮರಕಟ್ಟಿ ಇವರಿಗೆ ಅನಿಯಮಿತವಾಗಿ ಇಲಾಖಾ ಪರೀಕ್ಷೆಗೆ ಹೆಚ್ಚುವರಿ ವೇತನ ಬಡ್ತಿ ನೀಡಿದ್ದು ಹಾಗೂ ಹೊಸವೇತನ ಶ್ರೇಣಿಯಲ್ಲಿ ತಪ್ಪು ವೇತನ ನಿಗದಿಪಡಿಸಿರುವ ಕುರಿತು.(ಮುಂದುವರೆದ ಪ್ಯಾರಾ) (ಪಿಂಚಣಿ ನಿಧಿ ಕಂ.ಸಂ.11)	116–117
73	ಮುಂದುವರೆದ ಕಂಡಿಕೆ: ಶಿಕ್ಷಕೇತರ ಸಿಬ್ಬಂದಿಗಳಿಗೆ ಹಿಂದಿನಿಂದ ಕಾಲ್ಪನಿಕ ಬಡ್ತಿ ನೀಡಿ ನಿಯಮಬಾಹಿರವಾಗಿ ವೇತನ ನಿಗದಿಪಡಿಸಿ ಪಿಂಚಣಿ ನೀಡಿರುವ ಕುರಿತು.(ಮುಂದುವರೆದ ಪ್ಯಾರಾ) (ಪಿಂಚಣಿ ನಿಧಿ ಕಂ.ಸಂ.12)	118–119
74	ಅನುಪಯುಕ್ತ ಪುಸ್ತಕಗಳ ವಿಲೇವಾರಿ ನಂತರ ಉಳಿಕೆ ಪುಸ್ತಕಗಳನ್ನು ಸಂಗ್ರಹ ರಜಿಸ್ಟರ್‌ನಲ್ಲಿ ಮತ್ತು physical stock verification ಎರಡರಲ್ಲೂ ನಮೂದಿಸಿರುವ ಕುರಿತು. (ಪ್ರಕಟಣಾ ವಿಭಾಗ ಕಂ.ಸಂ.11)	120
75	ಸುಧಾರಿತ ಬೇಸಾಯ ಕ್ರಮಗಳು (POP) ಮರುಮುದ್ರಣದಲ್ಲಿ ಕಂಡು ಬಂದ ನ್ಯೂನ್ಯತೆ. (ಪ್ರಕಟಣಾ ವಿಭಾಗ ಕಂ.ಸಂ.14)	121–122
76	ನಿಯತಕಾಲಿಕೆಗಳು ನಿಗದಿತವಾಗಿ ಸ್ವೀಕೃತಿಯಾಗದಿರುವ ಕುರಿತು(ಗ್ರಂಥಾಲಯ ಕಂ.ಸಂ.6)	123
77	ಲೆಕ್ಕ ಶೀರ್ಷಿಕೆ 5604 DST-FIST Project ಅಡಿಯ ಖರ್ಚಿನಲ್ಲಿ ನ್ಯೂನತೆಗಳು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.42)	123–125
78	AbAc 8417 ಯೋಜನೆಯ Utilisation Certificate ಹಾಜರುಪಡಿಸುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.43)	126–127
79	AbAc 8417/310 ರಡಿ Senior Reaserch Fellow On contract basis ನಡಿ ಶ್ರೀ ಈಶ್ವರ ಹೆಚ್ ಬೂದಿ ಇವರಿಗೆ 01.04.2017 ರಿಂದ 30.06.2017 ವರೆಗೆ ರೂ.81,583.00 ಗಳ ವೇತನ ಪಾವತಿಯಲ್ಲಿ ಕಂಡು ಬಂದ ನ್ಯೂನತೆ. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.44)	128
80	AbAc -8248 ರ Project ನ ಮಾರ್ಗಸೂಚಿ ಸಂಬಂಧಪಟ್ಟ ದಾಖಲೆ ಹಾಜರುಪಡಿಸುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.49)	129
81	Genetic dissection of heat tolerance using bulked segregant RNA sequencing in Ground nut ಈ ಖಾತೆಗೆ ಮಂಜೂರಾದ ಅನುದಾನವನ್ನು Funding Agency ಯವರು ತಿಳಿಸಿದಂತೆ ಪ್ರತ್ಯೇಕ ಖಾತೆಯಲ್ಲಿ (ಬಡ್ಡಿ ಬರುವ) ಜಮೆ ಮಾಡದಿರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.50)	130

ಪದ ಪುಂಜ ಸಂಖ್ಯೆ	ವಿವರ	ಪುಟ ಸಂ
82	establishment of digital dying ,printing centre for export promotion of textile by UAS DWD ಈ ಯೋಜನೆ ಮುಂದುವರಿಕೆಗೆ ಅನುಮತಿ ಪಡೆಯದಿರುವ ಕುರಿತು. (ಗ್ರಾಮೀಣ ಗೃಹ ವಿಜ್ಞಾನ ಮಹಾವಿದ್ಯಾಲಯ ಕಂ.ಸಂ.27)	131
83	BIO GAS SCHEME head 7261 AUC (audited utilization certificate) ಪ್ರಕಾರ ಅಂತಿಮ ಶಿಲ್ಕು ಋಣಾತ್ಮಕವಾಗಿರುವ ಕುರಿತು. (ಮುಖ್ಯ ಸಂಶೋಧನಾ ಕೇಂದ್ರ ಕಂ.ಸಂ.18)	131–132
84	chick pea project ನಲ್ಲಿ ಕಂಡು ಬಂದ ನ್ಯೂನ್ಯತೆಗಳು (ಕಡಲೆ) (ಮುಖ್ಯ ಸಂಶೋಧನಾ ಕೇಂದ್ರ ಕಂ.ಸಂ.27)	132–133
85	2017–18 ನೇ ಸಾಲಿನಲ್ಲಿ SCP ಹಾಗೂ TSP ಯೋಜನೆಗಳಡಿ ಅನುದಾನಗಳ ಖರ್ಚಿನ ಕುರಿತು ನ್ಯೂನ್ಯತೆಗಳ ಬಗ್ಗೆ. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.19)	133–134
86	2017–18 ನೇ ಸಾಲಿನಲ್ಲಿ SCP ಹಾಗೂ TSP ಯೋಜನೆ ಅಡಿ ಲ್ಯಾಪಟಾಪಗಳ ಖರೀದಿಗಳಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.20)	134–135
87	ಲೆಕ್ಕ ಶಿರ್ಷಿಕೆ 3698 ಎಸ್.ಸಿ.ಪಿ/ಟಿ. ಎಸ್.ಪಿ ಯೋಜನೆಯಡಿ ಅನುದಾನಗಳ ವೆಚ್ಚಗಳ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.21)	136
88	ಲೆಕ್ಕ ಶಿರ್ಷಿಕೆ 3814 ಹಾಗೂ 3815 ಯೋಜನೆ ಅಡಿ 2017–18 ರ ಬಜೆಟ್‌ನಲ್ಲಿ ಕಂಡು ಬಂದ ನ್ಯೂನತೆ (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.22)	137
89	TDS ಕಟಾಯಿಸದೇ ಇರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.71)	137–138
90	ಶ್ರೀ.ಎಮ್.ಕೆ.ಕುಳ್ಳೇಗೌಡ ಇವರಿಗೆ ನೀಡಿರುವ ಗೌರವ ಧನಕ್ಕೆ IT.R.194 (J) ಪ್ರಕಾರ TDS ಕಟಾವಣೆ ಮಾಡದಿರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.72)	138–139
91	ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಪಡೆದು ಭೂಮಾಪಕರ ಹುದ್ದೆಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿರುವ ಕುರಿತು ಮತ್ತು ಇವರ ವೇತನದಲ್ಲಿ ವೃತ್ತಿ ತೆರಿಗೆಯನ್ನು ಕಟಾಯಿಸದಿರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.73)	140
92	ಲೆಕ್ಕಶೀರ್ಷಿಕೆ 1451/300 ಅಡಿಯಲ್ಲಿ Property tax ಭರಣಾ ಮಾಡಿದ್ದು ಪಾವತಿಯಲ್ಲಿ ಕಂಡು ಬಂದ ನ್ಯೂನ್ಯತೆಗಳು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.74)	141
93	ಟಿಡಿಎಸ್(TDS) ಕಟಾಯಿಸಿದ ದಾಖಲೆಗಳನ್ನು ಒದಗಿಸುವ ಕುರಿತು. (ಕುಲಸಚಿವರ ಕಛೇರಿ–ಕಂ.ಸಂ.18)	142
94	Icome tax rule 194(c) ಮೂಲದಲ್ಲಿಯೇ TDS ಕಟಾಯಿಸದೇ ಇರುವ ಕುರಿತು. (ಸ.ಹ.ನಿ–ವೈಯಕ್ತಿಕ ಖಾತೆ ಕಂ.ಸಂ.10)	143–144
95	2017–18 ನೇ ಸಾಲಿನಲ್ಲಿ ಸಾಮಾನ್ಯ ಭವಿಷ್ಯ ನಿಧಿಯಿಂದ ತೊಡಗಿಸಿದ ಮುದ್ದತ್ ಠೇವಣಿಗಳಿಗೆ bank confirmation ಪಡೆದಿರುವ ಕುರಿತು ಮತ್ತು ಬ್ಯಾಂಕ್‌ನಲ್ಲಿ TDS ಕಟಾವಣೆ ಮಾಡಿರುವ ಕುರಿತು. ಸಾಮಾನ್ಯ ಭವಿಷ್ಯ ನಿಧಿ ಕಂ.ಸಂ.5)	144
96	ಆದಾಯ ತೆರಿಗೆ ಕಟಾವಣೆ ಮಾಡದಿರುವ ಕುರಿತು. (ಕೃಷಿ ಸಂಶೋಧನಾ ಕೇಂದ್ರ ಪ್ರಭುನಗರ ಕಂ.ಸಂ.15)	145
97	ಬಿತ್ತನೆ ಬೀಜಗಳನ್ನು ಬಲ್ಕ್ ಆಗಿ ಮಾರಾಟ ಮಾಡಿದ ಕುರಿತು. (ಬಿ.ಎಸ್.ಪಿ/ಎನ್.ಎಸ್.ಪಿ ಕಂ.ಸಂ.36)	146–147
98	2017–18 ನೇ ಸಾಲಿನ ಲೆಕ್ಕ ಪರಿಶೋಧನೆ ಅಡಿಯಲ್ಲಿ ಗೋಡಂಬಿ ಬೀಜ ಮಾರಾಟ ಮಾಡಿರುವ ಮೊತ್ತ ರೂ.19,780/–(ಕೃಷಿ ವಿಜ್ಞಾನ ಕೇಂದ್ರ ಶಿರಸಿ ಕಂ.ಸಂ.28)	148
99	2017–18 ನೇ ಸಾಲಿನ ಭತ್ತದ ಒಣ ಹುಲ್ಲು ಹರಾಜು ಮಾಡಿರುವ ಕುರಿತು. (ಕೃಷಿ ವಿಜ್ಞಾನ ಕೇಂದ್ರ ಶಿರಸಿ ಕಂ.ಸಂ.33)	148

ಪದ ಪುಂಜ ಸಂಖ್ಯೆ	ವಿವರ	ಪುಟ ಸಂ
100	ಕೃಷಿ ಸಂಶೋಧನಾ ಕೇಂದ್ರ ಅಣ್ಣಿಗೇರಿ ಘಟಕದ ಜಮೀನನ್ನು ಭೂ ಸ್ವಾಧೀನ ಪಡೆಸಿಕೊಂಡ ಕುರಿತು.(ಕೃಷಿ ಸಂಶೋಧನಾ ಕೇಂದ್ರ ಅಣ್ಣಿಗೇರಿ ಕಂ.ಸಂ.19)	149
101	ನಗದು ರೂಪದಲ್ಲಿ ಸಂಭಾವನೆ, ಊಟದ ವೆಚ್ಚ, ದಿನಭತ್ಯೆಗಳನ್ನು ಪಾವತಿಸಿದ ಕುರಿತು.	149–151
102	ನಿವ್ವಳ ವೇತನಕ್ಕಿಂತ 50% ಜಾಸ್ತಿ ಕಟಾವು ಮಾಡಿ ಗೃಹ ನಿರ್ಮಾಣ ಸಾಲ ನೀಡಿರುವುದು. (ಗೃಹ ನಿರ್ಮಾಣ ಮತ್ತು ವಾಹನ ಮುಂಗಡ ಕಂ.ಸಂ.5)	152
103	2017–18 ನೇ ಸಾಲಿನಲ್ಲಿ ವಿಶ್ವವಿದ್ಯಾಲಯದಿಂದ ಮತ್ತು ಸರ್ಕಾರದಿಂದ ವಸತಿ ನಿಲಯದ ವಿದ್ಯಾರ್ಥಿನಿಯರಿಗೆ ಊಟದ ವೆಚ್ಚಕ್ಕಾಗಿ ಮಂಜೂರಾದ ಮೊತ್ತ ಮತ್ತು ವೆಚ್ಚದ ವಿವರಗಳನ್ನು ಒದಗಿಸುವ ಕುರಿತು. (ಗ್ರಾಮೀಣ ಗೃಹ ವಿಜ್ಞಾನ ಮಹಾವಿದ್ಯಾಲಯ ಧಾರವಾಡ ಕಂ.ಸಂ.25)	153
104	Supply order ನಲ್ಲಿ ನೀಡಿದ ದಿನಾಂಕವನ್ನು SPO ಅವರು ತಮ್ಮ ಹಂತದಲ್ಲಿಯೇ ತಿದ್ದುಪಡಿ ಮಾಡಿ filing ಮಾಡಿರುವ ಕುರಿತು. (ಸರಕು ಖರೀದಿ ಅಧಿಕಾರಿಗಳ ಕಛೇರಿ ಕಂ.ಸಂ.16)	154–155
105	ಎಬಿಎಸಿ 6700 ರಲ್ಲಿ ಅಭಿಯಂತರರಿಂದ estimate workdone ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುವ ಕುರಿತು. (Genetics and Plant Breeding department) (ಮುಖ್ಯ ಸಂಶೋಧನಾ ಕೇಂದ್ರ ಕಂ.ಸಂ.23)	155
106	ABAC 3210 DAC 541 MARS ವಿಭಾಗದಲ್ಲಿ ಕಡಿಮೆ ಇಳುವರಿ ಬಂದ ಬಗ್ಗೆ. (ಮುಖ್ಯ ಸಂಶೋಧನಾ ಕೇಂದ್ರ ಕಂ.ಸಂ.28)	156–157
107	ಮಂಜೂರಾತಿ ಆದೇಶದ ವ್ಯತಿರಿಕ್ತವಾಗಿ ಬೇರೆ ಅಳತೆಯ ಬ್ಯಾಗ್‌ಗಳನ್ನು ಖರೀದಿಸಿದ ಕುರಿತು.(ಬಿಎಸ್‌ಪಿ/ಎನ್‌ಎಸ್‌ಪಿ ಘಟಕ ಕಂ.ಸಂ.20)	158–159
108	ಮಂಜೂರಾತಿ ಆದೇಶದ ವ್ಯತಿರಿಕ್ತವಾಗಿ ಬೇರೆ ಅಳತೆಯ ಬ್ಯಾಗ್‌ಗಳನ್ನು ಖರೀದಿಸಿದ ಕುರಿತು (ಬೀಜೋತ್ಪಾದನೆ). (ಬಿಎಸ್‌ಪಿ/ಎನ್‌ಎಸ್‌ಪಿ ಘಟಕ ಕಂ.ಸಂ.28)	160–161
109	ಸುಧಾರಿತ ಬೇಸಾಯ ಕ್ರಮಗಳ ಪ್ರಕಾರ ಇಳುವರಿ ಬಂದ ಕುರಿತು. (ಬಿಎಸ್‌ಪಿ/ಎನ್‌ಎಸ್‌ಪಿ ಘಟಕ ಕಂ.ಸಂ.31)	162–163
110	ಕಾರ್ಮಿಕರ ಭವಿಷ್ಯನಿಧಿ ಸಂಘಟನೆ ಉಪಕ್ಷೆತ್ರೀಯ ಕಛೇರಿ ಹುಬ್ಬಳ್ಳಿ ಇವರು ರೂ.2,97,214/– ಗಳನ್ನು ನೇರವಾಗಿ ಬ್ಯಾಂಕ್‌ನಿಂದ ತಮ್ಮ ಖಾತೆಗೆ ವರ್ಗಾಯಿಸಿಕೊಂಡಿರುವ ಕುರಿತು. (ಕೃಷಿ ಸಂಶೋಧನಾ ಕೇಂದ್ರ ಹನುಮನಮಟ್ಟಿ ಕಂ.ಸಂ.10)	164
111	2017–18 ನೇ ಸಾಲಿನಲ್ಲಿ All India tour programme ಗಳಿಗಾಗಿ ಪಡೆದ ಮುಂಗಡ ಹೊಂದಾಣಿಕೆ ವೋಚರ್‌ಗಳಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತು. (ಕೃಷಿ ಮಹಾವಿದ್ಯಾಲಯ ವಿಜಯಪುರ ಕಂ.ಸಂ.24)	165–169
112	STATE STUDY TOUR OF III Year ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ನಗದು ರೂಪದಲ್ಲಿ ಪಾವತಿಸಿರುವ ಕುರಿತು & ಇತರೆ ನ್ಯೂನ್ಯತೆಗಳು (28.11.2017–09.12.2017) (30.11.2017–11.12.2017) (ಕೃಷಿ ಮಹಾವಿದ್ಯಾಲಯ ವಿಜಯಪುರ ಕಂ.ಸಂ.25)	170–172
113	ಕೃವಿವಿಯ ವಸತಿ ಗೃಹಗಳ ಹಂಚಿಕೆ ಮತ್ತು ಬಾಡಿಗೆಯಲ್ಲಿ ಕಂಡು ಬಂದ ನ್ಯೂನ್ಯತೆಗಳು. (ಕೃಷಿ ಮಹಾವಿದ್ಯಾಲಯ ವಿಜಯಪುರ ಕಂ.ಸಂ.29)	173
114	ವಿದ್ಯಾರ್ಥಿಗಳಿಗೆ ಮಂಜೂರಾದ ಶಿಷ್ಯವೇತನದಲ್ಲಿ ವಿದ್ಯಾರ್ಥಿನಿಲಯಕ್ಕೆ ಊಟಕ್ಕೆ ಮಂಜೂರಾದ ಮೊತ್ತವನ್ನು ಮಾತ್ರ ಪಾವತಿಸದೆ ವಿದ್ಯಾರ್ಥಿನಿಲಯದ ಬಾಡಿಗೆ ಖಾತೆಗೆ ಜಮೆ ಮಾಡಿ ಖರ್ಚು ಮಾಡಿರುವ ಕುರಿತು. (ಕೃಷಿ ಮಹಾವಿದ್ಯಾಲಯ ವಿಜಯಪುರ ಕಂ.ಸಂ.32)	174
115	ಕಂಪನಿ ಬ್ರ್ಯಾಂಡ್ ಹೆಸರನ್ನು ನಮೂದಿಸಿ ಖರೀದಿ ಮಾಡಿರುವ ಕುರಿತು. (ಅರಣ್ಯ ಪದವಿ ಮಹಾವಿದ್ಯಾಲಯ ಶಿರಸಿ ಕಂ.ಸಂ.15)	175

ಪದ ಪುಂಜ ಸಂಖ್ಯೆ	ವಿವರ	ಪುಟ ಸಂ
116	FLD/OFT, TFS modale ಯೋಜನೆಯನ್ನು ಒಂದೇ ಹಳ್ಳಿಯಲ್ಲಿ ಮುಂದುವರಿಸಿರುವ ಕುರಿತು. (ಕೃಷಿ ವಿಜ್ಞಾನ ಕೇಂದ್ರ ಶಿರಸಿ ಕಂ.ಸಂ.19)	**176**
117	ಕಂಪನಿಯ ಬ್ರಾಂಡ್ ಹೆಸರನ್ನು ನಮೂದಿಸಿ ಕೊಟೇಶನ್ ಕರೆದಿರುವ ಕುರಿತು. (ಕೃಷಿ ವಿಜ್ಞಾನ ಕೇಂದ್ರ ಶಿರಸಿ ಕಂ.ಸಂ.25)	**177**

ಪದ ಪುಂಜ ಸಂಖ್ಯೆ	ವಿವರ	ಪುಟ ಸಂ
118	ವೈದ್ಯಕೀಯ ವೆಚ್ಚಗಳ ಮರುಪಾವತಿಸುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.78)	**178–180**
119	RKVY Project ಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸದೆ ಇರುವ ಬಗ್ಗೆ. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.77)	**181**

ಕೃಷಿ ವಿಶ್ವವಿದ್ಯಾಲಯ, ಧಾರವಾಡ

ದಿ. 01.04.2017 ರಿಂದ 31.03.2018 ರ ಅವಧಿಯ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗೆ ಅನುಸರಣೆಗಳು

ಭಾಗ–1

ಕಂಡಿಕೆ ಸಂ.	ಆಕ್ಷೇಪಣೆಯ ವಿವರಗಳು	ಅನುಸರಣೆಗಳು
	ಲೆಕ್ಕ ಪರಿಶೋಧನಾ ವರದಿಯ ವಿವರ	
1	**ಲೆಕ್ಕ ಪರಿಶೋಧನಾ ವರದಿ ನೀಡಲು ಪ್ರಾಧಿಕಾರ:–** ಆದೇಶ ಸಂ. ಎಚ್ ಡಿ.65 ಎ ಯು ದಿ. 09.09.1986 ರನ್ವಯ ಕೃಷಿ ವಿಶ್ವವಿದ್ಯಾಲಯ ಧಾರವಾಡ ದಿ.01.10.1986 ರಿಂದ ಅಸ್ತಿತ್ವಕ್ಕೆ ಬಂದಿರುವುದು. ಪ್ರಸ್ತುತ 2017–18 ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು 1963 ರ ಕರ್ನಾಟಕ ಕೃಷಿ ವಿಶ್ವವಿದ್ಯಾಲಯಗಳ ಅಧಿನಿಯಮದ 36 ಹಾಗೂ 38 ರಲ್ಲಿಯ ನಿರ್ದೇಶನದಂತೆ ಸರ್ಕಾರದ ಆದೇಶಕ್ಕೊಳಪಟ್ಟು, ವಿಶ್ವ ವಿದ್ಯಾಲಯದಿಂದ ನಿರ್ವಹಿಸಲ್ಪಟ್ಟ ಎಲ್ಲಾ ನಿಧಿಗಳ ಹಾಗೂ ಇದರ ಆಧೀನದಲ್ಲಿ ಬರುವ ಒಟ್ಟು 68 ಘಟಕ/ಕಛೇರಿಗಳ ಲೆಕ್ಕ ಪರಿಶೋಧನೆಯನ್ನು ಕೈಗೆತ್ತಿಕೊಳ್ಳಲಾಯಿತು. ಈ ಕುರಿತಂತೆ ವಿಶ್ವವಿದ್ಯಾಲಯದಲ್ಲಿ ನಿರ್ವಹಿಸಲ್ಪಟ್ಟ ಎಲ್ಲಾ ನಿಧಿಗಳ ಹಾಗೂ ಘಟಕಗಳ ಲೆಕ್ಕ ಪರಿಶೋಧನಾ ವರದಿಗಳನ್ನು ಪ್ರತ್ಯೇಕವಾಗಿ ಬಿಡುಗಡೆ ಮಾಡಲಾಗಿದೆ. ಮೇಲೆ ಹೇಳಿದ ಕರ್ನಾಟಕ ಕೃಷಿ ವಿಶ್ವವಿದ್ಯಾಲಯಗಳ ಅಧಿನಿಯಮ ಅನುಚ್ಛೇದ 38 ರಲ್ಲಿಯ ನಿರ್ದೇಶನದಂತೆ ಈ ಲೆಕ್ಕ ಪರಿಶೋಧನಾ ವರದಿ ಹಾಗೂ ಈ ಕುರಿತಂತೆ ತೆಗೆದುಕೊಳ್ಳಲಾಗುವ ಅನುಸರಣಾ ವರದಿಯನ್ನು ಆಡಳಿತ ಮಂಡಳಿಗೊಪ್ಪಿಸಿ, ಇದರ ಮಂಜೂರಾತಿಯೊಂದಿಗೆ ಸರಕಾರಕ್ಕೆ ಸಲ್ಲಿಸುವ ಏರ್ಪಾಡು ಮಾಡುವುದು.	**1** ಅನುಸರಣೆ ಅವಶ್ಯವಿರುವುದಿಲ್ಲ ಕೃಷಿ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕ ಪತ್ರ ಮತ್ತು ವಾರ್ಷಿಕ ಲೆಕ್ಕ ಪರಿಶೋಧನೆಯ ಅನುಸರಣೆಯನ್ನು ಕೃಷಿ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಹಾಗೂ ವ್ಯವಸ್ಥಾಪನಾ ಮಂಡಳಿಯಲ್ಲಿ ಮಂಡಿಸಿ ಒಪ್ಪಿಗೆ ಪಡೆದು ಸರಕಾರಕ್ಕೆ ಸಲ್ಲಿಸಲಾಗುವುದು
2	**ಲೆಕ್ಕಪರಿಶೋಧನಾ ಕಾರ್ಯದಲ್ಲಿ ಈ ಕೆಳಗಿನ ಕಾಯ್ದೆ ಹಾಗೂ ನಿಯಮಾವಳಿಗಳನ್ನು ಆದರಿಸಿಕೊಳ್ಳಲಾಗಿದೆ.** 1963 ರ ಕರ್ನಾಟಕ ಕೃಷಿ ವಿಶ್ವವಿದ್ಯಾಲಯಗಳ ಅಧಿನಿಯಮದ 36 ಹಾಗೂ 38 ರನ್ವಯ ವಿಶ್ವವಿದ್ಯಾಲಯಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಗಮನದಲ್ಲಿರಿಸಿಕೊಂಡು ವಿಶ್ವವಿದ್ಯಾಲಯದ ಲೆಕ್ಕಪರಿಶೋಧನಾ ಕಾರ್ಯವನ್ನು ಕೈಕೊಳ್ಳಲಾಗಿದೆ. ಈ ಕಾರ್ಯದಲ್ಲಿ Statute adopting KCSR/KFC & MCE Providing TA/DA financial scheme & Purchase etc rule of Agricultural university Dharwadಈ ಶಾಸನ ಹಾಗೂ ಈ ಕೆಳಗಿನ ಕಾಯ್ದೆ ಮತ್ತು ನಿಯಮಾವಳಿಗಳನ್ನು	**2** ಸಲಹೆಗಳನ್ನು ಅಳವಡಿಸಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು

	ಆಧರಿಸಿಕೊಳ್ಳಲಾಗಿದೆ. 1) ಕೃಷಿ ವಿಶ್ವವಿದ್ಯಯಾಲಯ ಕಾಲಕಾಲಕ್ಕೆ ಹೊರಡಿಸಿದ ಅನುಶಾಸನಗಳು, ಆಧ್ಯಾದೇಶಗಳು, ಪರಿನಿಯಮಗಳು 2) ಕರ್ನಾಟಕ ಆರ್ಥಿಕ ಸಂಹಿತೆ 1958. 3) ಸಾದಿಲ್ವಾರು ವೆಚ್ಚದ ಕೈಪಿಡಿ 1958. 4) ಕರ್ನಾಟಕ ಬಜೆಟ್ ಕೈಪಿಡಿ 5) ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಸಿಸಿಎ ನಿಯಮಾವಳಿಗಳು ಇತ್ಯಾದಿ. 6) ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ. 7) ಕರ್ನಾಟಕ ಲೋಕೋಪಯೋಗಿ ಲೆಕ್ಕಪತ್ರ ಸಂಹಿತೆ. 8) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000. 9) ಸರಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ಆದೇಶಗಳು ಹಾಗೂ ಸುತ್ತೋಲೆಗಳು. 10) ಸಾಮಾನ್ಯ ಆರ್ಥಿಕ ನಿಯಮಗಳು (ಜಿಎಫ್ಆರ್)2005 ರಾಜ್ಯ ಮತ್ತು ಕೇಂದ್ರದ ಯೋಜನೆಗಳ ಅನುದಾನಗಳು 11) ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ 2002 ತತ್ಸಮಬದ್ಧ ನಿಯಮಗಳು 2003 (ಕರ್ನಾಟಕ ಫಿಸ್ಕಲ್ ರೆಸ್ಪಾನ್ಸಿಬಿಲಿಟಿ ಆ್ಯಕ್ಟ್) ಮೈಸೂರು ಸ್ಥಳೀಯ ನಿಧಿಗಳ ಲೆಕ್ಕಪರಿಶೋಧನಾ ಕೈಪಿಡಿಯ ಕಂಡಿಕೆ 220 ರನ್ವಯ ಕೃಷಿ ವಿಶ್ವವಿದ್ಯಾಲಯ ಧಾರವಾಡದ ಮಾಸಿಕ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವುದು ಕಡ್ಡಾಯವಾಗಿದೆ. ಮಾಸಿಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದೇ ಇರುವುದರಿಂದ 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿ ವರದಿಯನ್ನು ಸಿದ್ಧಪಡಿಸಲಾಗಿದೆ. ಈ ಲೆಕ್ಕಪತ್ರಗಳಲ್ಲಿ ಕಂಡುಬಂದ ನ್ಯೂನತೆಗಳು ಹಾಗೂ ವಿಶ್ವವಿದ್ಯಾಲಯದ ಆಡಳಿತ ವಿಭಾಗ, ಪರೀಕ್ಷಾ ವಿಭಾಗ, ಹಣಕಾಸು ವಿಭಾಗ, ಇಂಜೀನಿಯರಿಂಗ್ ವಿಭಾಗ ಮತ್ತು ವಿವಿಧ ಘಟಕಗಳಲ್ಲಿ ಕಂಡುಬಂದ ಗುರುತರವಾದ ನ್ಯೂನತೆಗಳನ್ನು ವರದಿ ಮಾಡಲಾಗಿದೆ.	

3	**ಕೈಗೊಳ್ಳಬೇಕಾದ ಕ್ರಮಗಳು:–** **2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಪರಿಶೀಲಿಸಿ ಈ ವರದಿಯನ್ನು ಸಿದ್ಧಪಡಿಸಲಾಗಿದೆ. ಲೆಕ್ಕಪತ್ರಗಳಲ್ಲಿ ಕಂಡುಬಂದ ನ್ಯೂನ್ಯತೆಗಳು ಹಾಗೂ ವಿಶ್ವವಿದ್ಯಾಲಯದ ಆಡಳಿತ ವಿಭಾಗ, ಪರೀಕ್ಷಾ ವಿಭಾಗ, ಹಣಕಾಸು ವಿಭಾಗ, ಇಂಜೀನಿಯರಿಂಗ್ ವಿಭಾಗ, ಮತ್ತು ವಿವಿಧ ಘಟಕಗಳಲ್ಲಿ ಕಂಡುಬಂದ ನ್ಯೂನ್ಯತೆಗಳನ್ನು 1963 ಕರ್ನಾಟಕ ವಿಶ್ವವಿದ್ಯಾಲಯ ಕಾಯ್ದೆ ಕಲಂ 38 ಹಾಗೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಆದ್ಯಾದೇಶ 2008 ರಂತೆ ಪ್ರತಿ ಆರ್ಥಿಕ ವರ್ಷ ಮುಗಿದ ಕೂಡಲೇ ವಿಶ್ವ ವಿದ್ಯಾಲಯದ ಎಲ್ಲಾ ಮೂಲಗಳ ಆದಾಯ ಮತ್ತು ಖರ್ಚುಗಳನ್ನೊಳಗೊಂಡ ವಾರ್ಷಿಕ ಲೆಕ್ಕ ಪತ್ರವನ್ನು ತಯಾರಿಸಿ ಸಲ್ಲಿಸಬೇಕೆಂದಿದೆ.**(UAS Dharwad Act & Statutes (As amended up to 31.07.2005) Act 38 (2) ರ ಪ್ರಕಾರ The Annual Accounts and the balance sheet shall be submitted by the Vice Chancellor to the State Government which shall cause an audit to be carded out by such persons as it may appoint in this behalf. The accounts when audited, shall be printed and copies there of, together with the audit report, shall be presented by the Vice-Chancellor to the Board and the Chancellorಎಂದು ಹೇಳಿದೆ.)	**3 ಕೃಷಿ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕ ಪತ್ರ ಮತ್ತು ವಾರ್ಷಿಕ ಲೆಕ್ಕ ಪರಿಶೋಧನೆಯ ಅನುಸರಣೆಯನ್ನು ಕೃಷಿ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಹಾಗೂ ವ್ಯವಸ್ಥಾಪನಾ ಮಂಡಳಿಯಲ್ಲಿ ಮಂಡಿಸಿ ಒಪ್ಪಿಗೆ ಪಡೆದು ಸರಕಾರಕ್ಕೆ ಸಲ್ಲಿಸಲಾಗುತ್ತಿದೆ.**
4	**2017-18ನೇ ಸಾಲಿನಲ್ಲಿ ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿಕಾರ್ಯನಿರ್ವಹಿಸಿದ ಅಧಿಕಾರಿಗಳು:–** 1 ಕುಲಪತಿಗಳು — ಡಾ॥ ಡಿ.ಪಿ.ಬಿರಾದಾರ — 01–04–2017 ರಿಂದ 2–02–2018 ಡಾ॥ ಬಿ.ಎಸ್.ಜಾನಗೌಡರ — 3–2–2018 ರಿಂದ 31–03–2018 2 ಕುಲಸಚಿವರು (ಆಡಳಿತ) — ಶ್ರೀ ಉಮೇಶ ಕುಸುಗಲ್ — 01–04–2017 ರಿಂದ 31–03–2018 3 ಹಣಕಾಸು ಅಧಿಕಾರಿಗಳು — ಡಾ॥ ಬಸವರಾಜ — 01–04–2017 ರಿಂದ 31–03–2018 4 ಆಸ್ತಿ ಅಧಿಕಾರಿಗಳು — ಶ್ರೀ. ಎಸ್.ಸಿ. ಮೀರಜಕರ್ — 01–04–2017 ರಿಂದ 31–03–2018	**4 ಅನುಸರಣೆ ಅವಶ್ಯವಿರುವುದಿಲ್ಲ**
	• **ಲೆಕ್ಕಪರಿಶೋಧನಾ ತಂಡದ ವಿವರಗಳು :–** 1 ಸಂಸ್ಥೆಯ ಹೆಸರು — ಕೃಷಿ ವಿಶ್ವವಿದ್ಯಾಲಯ ಧಾರವಾಡ 2 ಲೆಕ್ಕ ಪರಿಶೋಧನಾ ವರದಿ ಅವಧಿ — 2017–18(01–04–2017 ರಿಂದ 31–03–2018) 3 ಲೆಕ್ಕ ಪರಿಶೋಧಕರ ಹೆಸರು — ಶ್ರೀ.ಐ.ಬಿ.ಆಲದಕಟ್ಟಿ (ಲೆಕ್ಕ ಪರಿಶೋಧನಾಧಿಕಾರಿಗಳು) ಶ್ರೀಮತಿ ಸುವರ್ಣ.ಜಿ.ವಾಲೀಕಾರ (ಲೆಕ್ಕ ಅಧೀಕ್ಷಕರು)	**ಅನುಸರಣೆ ಅವಶ್ಯವಿರುವುದಿಲ್ಲ**

				ಶ್ರೀಮತಿ ರೇಖಾ ಮುದ್ದಿ (ಲೆಕ್ಕ ಅಧೀಕ್ಷಕರು)
				ಶ್ರೀಮತಿ ವಿಜಯಾ. ಬಿ.ಮಠದ (ಲೆಕ್ಕ ಅಧೀಕ್ಷಕರು)
				ಶ್ರೀ.ಜಗದೀಶ ಚಿನಿವಾರ (ಲೆಕ್ಕ ಅಧೀಕ್ಷಕರು)
				ಶ್ರೀ. ವಸಂತ ಬೇವಿನಹಳ್ಳಿ (ಲೆಕ್ಕ ಪರಿಶೋಧಕರು)
				ಶ್ರೀಮತಿ ಲಕ್ಷ್ಮೀ ಯರಲ್ಲು (ಲೆಕ್ಕ ಪರಿಶೋಧಕರು)
				ಶ್ರೀಮತಿ ಹಸೀನಾ. ಎ. ಖಾನ್ (ಲೆಕ್ಕ ಪರಿಶೋಧಕರು)
				ಶ್ರೀಮತಿ ರಾಜೇಶ್ವರಿ ಹೊಸಮಠ (ಲೆಕ್ಕ ಪರಿಶೋಧಕರು)
				ಶ್ರೀ. ಸುರೇಶ ಮಲೋಡಿ (ಲೆಕ್ಕ ಪರಿಶೋಧಕರು)
				ಶ್ರೀ ಸಂತೋಷ ಧಂದರಗಿ (ಲೆಕ್ಕ ಪರಿಶೋಧಕರು)
				ಶ್ರೀ ಅಮೀರಖಾನ್ ಖಲೀಫ್(ಲೆಕ್ಕ ಪರಿಶೋಧಕರು)
				ಶ್ರೀಮತಿ ನಹೀದಾ ಅಕ್ಕಿ (ಕಿರಿಯ ಲೆಕ್ಕ ಸಹಾಯಕರು)
		4	**ವಾರ್ಷಿಕ ಲೆಕ್ಕಪತ್ರ ಸಲ್ಲಿಸಿದ ದಿನಾಂಕ:**	02.01.2019
		5	**ಲೆಕ್ಕ ಪರಿಶೋಧನೆ ಪ್ರಾರಂಭದ ದಿನಾಂಕ**	**15.06.2019**
		6	**ಲೆಕ್ಕಪರಿಶೋಧನೆ ಮುಕ್ತಾಯ ದಿನಾಂಕ**	29.01.2020
		7	**ಲೆಕ್ಕಪರಿಶೋಧನೆ ಉಪಯೋಗಿಸಿರುವ ಒಟ್ಟು ಮಾನವ ದಿನಗಳು**	1216.5 ಮಾನವ ದಿನಗಳು
		8	**ಮರು ಸಮೀಕ್ಷೆ ಮಾಡಿದ ಅಧಿಕಾರಿಗಳ ಹೆಸರು ಮತ್ತು ಹುದ್ದೆ**	**ಶ್ರೀ ದೀಪಕ್ ದೊರೆಯವರ್** **ಅಪರ ನಿರ್ದೇಶಕರು** **ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,** **ಪ್ರಾಂತೀಯ ಕಚೇರಿ ಬೆಳಗಾವಿ.**
		9	**ಮರು ಸಮೀಕ್ಷೆ ಮಾಡಿರುವ ದಿನಾಂಕ**	**27.08.2020**
			ಈ ಕುರಿತು ಅನುಬಂಧ–1 ರಲ್ಲಿ ವಿವರಸಿದೆ.	

5	**ಲೆಕ್ಕ ಪತ್ರ ಪದ್ದತಿಯ ಸಂಕ್ಷಿಪ್ತ ವಿವರಣೆ:–** ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಆಧ್ಯಾದೇಶ 2008 ಕಲಂ 40 ರಂತೆ ವಾರ್ಷಿಕ ಲೆಕ್ಕ ಪತ್ರವನ್ನು ಜೋಡು ನಮೂದು ಪದ್ದತಿ ಲೆಕ್ಕ ಆಧರಿಸಿ ತಯಾರಿಸಬೇಕೆಂದಿದೆ. ಹಿಂದೆ ಚಾಲ್ತಿಯಲ್ಲಿ 1963ರ ಕರ್ನಾಟಕ ಕೃಷಿ ವಿಶ್ವವಿದ್ಯಾಲಯಗಳ ಕಾಯ್ದೆ ಕಲಂ 38 ರಲ್ಲಿ ಸಹ, ವಾರ್ಷಿಕ ಲೆಕ್ಕ ಪತ್ರದೊಂದಿಗೆ ಅಢಾವೆ ಪತ್ರಿಕೆ(Balance Sheet)ತಯಾರಿಸಬೇಕೆಂದಿದೆ. ಇದಕ್ಕನುಕೂಲವಾಗುವಂತೆ ಜೋಡು ನಮೂದು ಪದ್ದತಿಯಲ್ಲಿ ಲೆಕ್ಕ ಪತ್ರ ನಿರ್ವಹಿಸಬೇಕಿದ್ದು, ಈ ವಿಶ್ವವಿದ್ಯಾಲಯದಲ್ಲಿ ಏಕಮುಖ ನಗದು ಪುಸ್ತಕ ನಿರ್ವಹಿಸುತ್ತಿರುವುದು ಕಂಡು ಬರುತ್ತದೆ. ಅಲ್ಲದೆ ವರ್ಗಾವಣೆ ನಮೂದು ಪುಸ್ತಕ(Journal Entry Regr)ಹಾಗೂ ಖಾತೆ ಕಿರ್ದಿ ಪುಸ್ತಕ(Ledger Account)ನಿರ್ವಹಿಸಿಲ್ಲ. ಇದರಿಂದ ಏಕಮುಖ ನಮೂದು(Single Entry)ಪದ್ದತಿ ಲೆಕ್ಕ ಪತ್ರ ಆಧರಿಸಿ ಆಢಾವೆ ಪತ್ರಿಕೆ ತಯಾರಿಸಿದ್ದು ಕ್ರಮ ಬದ್ಧವಾಗಿರುವದಿಲ್ಲ. ಜೋಡು ನಮೂನೆ ಪದ್ಧತಿ ಲೆಕ್ಕ ಇಲ್ಲದಿರುವುದರಿಂದ ನಿಖರವಾದ ಅಂತಿಮ ಶಿಲ್ಕನ್ನು ಲೆಕ್ಕ ತಪಾಸಣೆಯು ಪರಿಗಣಿಸದೇ ಇರುವುದರಿಂದ ದ್ವಿನಮೂನೆ ಪದ್ಧತಿಯಲ್ಲಿ ಪರಿಷ್ಕರಿಸಿ ಲೆಕ್ಕ ಪರಿಶೋಧನೆಗೆ ದಾಖಲೆ ಒದಗಿಸಲು ಸೂಚಿಸಿದೆ. ವಿಶ್ವವಿದ್ಯಾಲಯ ನಿಧಿಗೆ ಹಣಕಾಸು ನಿಯಂತ್ರಣಾಧಿಕಾರಿಗಳು ನಿರ್ವಹಿಸಿದ ದಾಖಲೆಗಳಲ್ಲಿ ಕೆಲವೊಂದು ತೀವ್ರತರ ನೂನ್ಯತೆಗಳು ಕಂಡು ಬಂದಿದ್ದು, ಇವುಗಳನ್ನು ಈ ಮುಂದಿನ ಕಂಡಿಕೆಗಳಲ್ಲಿ ತೋರಿಸಲಾಗಿದೆ. ಅಧೀನ ಕಛೇರಿಗಳಲ್ಲಿ ಖಾಯಂ ಮುಂಗಡ ಹಾಗೂ ಇತರ ಬಿಲ್ಲು ನಗದೀಕರಣ ಬಾಬಿನಲ್ಲಿ ಹಣಕಾಸು ನಿಯಂತ್ರಣಾಧಿಕಾರಿಗಳಿಂದ ಬಿಡುಗಡೆಯಾದ ಹಣವನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಸ್ಥಳೀಯ ಶಾಖೆಯಲ್ಲಿ ಹೊಂದಿದ ಉಳಿತಾಯ ಖಾತೆಗೆ ಜಮೆ ಮಾಡಿಕೊಂಡು, ಹಣಕಾಸಿನ ವಹಿವಾಟು ನಡೆಸಲಾಗಿದೆ ಹಾಗೂ ಘಟಕಗಳ ವಿಶ್ವವಿದ್ಯಾಲಯದ ಮೂಲಗಳಿಂದ ಸ್ವೀಕೃತವಾದ ರಸೀದಿ ಹಣವನ್ನು ಇದೇ ಖಾತೆಗೆ ಜಮಾ ಮಾಡಿ, ಮುಂದೆ ಕ್ರೋಢೀಕೃತ ರಕಮನ್ನು ಇದರಿಂದ ತೆಗೆದು ವಿಶ್ವವಿದ್ಯಾಲಯ ನಿಧಿಗೆ ಭರಣ ಮಾಡಿರುವುದು ಕಂಡು ಬರುತ್ತದೆ. ಈ ಬಗ್ಗೆ 1958 ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 331 ರಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ನಗದು ಪುಸ್ತಕವನ್ನಿಡಲಾಗಿದೆ. ಎಲ್ಲಾ ಘಟಕಗಳ ಸ್ಥಳೀಯ ಲೆಕ್ಕ ಪರಿಶೋಧನಾ ಕಾಲಕ್ಕೆ ನಗದು ಪುಸ್ತಕ, ಖರ್ಚಿನ ಪಾವತಿಗಳು, ಸಂಗ್ರಹ ಲೆಕ್ಕ ಹಾಗೂ ಸಂಬಂಧಿಸಿದ ಇತರ ದಾಖಲೆಗಳನ್ನು ಪರಿಶೀಲಿಸಲಾಗಿದೆ. ವಿಶ್ವವಿದ್ಯಾಲಯ ನಿರ್ದೇಶನದಂತೆ ಸಾದಿಲ್ವಾರ ಬಾಬ್ತಿನ ರೂ.500/– ಗಳಿಗಿಂತ ಹೆಚ್ಚಿನ ಮೊತ್ತದ ಖರ್ಚು ಪಾವತಿಗಳಿಗೆ ಮಾತ್ರ ಬಿಲ್ಲುಗಳ ಪ್ರತಿಗಳನ್ನು ಹಣ ತೆಗೆಯುವ ಕಛೇರಿಯಲ್ಲಿಡಬೇಕೆಂದಿದ್ದು, ಸದರಿ ಮಿತಿಯೊಳಗಿನ ಖರ್ಚು ಪಾವತಿ ಹಾಗೂ ಸಂಬಂಧಿಸಿದ ದಾಸ್ತಾನು ಲೆಕ್ಕವನ್ನು ಪರಿಶೀಲಿಸುವುದು ಲೆಕ್ಕ ಪರಿಶೋಧನೆಗೆ ಸಾಧ್ಯವಾಗಿಲ್ಲ. ಇದರಿಂದ ಬಿಲ್ ಮೊತ್ತ ಏನೇ ಇದ್ದರೂ ಇವುಗಳ ಪ್ರತಿಗಳನ್ನು ಘಟಕಗಳ ಲೆಕ್ಕ ಪರಿಶೋಧನೆಗೆ ಹಾಜರು ಪಡಿಸುವಲ್ಲಿ ಕ್ರಮ ತೆಗೆದುಕೊಳ್ಳುವುದು. ವಿವಿಧ ಮಹಾವಿದ್ಯಾಲಯಗಳಲ್ಲಿ ಸರಕಾರದ ಆದೇಶಗಳ ಮೂಲಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನೀಡಲಾಗುವ ಶುಲ್ಕಗಳ ವಿನಾಯಿತಿ/ವಿದ್ಯಾರ್ಥಿ ವೇತನ ಇತ್ಯಾದಿಗಳ ಸೌಲಭ್ಯವನ್ನು ಸಕಾಲಿಕವಾಗಿ ವಿಸ್ತರಿಸಲು ಮತ್ತು ಸರಕಾರದಿಂದ ಈ ಕುರಿತು ಮರುಭರಿಸುವ ಮೊತ್ತಗಳು ಮಹಾ ವಿದ್ಯಾಲಯಗಳಿಂದ ಸರಕಾರದ ಸಂಬಂಧಿತ ಇಲಾಖೆಗಳಿಂದ ವಿಶ್ವವಿದ್ಯಾಲಯ ನಿಧಿಗೆ ಜಮ ಮಾಡಿಸಲು ಸಂಬಂಧಿತ ವಿಭಾಗಗಳಲ್ಲಿ ಬೇಡಿಕೆ ವಸೂಲಿ ಮತ್ತು ಬಾಕಿ (ಡಿ.ಸಿ.ಬಿ) ರಜಿಸ್ಟರ್ ನಂತಹ ಅನಿವಾರ್ಯ ಹಾಗೂ ಅಗತ್ಯ ದಾಖಲೆಗಳನ್ನು ನಿರ್ವಹಿಸದೆ ಇರುವುದರಿಂದ ಬರಬೇಕಾದ ಮರುಪಾವತಿ ಮೊತ್ತಗಳು ಸಕಾಲಿವಾಗಿ ಸ್ವೀಕೃತಿಯಾಗದೆ ಅನಗತ್ಯ ಹೊರೆಗೆ ಕಾರಣವಾಗಿರುತ್ತದೆ.	5 ದ್ವಿನಮೂದು ಪದ್ದತಿಯಲ್ಲಿ ಲೆಕ್ಕ ಪತ್ರವನ್ನು ನಿರ್ವಹಿಸಲಾಗುತ್ತಿದ್ದು ಕಂಡಿಕೆಗಳಲ್ಲಿಯ ಅಂಶಗಳನ್ನು ಸದರಿ ಲೆಕ್ಕ ಪತ್ರದಲ್ಲಿ ಅಳವಡಿಸಿಕೊಳ್ಳಲಾಗುವುದು

6	**ಲೆಕ್ಕಪರಿಶೋಧನಾ ಕಚೇರಿಯಲ್ಲಿ ನಗದು ಖಾತೆಗಳ ಮತ್ತು ಇತರೆ ಖಾತೆಗಳ ರಶೀದಿಗಳು:–** ಕೃಷಿ ವಿಶ್ವವಿದ್ಯಾಲಯ ಧಾರವಾಡಅಧಿನಿಯಮ 1963ರ ಅಧ್ಯಾಯIII (Accounts & auditing)ರ ನಿಯಮ 38 (1) ರ ಪ್ರಕಾರ ವಾರ್ಷಿಕ ಲೆಕ್ಕ ಪತ್ರಗಳನ್ನು ತಯಾರಿಸಿ ಕೃ.ವಿ.ವಿ 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಪತ್ರ ಸಂ. ಲೆ.ನಿ/ಲೆ.ಪ.ವಿ/2018–19/1544ಸಿ ದಿನಾಂಕ: 28.12.2018 ರಂದು ಪ್ರಾಂತೀಯ ಕಚೇರಿ ಬೆಳಗಾವಿಗೆ ಸಲ್ಲಿಸಿದ್ದು ಇರುತ್ತದೆ. ಕೃಷಿ ವಿಶ್ವವಿದ್ಯಾಲಯದ ಅನುಶಾಸನದ ಅಧ್ಯಾಯ IV ರಲ್ಲಿ ನಿಯಮ 30 ರಲ್ಲಿ ಕೃಷಿ ವಿಶ್ವವಿದ್ಯಾಲಯದ ವಿವಿಧ ನಿಧಿಗಳ ಬಗ್ಗೆ ವಿವರಿಸಿದ್ದು ಹಣಕಾಸಿನ ನಿರ್ವಹಣೆ ಮತ್ತು ವೆಚ್ಚಗಳನ್ನು ಭರಿಸುವ ಮಿತಿ ಮತ್ತು ವಿಧಾನಗಳ ಕುರಿತು ಉಲ್ಲೇಖಿಸಿರುವುದಿಲ್ಲ. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ 301(8)ರ ಅನುಸಾರ ವಿಶ್ವವಿದ್ಯಾಲಯದ ಮಾಸಿಕ ಲೆಕ್ಕಗಳನ್ನು ನಂತರ ಬರುವ ತಿಂಗಳ 20ನೇ ದಿನಾಂಕದೊಳಗೆ ಲೆಕ್ಕಪರಿಶೋಧಕರಿಗೆ ಸಲ್ಲಿಸುವಂತೆ ತಿಳಿಸಲಾಗಿದೆ. ಆದರೆ ಲೆಕ್ಕಪರಿಶೋಧನಾ ಕಚೇರಿಗೆ ಕೃಷಿ ವಿಶ್ವವಿದ್ಯಾಲಯ ಧಾರವಾಡ 2017–18ನೇ ಸಾಲಿನ ಸದರಿ ಮಾಸಿಕ ಲೆಕ್ಕಗಳನ್ನು ಸಲ್ಲಿಸಿರುವುದಿಲ್ಲ.	6 ಮಾಸಿಕ ಲೆಕ್ಕ ಪತ್ರವನ್ನು ಸಲ್ಲಿಸುವ ಕುರಿತು ಕ್ರಮ ಜರುಗಿಸಲಾಗುವುದು
7	**ಲೆಕ್ಕಪರಿಶೋಧನಾ ವಿಚಾರಣೆಯಲ್ಲಿನ ವಿಲೇವಾರಿ:–** ಕೃಷಿ ವಿಶ್ವವಿದ್ಯಾಲಯ ಧಾರವಾಡ 2017–18ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಸಂಸ್ಥೆಯ ಅಧೀನದಲ್ಲಿ ಬರುವ ಆಡಳಿತ ವಿಭಾಗ, ಹಣಕಾಸು ವಿಭಾಗ, ಇಂಜಿನೀಯರಿಂಗ ವಿಭಾಗ, ಗ್ರಂಥಾಲಯ, ಹೀಗೆ ಇತರೆ ಘಟಕಗಳ ಸ್ವೀಕೃತಿ ಮತ್ತು ವೆಚ್ಚಗಳ ದಾಖಲೆಗಳನ್ನು ಪರಿಶೀಲಿಸಿ ನೀಡಿದ ಒಟ್ಟು 663 ಲೆಕ್ಕಪರಿಶೋಧನಾ ವಿಚಾರಣಾ ಪತ್ರಗಳನ್ನು ನೀಡಲಾಗಿತ್ತು. ವಿಶ್ವವಿದ್ಯಾಲಯದಿಂದ 458 ವಿಚಾರಣಾ ಪತ್ರಗಳಿಗೆ ಅನುಸರಣೆಗಳನ್ನು ನೀಡಿರುತ್ತಾರೆ. ಈ ವರದಿಯಲ್ಲಿ ಗುರುತರ ಆಕ್ಷೇಪಣೆ ಮತ್ತು ವಸೂಲಾತಿಗಳ ಕುರಿತು ವಿಚಾರಣೆಗಳನ್ನು ನೀಡಿದ್ದು, ಅವುಗಳಲ್ಲಿ ಕೆಲವು ವಿಚಾರಣೆಗಳಿಗೆ ಸೂಕ್ತ ಉತ್ತರ/ದಾಖಲೆಗಳನ್ನು ಒದಗಿಸಿದ್ದರಿಂದ ಕೈಬಿಟ್ಟು, ಬಾಕಿ ಉಳಿದ ಗುರುತರವಾದ ಆಕ್ಷೇಪಣೆಗಳನ್ನು ಹಣಕಾಸು ಸಮಿತಿ ಮತ್ತು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸುವುದು ಅಗತ್ಯವಾಗಿರುವುದರಿಂದ ಅಂತಹ ಆಕ್ಷೇಪಣೆಗಳನ್ನು ವರದಿಯಲ್ಲಿ ಸೇರಿಸಲಾಗಿದೆ.	7 ಬಾಕಿ ಇರುವ ಕಂಡಿಕೆಗಳ ತಿರುವಳಿ ಮಾಡಲು ಸೂಕ್ತ ದಾಖಲೆಗಳೊಂದಿಗೆ ಅನುಸರಣೆಗಳನ್ನು ಸಲ್ಲಿಸಲಾಗುವುದು.
8	**ವಾರ್ಷಿಕ ಲೆಕ್ಕಪರಿಶೋಧನಾ ವರದಿಯಲ್ಲಿನ ವಿಲೇವಾರಿ:–** 1) 2017–18 ನೇ ಸಾಲಿನಲ್ಲಿ ಕೃವಿವಿಯವರು ನೀಡಿದ ಅನುಸರಣೆಗಳನ್ನು ಪರಿಶೀಲಿಸಿ 13 ಘಟಕಗಳಿಂದ 19 ಆಕ್ಷೇಪಣೆ ಪ್ಯಾರಾಗಳ ಮೊತ್ತ ರೂ.15730992/– ಹಾಗೂ 17 ಕಂಡಿಕೆಗಳ ವಸೂಲಾತಿ ಮೊತ್ತ ರೂ.158133362.65/– ಗಳನ್ನು ತೀರುವಳಿ ಮಾಡಲಾಗಿದೆ. ವಿವರಗಳನ್ನು ಅನುಬಂಧ –2 ರಲ್ಲಿ ವಿವರಿಸಿದೆ. 2) 2017–18ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಕರ್ನಾಟಕ ಬಜೆಟ್ ಕೈಪಿಡಿ ಕಂಡಿಕೆ ಸಂಖ್ಯೆ 305 ಮತ್ತು 318 ರನ್ವಯ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ವಹಿಯನ್ನು ನಮೂನೆ ಸಂಖ್ಯೆ:21ರಲ್ಲಿ ನಿರ್ವಹಿಸಿರುವ ಬಗ್ಗೆ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಮೌಖಿಕವಾಗಿ ತಿಳಿಸಿದ್ದರೂ ಹಾಜರುಪಡಿಸಿಲ್ಲ. ಇದರಿಂದಾಗಿ 2016–17ನೇ ಅಂತ್ಯಕ್ಕೆ ಲೆಕ್ಕಪರಿಶೋಧನಾ ವರದಿ ಪ್ರಕಾರ 5822 ಪ್ಯಾರಾಗಳಿಂದ ರೂ.2,80,45,06,953/– ಆಕ್ಷೇಪಣೆ ಮೊತ್ತ ಹಾಗೂ ರೂ.69,72,77,962.70 /– ಗಳಷ್ಟು ವಸೂಲಾತಿ ಮೊತ್ತ ಇತ್ಯರ್ಥವಾಗದೇ ಬಾಕಿ	8 ಲೆಕ್ಕ ಪರಿಶೋಧನೆಯಲ್ಲಿನ ಆಕ್ಷೇಪಣೆ ಹಾಗೂ ವಸುಲಾತಿ ಕುರಿತು ವಹಿಯನ್ನು ಹಾಜರು ಪಡಿಸಲಾಗುವುದು.

	ಉಳಿದಿರುತ್ತದೆ. ವಿವರಗಳನ್ನು ಅನುಬಂಧ–2.1 ರಲ್ಲಿ ವಿವರಿಸಿದೆ. ಪ್ರಸಕ್ತ ಸಾಲಿನ ಲೆಕ್ಕಪರಿಶೋಧನೆಯಲ್ಲಿ 2017–18 ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿಯಲ್ಲಿ ನಿರ್ವಹಿಸಲ್ಪಟ್ಟ ವಿಶ್ವವಿದ್ಯಾಲಯದ ಬೇರೆ ಬೇರೆ ನಿಧಿಗಳ ಹಾಗೂ ಅಧೀನದಲ್ಲಿ ಬರುವ ಎಲ್ಲಾ "68" ಘಟಕಗಳ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದೆ. ಒಟ್ಟು ಘಟಕವಾರು ಲೆಕ್ಕಪರಿಶೋಧನಾ ವರದಿಯಲ್ಲಿ 240ಆಕ್ಷೇಪಣೆ ಕಂಡಿಕೆಗಳ ಒಟ್ಟು ಮೊತ್ತ ರೂ. 48,89,68,311/– ಮತ್ತು 56 ವಸೂಲಾತಿ ಕಂಡಿಕೆಗಳ ಒಟ್ಟು ಮೊತ್ತ ರೂ. 2,25,10,988/–ಗಳ ಆರ್ಥಿಕ ಮೌಲ್ಯದ ವಿವರ ಈ ವರದಿಗೆ ಲಗತ್ತಿಸಿದ ಅನುಬಂಧ–"3(ಅ)" ಹಾಗೂ ಇವುಗಳ ಸಂಕ್ಷಿಪ್ತ ವಿವರವನ್ನು ಅನುಬಂಧ– "3(ಬ)" ದಲ್ಲಿ ವಿವರಿಸಿದೆ.	
9	**ಆಯವ್ಯಯ ಅಂದಾಜು ಪತ್ರಿಕೆ ಕುರಿತು:–** 2017–18 ನೇ ಸಾಲಿನ ಅಯವ್ಯಯ ಅಂದಾಜು ಪತ್ರಿಕೆಗೆ 17 ನೇ ಹಣಕಾಸು ಸಮಿತಿ(Finance committee) ಸಭೆಯ ನಡುವಳಿಯಡಿಯಲ್ಲಿ ದಿನಾಂಕ: 25.03.2017 ರಂದು ಅನುಮೋದನೆ ಪಡೆದುಕೊಂಡಿರುತ್ತದೆ. ಕೃ.ವಿ.ವಿ.ಯ 35 ನೇ ವ್ಯವಸ್ಥಾಪನಾ ಮಂಡಳಿಯ ದಿನಾಂಕ:25.03.2017 ರಂದು ಅನುಮೋದನೆ ಪಡೆದುಕೊಂಡಿರುತ್ತದೆ. 2017–18 ನೇ ಸಾಲಿನ ಪರಿಷ್ಕೃತ ಅಯವ್ಯಯ ಅಂದಾಜು ಪತ್ರಿಕೆಯನ್ನು 20 ನೇ ಹಣಕಾಸು ಸಮಿತಿ (Finance committee) ಸಭೆಯ ನಡುವಳಿಯಡಿಯಲ್ಲಿ ದಿನಾಂಕ: 23.03.2018 ರಂದು ಅನುಮೋದನೆ ಪಡೆದುಕೊಂಡಿರುತ್ತದೆ. 2017–18 ನೇ ಸಾಲಿನ ಪರಿಷ್ಕೃತ ಅಯವ್ಯಯ ಅಂದಾಜು ಪತ್ರಿಕೆಯನ್ನು 41 ನೇ ವ್ಯವಸ್ಥಾಪನಾ ಮಂಡಳಿಯ ಸಭೆಯ ನಡುವಳಿಯಡಿಯಲ್ಲಿ ದಿನಾಂಕ: 23.03.2018 ರಂದು ಅನುಮೋದನೆ ಪಡೆದುಕೊಂಡಿರುತ್ತದೆ.	9 ಆಯವ್ಯಯ ಅಂದಾಜು ಪತ್ರಿಕೆಯಲ್ಲಿ ಕಂಡು ಬಂದ ವ್ಯತ್ಯಾಸಗಳಿಗೆ ಪರಿಷ್ಕೃತ ಆಯವ್ಯಯದಲ್ಲಿ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಪಡೆಯಲಾಗಿದೆ. ಅಂದಾಜು ಪತ್ರಿಕೆ ತಯಾರಿಸುವಲ್ಲಿ ನೀಡಿದ ಸಲಹೆಗಳನ್ನು ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು

(ರೂ. ಕೋಟಿಗಳಲ್ಲಿ)

ಅ. ನಂ.	ವಿವರ	ಮೂಲ ಅಯವ್ಯಯ ಅಂದಾಜು (Estimated Budget)	ಪರಿಷ್ಕೃತ ಅಯವ್ಯಯ ಅಂದಾಜು (Revised Budgt)	ವಾರ್ಷಿಕ ಲೆಕ್ಕ ಪತ್ರಗಳ ಪ್ರಕಾರ	ವ್ಯತ್ಯಾಸ
1	2	3	4	5	6
01	ಸ್ವೀಕೃತಿ(Receipts)	354.7	492.08	617.74	125.66
02	ವೆಚ್ಚಗಳು	368.98	569.55	619.30	49.75

	ಆಯವ್ಯಯ ಅಂದಾಜು ಪತ್ರಿಕೆಯಲ್ಲಿ ಸ್ವೀಕೃತಿ ಹಾಗೂ ವೆಚ್ಚದ ಭಾಗದಲ್ಲಿ ಕೇವಲ ಸಾಮಾನ್ಯ ನಿಧಿಯ ಜಮೆ ಹಾಗೂ ಖರ್ಚುಗಳನ್ನು ಪರಿಗಣಿಸಿದ್ದು ವಾರ್ಷಿಕ ಲೆಕ್ಕ ಪತ್ರದಲ್ಲಿ ದಾಖಲಿಸಿದ ವಿಶ್ವವಿದ್ಯಾಲಯದ ಇತರೆ ಖಾತೆಗಳ ವಿವರಗಳನ್ನು ಪರಿಗಣಿಸಿರುವುದಿಲ್ಲ. ಪರಿಷ್ಕೃತ ಅಂದಾಜು ಆದಾಯಕ್ಕಿಂತ 25% ಹೆಚ್ಚಿಗೆ ವಾಸ್ತವಿಕ ಆದಾಯ ಸ್ವೀಕೃತವಾಗಿದ್ದು ಹಾಗೂ ಪರಿಷ್ಕೃತ ಅಂದಾಜು ವೆಚ್ಚಕ್ಕಿಂತ 8.4% ಹೆಚ್ಚಿಗೆ ವಾಸ್ತವಿಕ ವೆಚ್ಚವಾಗಿರುತ್ತದೆ. ಕರ್ನಾಟಕ ಬಜೆಟ್ ಕೈಪಿಡಿ 1958 ರ ನಿಯಮ 86ರ ಪ್ರಕಾರ ಬಜೆಟ್ ಅಂದಾಜುಗಳನ್ನು ನಿಯಮಾನುಸಾರ ಒಟ್ಟು ಆಧಾರದ ಮೇಲೆ ತಯಾರಿಸಬೇಕೆ ಹೊರತು ನಿವ್ವಳ ಆಧಾರದ ಮೇಲೆ ಅಲ್ಲ, ಈ ಕುರಿತು ಸೂಕ್ತ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ನೀಡಲು ಕೋರಿದ್ದು ಅನುಸರಣೆ ನೀಡಿರುವುದಿಲ್ಲ. ಆಯವ್ಯಯ ತಯಾರಿಸುವಲ್ಲಿ ವಾಸ್ತವಿಕತೆಯ ನಿಖರತೆ ಹಾಗೂ ಬಜೆಟ್ ಕೈಪಿಡಿ ನಿಯಮ 229 ಮತ್ತು 230 ನ್ನು ಪಾಲಿಸದೆ ಇರುವುದು ಕಂಡುಬರುತ್ತದೆ.	
10	ಸ್ವೀಕೃತಿಗಳು:–	10 ಅನುಸರಣೆ ಅವಶ್ಯವಿರುವುದಿಲ್ಲ

ಕ್ರ. ಸಂ.	ಆದಾಯ ಶೀರ್ಷಿಕೆಗಳ ವಿವರ	2017–18ನೇ ಸಾಲಿನ ವಾಸ್ತವಿಕ ಆದಾಯಗಳು
1	ಬ್ಲಾಕ್ ಗ್ರ್ಯಾಂಟ್	1834500000
2	ರಾಜ್ಯ ಸರ್ಕಾರದ ಅಡಹಾಕ ಪ್ರೊಜೆಕ್ಟ್	116328253.00
3	RKVY(ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ)	64000000.00
4	ಕೇಂದ್ರ ಸರಕಾರದ ಸಂಶೋಧನಾ ಯೋಜನೆ ಅನುದಾನ	33805183.00
5	ಅ.ಭಾ.ಸ ಸಂ. ಯೊ (ಎ.ಆಯ್.ಸಿ.ಆರ್.ಪಿ)	184223973.00
6	ಭಾ.ಕೃ.ಪ. –ಕೃ.ವಿ.ಕೇಂ.	67517121.00
7	ಭಾ.ಕೃ.ಪ. ಅಭಿವೃದ್ಧಿ ಅನುದಾನ	5199153.00
8	ಭಾ.ಕೃ.ಪ ಎಡಹಾಕ ಸಂಶೋಧನಾ ಯೋಜನೆ	20797534.00
9	ಇತರೆ ಹಣಕಾಸು ನೆರವು ಸಂಸ್ಥೆಯಿಂದ ಅನುದಾನ	25265918.00
10	ಆಂತರಿಕ ಆದಾಯಗಳು	191092711
11	ಇತರೆ ಆದಾಯಗಳು	129624414.20
12	ಇತರೆ ಮೂಲಗಳಿಂದ ಅನುದಾನಗಳು	4248966.75
13	ಅವಧಿ ಮುಕ್ತಾಯದ ಠೇವಣಿ	2138000000
14	ಸಾಲ ಮತ್ತು ಅಮಾನತು ಖಾತೆ	64653125.76
15	ಕಟಾವಣೆ ಮತ್ತು ವಸೂಲಾತಿ	29386331
	ಒಟ್ಟು	4908642683.71

11	**ವೆಚ್ಚ ನಿಯಂತ್ರಣ:–** ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ ಎಲ್ಲ ಆರ್ಥಿಕ ವ್ಯವಹಾರಗಳು ಹಣಕಾಸು ವಿಭಾಗಳಿಂದ ಕೈಗೊಳ್ಳುತ್ತಿದ್ದು, ಅಧೀನದಲ್ಲಿ ಬರುವ ಎಲ್ಲ ವಿಭಾಗಳಿಗೆ ಬೇಕಾಗುವ ವಿವಿಧ ವೆಚ್ಚಗಳಿಗಾಗಿ ಶಿರ್ಷಿಕೆವಾರು ಒಂದು ನಿಗದಿತ ಮೊತ್ತವನ್ನು ಶಿರ್ಷಿಕೆವಾರು ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗಿದ್ದು, ಅದರಂತೆ ಆಯಾ ವಿಭಾಗದವರು ವೆಚ್ಚ ಭರಿಸಿ ಅಥವಾ ಮುಂಗಡ ಹಣದಿಂದ ವೆಚ್ಚ ಭರಿಸಿ ನಂತರ ಸದರಿ ಮೊತ್ತಗಳನ್ನು ಹಣಕಾಸು ವಿಭಾಗದಿಂದ ಮರು ಹೊಂದಾಣಿಕೆ ಮಾಡಿಕೊಳ್ಳಲಾಗುತ್ತಿದೆ. ಹಣಕಾಸು ನಿಯಂತ್ರಣಕ್ಕಾಗಿ ಯಾವುದೇ ರೀತಿಯ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿರುವುದಿಲ್ಲ. ಹಣಕಾಸು ನಿಯಂತ್ರಣ ಸಾಧಿಸಲು ಮಾಸಿಕ ವೆಚ್ಚಗಳ ತಃಖ್ತೆಗಳನ್ನಾಗಲಿ ನಿಗದಿಪಡಿಸಿದ ಅನುದಾನಕ್ಕೆದುರಾಗಿ ವೆಚ್ಚಗಳನ್ನು ನಿಯಂತ್ರಿಸಲು ವೆಚ್ಚಗಳ ನಿಯಂತ್ರಣ ವಹಿ (Expenditure Watch Register) ಗಳನ್ನಾಗಲಿ ನಿರ್ವಹಿಸಿರುವುದಿಲ್ಲ.	11 ಕಂಡಿಕೆಯಲ್ಲಿ ವಿವರಿಸಿದಂತೆ **Watch Register** ನಿರ್ವಹಿಸಲಾಗುವುದು
12	**ಹಣದ ತಿರವು (Diversion of Fund):-** ತಳಿವರ್ಧಕ ಬೀಜ ಆವರ್ತ ನಿಧಿಯಿಂದ ಬೀಜೋತ್ಪಾದನಾ ಆವರ್ತ ನಿಧಿಗೆ ಹಣ ವರ್ಗಾಯಿಸಿರುವ ಕುರಿತು.(ಬಿ.ಎಸ್.ಪಿ/ಎನ್.ಎಸ್.ಪಿ.ಕಂ.ಸಂ.33) ಕೃಷಿ ವಿಶ್ವವಿದ್ಯಾಲಯ, ಧಾರವಾಡ ಬಿಎಸ್‌ಪಿ/ಎನ್‌ಎಸ್‌ಪಿ ಘಟಕದ 2017–18 ನೇ ಲೆಕ್ಕಪರಿಶೋಧನಾ ವೇಳೆ ಪರಿಶೀಲಿಸಲಾಗಿ, ದಿನಾಂಕ 13.09.2017 ರ ಚೆಕ್ ಸಂ.124484 ರಲ್ಲಿ ಆದೇಶ ಸಂ.SOS/C/S/TL/ /2017–18 ರನ್ವಯ ಬೀಜೋತ್ಪದನಾ ಆವರ್ತ ನಿಧಿ ಲೆಕ್ಕಶಿರ್ಷಿಕೆ 9803/300ಕ್ಕೆ ರೂ.35,00,000/– ಗಳ ವರ್ಗಾವಣೆಯನ್ನು ತಳಿವರ್ಧಕ ಬೀಜ ಆವರ್ತ ನಿಧಿಯಿಂದ ಮಾಡಿರುತ್ತಾರೆ. ಅದರಂತೆ ಪತ್ರ ಆದೇಶದ ಪ್ರಕಾರ ಹಣಕಾಸಿನ ವರ್ಷದ ಎಲ್ಲ ರಶೀದಿಗಳು ಜಮೆ ಆದ ನಂತರ ಬೀಜೋತ್ಪಾಧನಾ ಘಟಕದವರು ಪಡೆದ ಹಣವನ್ನು ತಳಿವರ್ಧಕ ಆವರ್ತ ನಿಧಿಗೆ ಮರಳಿ ಜಮೆ ಮಾಡುವುದಾಗಿ ಹೇಳಿದ್ದು, ಇಲ್ಲಿಯವರೆಗೂ ಯಾವುದೇ ಜಮೆಗಳು ತಳಿ ವರ್ಧಕ ಆವರ್ತ ನಿಧಿಗೆ ಮರಳಿ ಬಂದಿರುವುದಿಲ್ಲ. ಈ ಕುರಿತು ಭಾಗ–2ರ ಕಂಡಿಕೆ 6ರಲ್ಲಿ ವಿವರಿಸಿ ಆಕ್ಷೇಪಣೆಯಲ್ಲಿರಿಸಲಾಗಿದೆ.	12 ಬೀಜೋತ್ಪಾದನಾ ಆವರ್ತ ನಿಧಿಯಡಿಯಲ್ಲಿ ಬೀಜೋತ್ಪಾದನೆ ಮಾಡಿ ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ಬೀಜ ಮಾರಾಟ ಮಾಡಲಾಗಿದ್ದು ಸದರಿಯವರಿಂದ ಬೀಜದ ಮೊತ್ತ ಪಾವತಿಯು ವಿಳಂಬವಾಗಿದ್ದರಿಂದ ಬೀಜೋತ್ಪಾದನಾ ಆವರ್ತ ನಿಧಿಯಲ್ಲಿ ಹಣದ ಕೊರತೆ ಉಂಟಾಗಿತ್ತು. ಕಾರಣ ತಳಿವರ್ಧಕ ಬೀಜ ಆವರ್ತ ನಿಧಿಯಿಂದ ಬೀಜೋತ್ಪಾದನಾ ಆವರ್ತ ನಿಧಿಗೆ ದಿ.13.9.2017 ರಂದು ರೂ.35,00,000.00 ಮೊತ್ತವನ್ನು ವರ್ಗಾಯಿಸಲಾಗಿತ್ತು. ಮುಂದುವರೆದು, ಕರ್ನಾಟಕ ರಾಜ್ಯ ಬೀಜ ನಿಗಮದಿಂದ ಬಾಕಿ ಹಣ ಪಾವತಿಯಾದ ನಂತರ ಚೆಕ್.ಸಂ.757261ರ ದಿನಾಂಕ 12.10.2020ರ ಮೂಲಕ ಬೀಜೋತ್ಪಾದನಾ ಆವರ್ತ ನಿಧಿಯಿಂದ ತಳಿವರ್ಧಕ ಆವರ್ತ ನಿಧಿಗೆ ರೂ.35,00,000.00 ಮೊತ್ತವನ್ನು ಮರು ವರ್ಗಾವಣೆ ಮಾಡಲಾಗಿದೆ.

13 **ಇತರೆ ಪ್ರಾಧಿಕಾರದ ಅನುದಾನ:–**

ಕ್ರ. ಸಂ.	ಆದಾಯ ಶೀರ್ಷಿಕೆಗಳ ವಿವರ	2017–18ನೇ ಸಾಲಿನ ವಾಸ್ತವಿಕ ಆದಾಯಗಳು
1	ಬ್ಲಾಕ್ ಗ್ರ್ಯಾಂಟ್	1834500000
2	ರಾಜ್ಯ ಸರ್ಕಾರದ ಅಡಹಾಕ ಪ್ರೊಜೆಕ್ಟ್	116328253.00
3	RKVY(ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ)	64000000.00
4	ಕೇಂದ್ರ ಸರಕಾರದ ಸಂಶೋಧನಾ ಯೋಜನೆ ಅನುದಾನ	33805183.00
5	ಅ.ಭಾ.ಸ ಸಂ. ಯೊ (ಎ.ಆಯ್.ಸಿ.ಆರ್.ಪಿ)	184223973.00
6	ಭಾ.ಕೃ.ಪ. –ಕೃ.ವಿ.ಕೇಂ.	67517121.00
7	ಭಾ.ಕೃ.ಪ. ಅಭಿವೃದ್ಧಿ ಅನುದಾನ	5199153.00
8	ಭಾ.ಕೃ.ಪ ಎಡಹಾಕ ಸಂಶೋಧನಾ ಯೋಜನೆ	20797534.00
9	ಇತರೆ ಹಣಕಾಸು ನೆರವು ಸಂಸ್ಥೆಯಿಂದ ಅನುದಾನ	25265918.00
10	ಇತರೆ ಮೂಲಗಳಿಂದ ಅನುದಾನಗಳು	4248966.75
	ಒಟ್ಟು	2355886101.75

13 ಅನುಸರಣೆ ಅವಶ್ಯವಿರುವುದಿಲ್ಲ

14 **ಅಧಿಕಾರಿ ಮತ್ತು ಬೋಧನಾ ಸಿಬ್ಬಂದಿಗಳ ಪಾವತಿ ಮತ್ತು ವೆಚ್ಚ :–**

ಕುಲಸಚಿವರ ಕಾರ್ಯಾಲಯದಿಂದ ನೇಮಕಾತಿ ಪ್ರಕ್ರಿಯೆಗಳು ಜರುಗುತ್ತವಾದ್ದರಿಂದ ಕೃಷಿ ವಿಶ್ವವಿದ್ಯಾಲಯಕ್ಕೆ ಕಾಲಕಾಲಕ್ಕೆ ಮಂಜೂರಾದ ವಿವಿಧ ವೃಂದದ ಹುದ್ದೆಗಳ ವಿವರವನ್ನು ದಾಖಲ್ಮಾಡುವ Scale Register ಗಳನ್ನು ಕಾಲೋಚಿತಗೊಳಿಸಿ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ–2 ದಿನಾಂಕ **04.08.2019** ರಲ್ಲಿ ನೀಡಲಾಗಿ ಯಾವುದೇ ಅನುಸರಣೆ ನೀಡಿರುವುದಿಲ್ಲ. Scale register ಕಾಲೋಚಿತಗೊಳಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

ಬೋಧಕ ಸಿಬ್ಬಂದಿ

Sl.no	cadre	No. of posts		
		sanctioned	filled	vacant
	Group A			
1	PROFESSOR	57	13	44
2	ASSOCIATE PROFESSOR	90	42	48
3	ASSISTANT PROFESSOR	448	398	50
	TOTAL	595	453	142

14 **Scale Register** ನ್ನು ಮುಂದಿನ ಲೆಕ್ಕ ಪರಿಶೋಧನೆಯಲ್ಲಿ ಹಾಜರು ಪಡಿಸಲಾಗುವುದು

<table>
<tr>
<td>15</td>
<td>

ಅಧಿಕಾರಿ ಮತ್ತು ಬೋಧಕೇತರ ಸಿಬ್ಬಂದಿಗಳ ಪಾವತಿ ಮತ್ತು ವೆಚ್ಚ:–

ಕುಲಸಚಿವರ ಕಾರ್ಯಾಲಯದಿಂದ ನೇಮಕಾತಿ ಪ್ರಕ್ರಿಯೆಗಳು ಜರುಗುತ್ತವಾದ್ದರಿಂದ ಕೃಷಿ ವಿಶ್ವವಿದ್ಯಾಲಯಕ್ಕೆ ಕಾಲಕಾಲಕ್ಕೆ ಮಂಜೂರಾದ ವಿವಿಧ ವೃಂದದ ಹುದ್ದೆಗಳ ವಿವರವನ್ನು ದಾಖಲ್ಮಾಡುವ Scale Register ಗಳನ್ನು ಕಾಲೋಚಿತಗೊಳಿಸಿ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ–2 ದಿನಾಂಕ 04.08.2019 ರಲ್ಲಿ ನೀಡಲಾಗಿ ಯಾವುದೇ ಅನುಸರಣೆ ನೀಡಿರುವುದಿಲ್ಲ. Scale register ಕಾಲೋಚಿತಗೊಳಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

ಬೋಧಕೇತರ ಸಿಬ್ಬಂದಿ

<table>
<tr><th rowspan="2">Sl.no</th><th rowspan="2">cadre</th><th colspan="3">No. of posts</th></tr>
<tr><th>Sanctioned</th><th>Filled</th><th>Vacant</th></tr>
<tr><td>1</td><td>Group A</td><td>44</td><td>29</td><td>15</td></tr>
<tr><td>2</td><td>Group B</td><td>60</td><td>34</td><td>26</td></tr>
<tr><td>3</td><td>Group C</td><td>567</td><td>346</td><td>221</td></tr>
<tr><td>4</td><td>Group D</td><td>403</td><td>93</td><td>310</td></tr>
<tr><td></td><td>TOTAL</td><td>1074</td><td>502</td><td>572</td></tr>
</table>

</td>
<td>

15 Scale Register ನ್ನು ಮುಂದಿನ ಲೆಕ್ಕ ಪರಿಶೋಧನೆಯಲ್ಲಿ ಹಾಜರು ಪಡಿಸಲಾಗುವುದು

</td>
</tr>
<tr>
<td>16</td>
<td>

ಪ್ರಯಾಣ ಭತ್ಯೆ ಮತ್ತು ವೆಚ್ಚ :–

ಕರ್ನಾಟಕ ನಾಗರಿಕ ಸೇವಾ ನಿಯಮಗಳು ಪ್ರಯಾಣ ಭತ್ಯೆಯ ದರಗಳ ಪರಿಷ್ಕರಣೆ ಮತ್ತು ಅರ್ಹತೆಗಳು ಮಾರ್ಪಾಡಿನ ಸರ್ಕಾರಿ ಆದೇಶ ಸಂಖ್ಯೆ:ಆಇ3 ಸೇನಿಸೇ 2012,ಬೆಂಗಳೂರು ದಿನಾಂಕ:14.06.2012ರ ಆದೇಶ (ಕ್ರ ಸಂ7 ರಲ್ಲಿ 7.1) ಕ್ಕೆ ವ್ಯತಿರಿಕ್ತವಾಗಿ ಪ್ರಯಾಣ ಭತ್ಯೆ ಪಾವತಿಸಿದ್ದು ಕಂಡುಬಂದಿರುತ್ತದೆ. ವಿವರಗಳನ್ನು ಭಾಗ–2 ರಲ್ಲಿ ವಿವರಿಸಿದೆ.

</td>
<td>

16 ನಿಯಮಾನುಸಾರ ಪಾವತಿಸಲಾಗಿದೆ

</td>
</tr>
</table>

17	**ಸಾದಿಲ್ವಾರು ವೆಚ್ಚ:–** ಕೃಷಿ ವಿಶ್ವವಿದ್ಯಾಲಯ ಧಾರವಾಡ ಕೊಟೇಶನ ಪಡೆಯದೇ ನೇರವಾಗಿ ಸರಕು/ಸೇವೆ ಪಡೆದಿರುವುದು ಹಾಗೂ ಖರೀದಿ ಪ್ರಕ್ರಿಯೆಯಲ್ಲಿ ಸರಿಯಾದ ಕ್ರಮವಹಿಸಿರುವುದಿಲ್ಲ. ಅಲ್ಲದೇ ಸಾದಿಲ್ವಾರು ವೆಚ್ಚದ ಕೈಪಿಡಿ **1958** ನಿಯಮಗಳು ನಿಯಮ **55 (49)** (ಎ) ರ ಹಾಗೂ ಸರ್ಕಾರಿ ಆದೇಶದ ಸಂಖ್ಯೆ: ಆಇ/**01**/ಟಿಸಿಇ/**2012** ಬೆಂಗಳೂರು, ದಿನಾಂಕ:**21.06.2012** ರ ಪ್ರಕಾರ ರೂ.**5,000**/– ಮೀರಿದ ಹಾಗೂ **1.00** ಲಕ್ಷಗಳ ವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ಕೊಟೇಶನ ಕರೆಯುದರ ಮೂಲಕ ಖರೀದಿಸುವುದು ಹಾಗೂ ಖರೀದಿ ಪ್ರಕ್ರಿಯೆಯಲ್ಲಿ ಸರಿಯಾದ ಕ್ರಮವಹಿಸುವುದು ಕಡ್ಡಾಯವಾಗಿದ್ದು, ಈ ಸದರಿ ನಿಯಮದ ಪಾಲನೆಯನ್ನು ಮಾಡದೇ ಇರುವುದು ಕಂಡುಬಂದಿದ್ದು, ಈ ಕುರಿತು ಭಾಗ–2ರಲ್ಲಿ ಕ್ರಮವಾಗಿ ವಿವರಿಸಿದೆ.	**17** ನೀಡಿದ ಸಲಹೆಗಳನ್ನು ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು
18	**ಪರೀಕ್ಷಾ ಸಿಬ್ಬಂದಿಗಳ ಸಂಭಾವನೆ:–** Section 28 of Karnataka Education Act 1983 ಪ್ರಕಾರ ಮತ್ತು ಕರ್ನಾಟಕ ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿಗಳ ಪತ್ರ ಸಂಖ್ಯೆ ಇಡಿ/**30**/ಯು.ಎನ್.ಇ/**2000** ದಿನಾಂಕ **11.08.2000** ಪ್ರಕಾರ ಪರೀಕ್ಷೆಗಳ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಸಂಭಾವನೆ ಪಾವತಿಸಲು ಅವಕಾಶವಿರುವುದಿಲ್ಲ ಮತ್ತು KCSR 28(B) ಟಿಪ್ಪಣಿ (**1**) ರ (A) ನಲ್ಲಿ No honoraria should be paid in respect of any work which can fairly be regarded as part of the legitimate duties of the Government servant concerned ಎಂದು ಹೇಳಿದೆ. ಇದಲ್ಲದೆ University of Agricultural Sciences Dharwad Act and statutes (as amended upto 31.07.2005 chapter 3 (22) officers of the university not to accept any remuneration other than that provided for by status. The officers of the university shall not be offered nor shall they accept any remuneration for any work in the university services such as may be provided for by the allowances and other conditions of services ಎಂದು ಹೇಳಿದೆ. ಅನುಶಾಸನದಲ್ಲಿ ಅವಕಾಶವಿಲ್ಲದೆ ಪರೀಕ್ಷಾ ಸಂಭಾವನೆಯನ್ನು ನೀಡಿರುವುದು ಕಂಡುಬಂದಿರುತ್ತದೆ.	**18** ಪರಿಶೀಲಿಸಿ ಕ್ರಮ ಜರುಗಿಸಲಾಗುವುದು

<table>
<tr>
<td>19</td>
<td>

ದಾಸ್ತಾನು ಲೆಕ್ಕ:–

2017–18ನೇ ಸಾಲಿನ ವಿಶ್ವವಿದ್ಯಾಲಯದ ಉಗ್ರಣ ವಿಭಾಗದಲ್ಲಿ ನಿರ್ವಹಿಸಿದ ಡೆಡಸ್ಟಾಕ್ ರಜಿಸ್ಟರ್ ಪ್ರಕಾರ ಅನುಪಯುಕ್ತ ದಾಸ್ತಾನು ವಸ್ತುಗಳು ಎಷ್ಟು ಇವೆ ಎಂಬ ಪಟ್ಟಿಯನ್ನು ತಯಾರಿಸಿ ಒದಗಿಸಲು ಕೋರಲಾಗಿತ್ತು.

ಕರ್ನಾಟಕ ಆರ್ಥಿಕ ಸಂಹಿತೆ **1958**ರ ನಿಯಮ **168**ರ, ಪ್ರಕಾರ ಅನುಪಯುಕ್ತ/ನಾಶವಾದ ದಾಸ್ತಾನುಗಳ ಸಾರ್ವಜನಿಕ ಹರಾಜು/ಲಿಲಾವುಗಳ ಬಗ್ಗೆ ಕೈಕೊಂಡ ಕ್ರಮದ ಮಾಹಿತಿ ಹಾಗೂ ಸಂಬಂಧಿಸಿದ ರಜಿಸ್ಟರನ್ನು ಒದಗಿಸಿರುವುದಿಲ್ಲ. ಮುಂದುವರೆದು, ಅನುಚ್ಛೇಧ **168**(ಬಿ) ಪ್ರಕಾರ ಯಾವುದೇ ಕಾರಣದಿಂದ ದಾಸ್ತಾನು ವಸ್ತುಗಳು ಯಾವಾಗಲೇ ಆಗಲೀ ಅಪ್ರಚಲಿತ, ಮಿಗಿತಾಯದ ಅಥವಾ ಅನುಪಯುಕ್ತವಾದವುಗಳಾದರೆ ಅವುಗಳನ್ನು ಹಾಗೆಂದು ಘೋಷಿಸಿ ಸಕ್ಷಮ ಅಧಿಕಾರಿ ವರ್ಗಕ್ಕೆ ಒಪ್ಪಿಸಿ ಅವರ ಆದೇಶಗಳ ಮೇರೆಗೆ ವಿ.ವಿ.ಗೆ ಲಾಭವಾಗುವ ರೀತಿಯಲ್ಲಿ ಸಾರ್ವಜನಿಕ ಹರಾಜಿನಲ್ಲಿ ಮಾರಾಟ ಮಾಡುವುದು ಅಥವಾ ಬೇರೆ ಬೇರೆಯಾಗಿ ವಿಲೇವಾರಿ ಮಾಡುವುದು ಕಡ್ಡಾಯವಾಗಿರುತ್ತದೆ. ಕರ್ನಾಟಕ ಸ್ಟೋರ್ಸ್ ಮ್ಯಾನ್ಯೂವಲ್‌ನ ಕ್ರಮ ಸಂಖ್ಯೆ **69**ರ ಪ್ರಕಾರ ಭೌತಿಕ ಪರಿಶೀಲನೆ ಪ್ರಮಾಣ ಪತ್ರವನ್ನು ದಾಸ್ತಾನು ವಹಿಯಲ್ಲಿ ನಮೂದಿಸಿರುವುದಿಲ್ಲ. ವಿವರಗಳನ್ನು ಭಾಗ–**2** ರಲ್ಲಿ ವಿವರಿಸಿದೆ.

</td>
<td>

19 ಕರ್ನಾಟಕ ಆರ್ಥಿಕ ಸಂಹಿತೆ **1958** ಅನುಚ್ಛೇದ **168** ಬಿ ರ ನುಸಾರ ಕ್ರಮ ಜರುಗಿಸಲಾಗುವುದು.

</td>
</tr>
<tr>
<td>20</td>
<td>

ಇತರೆ ಮುಂಗಡ:–

2017–18ನೇ ಸಾಲಿನ ಕೃಷಿ ವಿಶ್ವವಿದ್ಯಾಲಯ ಧಾರವಾಡದ ವಾರ್ಷಿಕ ಲೆಕ್ಕ ಪತ್ರಗಳನ್ನು ಪರಿಶೀಲಿಸಲಾಗಿ, ವಿವಿಧೋದ್ದೇಶಗಳಿಗಾಗಿ ವಿಶ್ವವಿದ್ಯಾಲಯವು ನೀಡಿದ ಮುಂಗಡದ ವಿವರ ಈ ಕೆಳಗಿನಂತಿದೆ.

<table>
<tr><th>ಕ್ರ.ಸಂ</th><th>ವಿವರ</th><th>ಮೊತ್ತ</th></tr>
<tr><td>01</td><td>ದಿನಾಂಕ 01.04.2017ರ ಪ್ರಾರಂಭಿಕ ಶಿಲ್ಕು</td><td>1140920</td></tr>
<tr><td>02</td><td>ಸನ್ 2017–18ರಲ್ಲಿ ನೀಡಿರುವ ಮುಂಗಡ</td><td>139420491</td></tr>
<tr><td></td><td>ಒಟ್ಟು</td><td>140561411</td></tr>
<tr><td>03</td><td>2017–18ನೇ ಸಾಲಿನ ಮರು ಹೊಂದಾಣಿಕೆ</td><td>139608091</td></tr>
<tr><td>04</td><td>ದಿನಾಂಕ:31.03.2018ರ ಅಂತಿಮ ಶಿಲ್ಕು</td><td>953320</td></tr>
</table>

ಕರ್ನಾಟಕ ಆರ್ಥಿಕ ಸಂಹಿತೆ **1958** ರ ನಿಯಮ **243** ರಂತೆ ಮುಂಗಡವನ್ನು ಒಂದು ತಿಂಗಳಿನೊಳಗಾಗಿ ಹೊಂದಾಣಿಕೆ ಮಾಡಿ ಭರಿಸಬೇಕಾಗಿದ್ದು, ಅದರ ಅನುಗುಣವಾಗಿ ಯಾವುದೇ ಕ್ರಮ ಕೈಗೊಳ್ಳದಿರುವುದು ಕಂಡುಬಂದಿರುತ್ತದೆ. ಈ ಕುರಿತು ವಿ.ವಿ.ಯು ಯಾವುದೇ ಕ್ರಮವಹಿಸದಿರುವುದರಿಂದ ಹಣದ ಸೋರಿಕೆ ಹಾಗೂ ಆದಾಯ ನಷ್ಟವಾಗಿರುತ್ತದೆ. ವಿವರಗಳನ್ನು ಭಾಗ–**2** ರಲ್ಲಿ ವಿವರಿಸಿದೆ.

</td>
<td>

20 ಕಂಡಿಕೆಯಲ್ಲಿ ವಿವರಿಸಿದ ಮೊತ್ತವು ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿಯೂ ಬಂದಿರುವುದರಿಂದ ₹. **953320/–** ಕೈಬಿಡಲು ಕೋರಲಾಗಿದೆ.

</td>
</tr>
</table>

21	**ಪಿಂಚಣಿ ಯೋಜನೆಗಳು:–** **ಅನುಶಾಸನವಿಲ್ಲದೇ ಬೋಧಕೇತರ ಸಿಬ್ಬಂದಿಗಳಿಗೆ ಕಾಲಬದ್ದ ವೇತನ ಬಡ್ತಿ ನೀಡಿರುವುದು, ವೇತನ ಬಡ್ತಿ ತಪ್ಪಾಗಿ ನಿಗದಿಪಡಿಸಿರುವುದು, ಅನಿಯಮಿತವಾಗಿ ಇಲಾಖೆ ಪರೀಕ್ಷೆ ಉತ್ತೀರ್ಣರಾಗಿದ್ದಕ್ಕೆ ಹೆಚ್ಚುವರಿ ವೇತನ ಪಾವತಿಸಿರುವುದರ ಕುರಿತು ಭಾಗ–2 ರಲ್ಲಿ ವಿವರಿಸಿದೆ.**	**21** ಸದರಿ ಪ್ರಕರಣಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು
22	**ಆಸ್ತಿ ರಜಿಸ್ಟರ್:–** **ಕೃಷಿ ವಿಶ್ವವಿದ್ಯಾಲಯ ಮತ್ತು ಹೊಣೆಗಾರಿಕೆಗಳ ಕುರಿತಾಗಿ ಪಿ.ಡಬ್ಲು.ಡಿ ಇಲಾಖೆ ಸಂಹಿತೆಯ ನಮೂನೆ–80ರಲ್ಲಿ ಈ ವಿವರವನ್ನು ತಯಾರಿಸಿ ಲೆಕ್ಕ ಪರಿಶೋಧನೆಗೆ ಒದಗಿಸಲು ತಿಳಿಸಿದೆ.**Karanataka Public Works Department Code-2014, **ಪ್ಯಾರಾ 298ರ ಅನುಸಾರ ಆಸ್ತಿ ವಹಿ ಹಾಗೂ ಸಂಬಂಧಿಸಿದ ದಾಖಲೆಗಳನ್ನು ನಿರ್ವಹಿಸಬೇಕಾಗುತ್ತದೆ.** **ವಿವರ ಕೆಳಗಿನಂತಿದೆ.** 1) Immovable Properties in form PWF-21 2) Register of buildings in form PWF-22 3) For all lands in possession of inform PWF-23 4) Register of leases lands PWF-24 **ಕೃಷಿ ವಿಶ್ವವಿದ್ಯಾಲಯದಲ್ಲಿ ಮೇಲೆ ತಿಳಿಸಿದಂತೆ ನಿಗದಿತ ನಮೂನೆಯಲ್ಲಿ ಆಸ್ತಿ ರಜಿಸ್ಟರ್ ನಿರ್ವಹಿಸದೇ ಇರುವುದರಿಂದ ಒಟ್ಟು ಆಸ್ತಿಯನ್ನು ದೃಢೀಕರಿಸಲು ಸಾಧ್ಯವಾಗುವುದಿಲ್ಲ.**	**22** ಆಸ್ತಿ ಬಗ್ಗೆ ವಿವರ ಪಟ್ಟಿ ತಯಾರಿಸಲಾಗಿದೆ. ಮುಂದಿನ ಲೆಕ್ಕ ತನಿಖೆಯಲ್ಲಿ ಪರಿಶೀಲಿಸಬಹುದಾಗಿದೆ.

ಕೃಷಿ ವಿಶ್ವವಿದ್ಯಾಲಯ, ಧಾರವಾಡ

ದಿ. 01.04.2017 ರಿಂದ 31.03.2018 ರ ಅವಧಿಯ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗೆ ಅನುಸರಣೆಗಳು

ಭಾಗ–2

<table>
<tr><th>ಕಂಡಿಕೆ ಸಂ.</th><th>ಆಕ್ಷೇಪಣೆಯ ವಿವರಗಳು</th><th>ಅನುಸರಣೆಗಳು</th></tr>
<tr><td>1</td><td>
ಆಯವ್ಯಯ ಅಂದಾಜು ಪತ್ರಿಕೆ ಪರಿಶೀಲನೆ.
(ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.6.1)
2017–18 ನೇ ಸಾಲಿನ ಅಯವ್ಯಯ ಅಂದಾಜು ಪತ್ರಿಕೆಗೆ 17 ನೇ ಹಣಕಾಸು ಸಮಿತಿ(Finance committee) ಸಭೆಯ ನಡುವಳಿಯಡಿಯಲ್ಲಿ ದಿನಾಂಕ: 25.03.2017 ರಂದು ಅನುಮೋದನೆ ಪಡೆದುಕೊಂಡಿರುತ್ತದೆ.
ಕೃ.ವಿ.ವಿ.ಯ 35 ನೇ ವ್ಯವಸ್ಥಾಪನಾ ಮಂಡಳಿಯ ದಿನಾಂಕ:25.03.2017 ರಂದು ಅನುಮೋದನೆ ಪಡೆದುಕೊಂಡಿರುತ್ತದೆ.
2017–18 ನೇ ಸಾಲಿನ ಪರಿಷ್ಕೃತ ಅಯವ್ಯಯ ಅಂದಾಜು ಪತ್ರಿಕೆಯನ್ನು 20 ನೇ ಹಣಕಾಸು ಸಮಿತಿ (Finance committee) ಸಭೆಯ ನಡುವಳಿಯಡಿಯಲ್ಲಿ ದಿನಾಂಕ: 23.03.2018 ರಂದು ಅನುಮೋದನೆ ಪಡೆದುಕೊಂಡಿರುತ್ತದೆ.
2017–18 ನೇ ಸಾಲಿನ ಪರಿಷ್ಕೃತ ಅಯವ್ಯಯ ಅಂದಾಜು ಪತ್ರಿಕೆಯನ್ನು 41 ನೇ ವ್ಯವಸ್ಥಾಪನಾ ಮಂಡಳಿಯ ಸಭೆಯ ನಡುವಳಿಯಡಿಯಲ್ಲಿ ದಿನಾಂಕ: 23.03.2018 ರಂದು ಅನುಮೋದನೆ ಪಡೆದುಕೊಂಡಿರುತ್ತದೆ.
<u>ಆದಾಯಗಳು (ಕೋಟಿಗಳಲ್ಲಿ)</u>
<table>
<tr><th>ಆಯವ್ಯಯ ಅಂದಾಜು ಆದಾಯ</th><th>ಪರಿಷ್ಕೃತ ಅಂದಾಜು ಆದಾಯ</th><th>ಆದಾಯ ಮತ್ತು ವೆಚ್ಚದ ತಖ್ತೆಯಂತೆ ವಾಸ್ತವಿಕ ಆದಾಯ</th><th>ಆದಾಯದಲ್ಲಿನ ವ್ಯತ್ಯಾಸ</th></tr>
<tr><td>354.72</td><td>492.08</td><td>617.74</td><td>125.66</td></tr>
</table>
</td><td>
1. ಈ ರೀತಿ ಆಯವ್ಯಯ ಅಂದಾಜು ಪತ್ರಿಕೆಯಲ್ಲಿ ಕಂಡು ಬಂದ ವ್ಯತ್ಯಾಸಗಳಿಗೆ ಪರಿಷ್ಕೃತ ಆಯವ್ಯಯದಲ್ಲಿ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಪಡೆಯಲಾಗಿದೆ. ಅಂದಾಜು ಪತ್ರಿಕೆ ತಯಾರಿಸುವಲ್ಲಿ ನೀಡಿದ ಸಲಹೆಗಳನ್ನು ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾತ್ತಿದೆ.
</td></tr>
</table>

1. <u>ವೆಚ್ಚಗಳು (ಕೋಟಿಗಳಲ್ಲಿ)</u>

ಆಯವ್ಯಯ ಅಂದಾಜು ವೆಚ್ಚ	ಪರಿಷ್ಕೃತ ಅಂದಾಜು ವೆಚ್ಚ	ಆದಾಯ ಮತ್ತು ವೆಚ್ಚದ ತಖ್ತೆಯಂತೆ ವಾಸ್ತವಿಕ ವೆಚ್ಚ	ವೆಚ್ಚದಲ್ಲಿನ ವ್ಯತ್ಯಾಸ
(1)	(2)	(3)	(4)(2–3)
368.98	569.55	619.30	49.75

ಆಯವ್ಯಯ ಅಂದಾಜು ಪತ್ರಿಕೆಯಲ್ಲಿ ಸ್ವೀಕೃತಿ ಹಾಗೂ ವೆಚ್ಚದ ಭಾಗದಲ್ಲಿ ಕೇವಲ ಸಾಮಾನ್ಯ ನಿಧಿಯ ಜಮೆ ಹಾಗೂ ಖರ್ಚುಗಳನ್ನು ಪರಿಗಣಿಸಿದ್ದು ವಾರ್ಷಿಕ ಲೆಕ್ಕ ಪತ್ರದಲ್ಲಿ ದಾಖಲಿಸಿದ ವಿಶ್ವವಿದ್ಯಾಲಯದ ಇತರೆ ಖಾತೆಗಳ ವಿವರಗಳನ್ನು ಪರಿಗಣಿಸಿರುವುದಿಲ್ಲ.

ಪರಿಷ್ಕೃತ ಅಂದಾಜು ಆದಾಯಕ್ಕಿಂತ 25% ಹೆಚ್ಚಿಗೆ ಆದಾಯ ಸ್ವೀಕೃತವಾಗಿದ್ದು ಹಾಗೂ ಪರಿಷ್ಕೃತ ಅಂದಾಜು ವೆಚ್ಚಕ್ಕಿಂತ 8.4% ಹೆಚ್ಚಿಗೆ ವಾಸ್ತವಿಕ ವೆಚ್ಚವಾಗಿರುತ್ತದೆ. ಕರ್ನಾಟಕ ಬಜೆಟ್ ಕೈಪಿಡಿ 1958 ರ ನಿಯಮ 86ರ ಪ್ರಕಾರ ಬಜೆಟ್ ಅಂದಾಜುಗಳನ್ನು ನಿಯಮಾನುಸಾರ ಒಟ್ಟು ಆಧಾರದ ಮೇಲೆ ತಯಾರಿಸಬೇಕೆ ಹೊರತು ನಿವ್ವಳ ಆಧಾರದ ಮೇಲೆ ಅಲ್ಲ, ಈ ಕುರಿತು ಸೂಕ್ತ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ನೀಡಲು ಕೋರಿದ್ದು ಅನುಸರಣೆ ನೀಡಿರುವುದಿಲ್ಲ. ಆಯವ್ಯಯ ತಯಾರಿಸುವಲ್ಲಿ ವಾಸ್ತವಿಕತೆಯ ನಿಖರತೆ ಹಾಗೂ ಬಜೆಟ್ ಕೈಪಿಡಿ ನಿಯಮ 229 ಮತ್ತು 230 ನ್ನು ಪಾಲಿಸದೆ ಇರುವುದು ಕಂಡುಬರುತ್ತದೆ. ವಿವರಗಳನ್ನು ಅನುಬಂಧ–4 ರಲ್ಲಿ ವಿವರಿಸಿದೆ.

2	**ಲೆಕ್ಕಪರಿಶೋಧನಾ ಕಾರ್ಯದಲ್ಲಿ ಈ ಕೆಳಗಿನ ಕಾಯ್ದೆ ಹಾಗೂ ನಿಯಮಾವಳಿಗಳನ್ನು ಆದರಿಸಿಕೊಳ್ಳಲಾಗಿದೆ.** 1963 ರ ಕರ್ನಾಟಕ ಕೃಷಿ ವಿಶ್ವವಿದ್ಯಾಲಯಗಳ ಅಧಿನಿಯಮದ 36 ಹಾಗೂ 38 ರನ್ವಯ ವಿಶ್ವವಿದ್ಯಾಲಯಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಗಮನದಲ್ಲಿರಿಸಿಕೊಂಡು ವಿಶ್ವವಿದ್ಯಾಲಯದ ಲೆಕ್ಕಪರಿಶೋಧನಾ ಕಾರ್ಯವನ್ನು ಕೈಕೊಳ್ಳಲಾಗಿದೆ. ಈ ಕಾರ್ಯದಲ್ಲಿ Statute adopting KCSR/KFC & MCE Providing TA/DA financial scheme & Purchase etc rule of Agricultural university Dharwadಈ ಶಾಸನ ಹಾಗೂ ಈ ಕೆಳಗಿನ ಕಾಯ್ದೆ ಮತ್ತು ನಿಯಮಾವಳಿಗಳನ್ನು ಆಧರಿಸಿಕೊಳ್ಳಲಾಗಿದೆ. 1) ಕೃಷಿ ವಿಶ್ವವಿದ್ಯಯಾಲಯ ಕಾಲಕಾಲಕ್ಕೆ ಹೊರಡಿಸಿದ ಅನುಶಾಸನಗಳು, ಆಧ್ಯಾದೇಶಗಳು,	2ಸದರಿ ನಿಯಮಾವಳಿಗಳನ್ವಯ ಕ್ರಮ ಜರುಗಿಸಲಾಗುತ್ತಿದೆ

	ಪರಿನಿಯಮಗಳು 2) ಕರ್ನಾಟಕ ಆರ್ಥಿಕ ಸಂಹಿತೆ 1958. 3) ಸಾದಿಲ್ವಾರು ವೆಚ್ಚದ ಕೈಪಿಡಿ 1958. 4) ಕರ್ನಾಟಕ ಬಜೆಟ್ ಕೈಪಿಡಿ 5) ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಸಿಸಿಎ ನಿಯಮಾವಳಿಗಳು ಇತ್ಯಾದಿ. 6) ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ. 7) ಕರ್ನಾಟಕ ಲೋಕೋಪಯೋಗಿ ಲೆಕ್ಕಪತ್ರ ಸಂಹಿತೆ. 8) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000. 9) ಸರಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ಆದೇಶಗಳು ಹಾಗೂ ಸುತ್ತೋಲೆಗಳು. 10) ಸಾಮಾನ್ಯ ಆರ್ಥಿಕ ನಿಯಮಗಳು (ಜಿಎಫ್ಆರ್)2005 ರಾಜ್ಯ ಮತ್ತು ಕೇಂದ್ರದ ಯೋಜನೆಗಳ ಅನುದಾನಗಳು 11) ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ 2002 ತತ್ಸಮಬದ್ಧ ನಿಯಮಗಳು 2003 (ಕರ್ನಾಟಕ ಫಿಸ್ಕಲ್ ರೆಸ್ಪಾನ್ಸಿಬಿಲಿಟಿ ಆ್ಯಕ್ಟ್) ಮೈಸೂರು ಸ್ಥಳೀಯ ನಿಧಿಗಳ ಲೆಕ್ಕಪರಿಶೋಧನಾ ಕೈಪಿಡಿಯ ಕಂಡಿಕೆ 220 ರನ್ವಯ ಕೃಷಿ ವಿಶ್ವವಿದ್ಯಾಲಯ ಧಾರವಾಡದ ಮಾಸಿಕ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವುದು ಕಡ್ಡಾಯವಾಗಿದೆ. ಮಾಸಿಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದೇ ಇರುವುದರಿಂದ 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿ ವರದಿಯನ್ನು ಸಿದ್ಧಪಡಿಸಲಾಗಿದೆ. ಈ ಲೆಕ್ಕಪತ್ರಗಳಲ್ಲಿ ಕಂಡುಬಂದ ನ್ಯೂನತೆಗಳು ಹಾಗೂ ವಿಶ್ವವಿದ್ಯಾಲಯದ ಆಡಳಿತ ವಿಭಾಗ, ಪರೀಕ್ಷಾ ವಿಭಾಗ, ಹಣಕಾಸು ವಿಭಾಗ, ಇಂಜೀನಿಯರಿಂಗ್ ವಿಭಾಗ ಮತ್ತು ವಿವಿಧ ಘಟಕಗಳಲ್ಲಿ ಕಂಡುಬಂದ ಗುರುತರವಾದ ನ್ಯೂನತೆಗಳನ್ನು ವರದಿ ಮಾಡಲಾಗಿದೆ.	

3	**ಕೃಷಿ ವಿಶ್ವವಿದ್ಯಾಲಯ ಧಾರವಾಡದ 2017–18 ನೇ ಆರ್ಥಿಕ ಸಾಲಿನ ವಾರ್ಷಿಕ ಲೆಕ್ಕ ಪತ್ರ ಹಾಗೂ ಹಣಕಾಸು ವಹಿವಾಟುಗಳಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತು.** **(ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.7)** **1963 ಕರ್ನಾಟಕ ವಿಶ್ವವಿದ್ಯಾಲಯ ಕಾಯ್ದೆ ಕಲಂ 38 ರಂತೆ ಪ್ರತಿ ಆರ್ಥಿಕ ವರ್ಷ ಮುಗಿದ ಕೂಡಲೇ ವಿಶ್ವವಿದ್ಯಾಲಯದ ಎಲ್ಲ ಮೂಲಗಳ ಆದಾಯ ಮತ್ತು ಖರ್ಚುಗಳನ್ನೊಳಗೊಂಡ ವಾರ್ಷಿಕ ಲೆಕ್ಕ ಪತ್ರವನ್ನು ತಯಾರಿಸಿ ಸರಕಾರಕ್ಕೆ ಸಲ್ಲಿಸಬೇಕೆಂದಿದೆ. 2017–18 ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳಲ್ಲಿನ ಸ್ವೀಕೃತಿ ಮತ್ತು ಪಾವತಿಗಳ ವಿವರಗಳನ್ನು ಅನುಬಂಧ– "5" ರಲ್ಲಿ ವಿವರಿಸಿದೆ.** **ಕೃಷಿ ವಿಶ್ವವಿದ್ಯಾಲಯ ಧಾರವಾಡದ, ಹಣಕಾಸು ನಿಯಂತ್ರಣ ಅಧಿಕಾರಗಳ ಕಚೇರಿಯ 2017–18 ನೇ ಸಾಲಿನ ಲೆಕ್ಕಪರಿಶೋಧನೆ ವೇಳೆ ಪರಿಶೀಲಿಸಲಾಗಿ ವಾರ್ಷಿಕ ಲೆಕ್ಕಪತ್ರ ಹಾಗೂ ಹಣಕಾಸು ವಹಿವಾಟುಗಳಲ್ಲಿ ಈ ಕೆಳಕಂಡ ನ್ಯೂನ್ಯತೆಗಳು ಕಂಡುಬಂದಿರುತ್ತವೆ.** **i) ಬಜೆಟ್ ಪುಸ್ತಕ (ಆಯವ್ಯಯ ಅಂದಾಜು)**	**3 ಕಂಡಿಕೆಯಲ್ಲಿ ವಿವರಿಸಿದರನುಸಾರ ಕ್ರಮ ಜರುಗಿಸಲಾಗುತ್ತಿದೆ**
	2017–18 ನೇ ಸಾಲಿನ ಬಜೆಟ್‌ನಲ್ಲಿ '0' (zero)ಬಜೆಟ್ ಇದ್ದು ಪರಿಷ್ಕೃತ ಅಂದಾಜಿನಲ್ಲಿ ಕಾಯ್ದಿರಿಸುವ ಮೊತ್ತದ ಕೆಲವು ಉದಾಹರಣೆಗಳು ಈ ಕೆಳಗಿನಂತಿವೆ.	**ಆಯವ್ಯಯ ಕೈಪಿಡಿಯ ನಿಯಮಗಳನ್ನು ಅಳವಡಿಸಿಕೊಳ್ಳಲಾಗುವುದು.**

i) ಎಬಿಎಸಿ 2001	ಅಂದಾಜು	ಪರಿಷ್ಕೃತ ಅಂದಾಜು
718	**0**	**3,00,000**
801	**0**	**3,75,000**
803	**0**	**13,00,000**
	ಒಟ್ಟು ಮೊತ್ತ	**19,75,000**
i i) ಎಬಿಎಸಿ 3210 **625**		
	0	**2,00,000**
	ಒಟ್ಟು ಮೊತ್ತ	**2,00,000**
i i i) ಎಬಿಎಸಿ 3214 **452**		
	0	**1,10,000**
	ಒಟ್ಟು ಮೊತ್ತ	**1,10,000**
iv) ಎಬಿಎಸಿ 3423		

022	0	3,00,000
023	0	4,00,000
025	0	35,000
	ಒಟ್ಟು ಮೊತ್ತ	7,35,000

ಆದರೆ ಕರ್ನಾಟಕ ಬಜೆಟ್ ಕೈಪಿಡಿ 1958 ರ ನಿಯಮ 179 ಮತ್ತು 180 ರ ಪ್ರಕಾರ ಪರಿಷ್ಕೃತಅಂದಾಜುಗಳ ಸಾಮಾನ್ಯವಾಗಿ ವರ್ಷದ ಮೊದಲ ಆರು,ಎಂಟು ಅಥವಾ ಒಂಭತ್ತು ತಿಂಗಳುಗಳ ವಾಸ್ತವಿಕ ಆಧಾರದ ಮೇಲೆ ರಚಿತವಾಗಬೇಕು ಅದರಂತೆ '0' ಬಜೆಟ್ ಇಟ್ಟು ಪರಿಷ್ಕೃತ ಅಂದಾಜಿನಲ್ಲಿ ಮೊತ್ತ ಕಾಯ್ದಿರಿಸಿದ ಕುರಿತು ಸ್ಪಷ್ಟೀಕರಣ ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ 112 ದಿನಾಂಕ 28.01.2020 ನ್ನು ನೀಡಿದ್ದು ಅನುಸರಣೆಯಲ್ಲಿ ತಿಳಿಸಿದಂತೆ ಹಣಕಾಸು ನಿಯಂತ್ರಣಾಧಿಕಾರಿಗಳ ಆಯವ್ಯಯ ಸಭೆಯಲ್ಲಿ ತಿರ್ಮಾನಿಸಿ ಕೈಗೊಂಡ ಕ್ರಮದಂತೆ '0' ಆಯವ್ಯಯವನ್ನು ಸರಿದೂಗಿಸುವ ಕ್ರಮ ಜರುಗಿಸಿರುವುದು ಸರಿಯಾದ ಕ್ರಮವೆಂದು ತಿಳಿಸಿರುತ್ತಾರೆ ಆದರೆ ಮೇಲ್ಕಾಣಿಸಿದ ಬಜೆಟ್ ಕೈಪಿಡಿ ನಿಯಮದಂತೆ ಸರಿಯಾದ ಕ್ರಮವಾಗಿರುವುದಿಲ್ಲ.

	2.2017–18 ನೇ ಸಾಲಿನಲ್ಲಿ ಆಯವ್ಯಯ ಅಂದಾಜು ಪತ್ರಿಕೆ ತಯಾರಿಸುವ ಮುನ್ನ "9 ತಿಂಗಳಿನ ವಾಸ್ತವಿಕ ಆದಾಯ ಮತ್ತು ವೆಚ್ಚವನ್ನು ಆಯವ್ಯಯ ಪುಸ್ತಕದಲ್ಲಿ ದಾಖಲಿಸಿರುವುದಿಲ್ಲ ಈ ಕುರಿತು ಸ್ಪಷ್ಟೀಕರಣ ನೀಡಲು ಕೋರಿದ್ದು ಅದರಂತೆ ಸಲ್ಲಿಸಿದ ಅನುಸರಣೆಯಲ್ಲಿ ಪರಿಷ್ಕೃತ ಅಂದಾಜನ್ನು ಇದೇ ಸಾಲಿನಲ್ಲಿ ಹೊಂದಾಣಿಕೆ ಮಾಡಬೇಕಾದ ಸಂದರ್ಭ ಇರುವುದರಿಂದ ಈ ಕ್ರಮ ಜರುಗಿಸಲಾಗಿದೆ ಎಂದು ತಿಳಿಸಿದ್ದು ಲೆಕ್ಕ ಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ ಕಾರಣ ಬಜೆಟ್ ಕೈಪಿಡಿ ನಿಯಮದಂತೆ ಆಯವ್ಯಯ ತಯಾರಿಸುವಾಗ 9 ತಿಂಗಳಿನ ವಾಸ್ತವಿಕ ಆದಾಯ ಮತ್ತು ವೆಚ್ಚಗಳ ಆಧಾರದ ಮೇಲೆ ಆಯವ್ಯಯವನ್ನು ತಯಾರಿಸಲು ಸೂಚಿಸಿದೆ.	ಕಂಡಿಕೆಯಲ್ಲಿ ವಿವರಿಸಿದರನುಸಾರ ಅಳವಡಿಸಿಕೊಳ್ಳಲಾಗುವುದು
	3.ಜಮಾ ಲೆಕ್ಕಶೀರ್ಷಿಕೆDAC 787ರಲ್ಲಿ ಅಂದರೆ ಆಯವ್ಯಯ ಪುಸ್ತಕದಲ್ಲಿ ಶೀರ್ಷಿಕೆ ಹೆಸರುRevolving Fund For Payment of Civil Works ಅಂತಾ ದಾಖಲಿಸಿದ್ದು ವಾರ್ಷಿಕಲೆಕ್ಕಪತ್ರದಲ್ಲಿ Payment Received from Revolving Fundಎಂಬ ಶೀರ್ಷಿಕೆ ಹೆಸರು ಇರುತ್ತದೆ ಆದರೆ ಕರ್ನಾಟಕ ಬಜೆಟ್ ಕೈಪಿಡಿ, 1958 ರ ನಿಯಮ 91 ರಪ್ರಕಾರ ಇಲಾಖಾ ಮುಖ್ಯಸ್ಥರು ಮತ್ತು ಇತರ ಅಂದಾಜು ಅಧಿಕಾರಿಗಳು ಯಾವುದೇ ಲೆಕ್ಕ ಶೀರ್ಷಿಕೆಗಳ ನಾಮಕರಣ ಪದ್ದತಿಯನ್ನು ಬದಲಾಯಿಸಬಾರದೆಂದಿರುತ್ತದೆ ಈ ಕುರಿತು ಸ್ಪಷ್ಟೀಕರಣ ನೀಡಲು ಕೋರಿದ್ದು ಅದರಂತೆ ಸಲ್ಲಿಸಿದ ಅನುಸರಣೆಯಂತೆ ಕಣ್ತಪ್ಪಿನಿಂದ ವ್ಯತ್ಯಾಸವಾಗಿದೆ ಎಂದು ತಿಳಿಸಿದ್ದು ಸದರಿ ನ್ಯೂನ್ಯತೆಯನ್ನು ಸರಿಪಡಿಸಿಕೊಂಡು ಮುಂದೆ ತಪ್ಪಾಗದಂತೆ ಎಚ್ಚರವಹಿಸಿ ಆಯವ್ಯಯವನ್ನು ತಯಾರಿಸಲು ಸೂಚಿಸಿದೆ.	ಕಂಡಿಕೆಯಲ್ಲಿ ವಿವರಿಸಿದರನುಸಾರ ಅಳವಡಿಸಿಕೊಳ್ಳಲಾಗುವುದು
	4.2017–18 ನೇ ಸಾಲಿನ ಆಯವ್ಯಯ ಅಂದಾಜು ಪತ್ರಿಕೆ ಪರಿಶೀಲಿಸಲಾಗಿ ಅಂದಾಜು ಪತ್ರಿಕೆಯಲ್ಲಿನಕೆಲವು ಘಟಕ/ವಿಭಾಗಗಳ ವೆಚ್ಚವನ್ನು ಪರಿಶೀಲಿಸಲಾಗಿ ಅನೇಕ ಶೀರ್ಷಿಕೆಗಳಲ್ಲಿ ಅಂದಾಜು ಮೊತ್ತತಯಾರಿಸಿ ಈ ಮೊತ್ತವನ್ನು ಶೇ 50% ಕ್ಕಿಂತ ಹೆಚ್ಚು ಪರಿಷ್ಕೃತ ಅಂದಾಜು ತೋರಿಸಲಾಗಿದೆ ಈ	ಆಯವ್ಯಯ ಕೈಪಿಡಿಯ ನಿಯಮಗಳನ್ನು ಪಾಲಿಸಲಾಗುವುದು

ಕುರಿತು ಸ್ಪಷ್ಟೀಕರಣ ನೀಡಲು ಕೋರಿದ್ದು ನೀಡಿದ ಅನುಸರಣೆಯಲ್ಲಿ ಆಯವ್ಯಯ ತಯಾರಾದ ನಂತರದ ದಿನಗಳಲ್ಲಿ ಸ್ವೀಕೃತಿಯಾದ ಅನುದಾನದಂತೆ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಲಾಗುವುದು ಎಂದು ತಿಳಿಸಿದ್ದು ನಿಶ್ಚಿತವಾಗಿ ಸ್ವೀಕೃತಗೊಳ್ಳುವ ಆದಾಯಗಳನ್ನು ಗಣನೆಗೆ ತೆಗೆದುಕೊಂಡು ಆಯವ್ಯಯ ತಯಾರಿಸುವುದು ಹಾಗೂ ಅಂದಾಜು ಆಯವ್ಯಯ ಮತ್ತು ಪರಿಷ್ಕೃತ ಆಯವ್ಯಯ ಸರಿದೂಗುವ ನಿಟ್ಟಿನಲ್ಲಿ ಬಜೆಟ್ ಕೈಪಡಿ ನಿಯಮ ಅವಲೋಕಿಸಿ ಕ್ರಮ ಜರುಗಿಸಲು ಸೂಚಿಸಿದೆ.

ಉದಾಹರಣೆ.

ಲೆಕ್ಕ ಶೀರ್ಷಿಕೆ	ವಾ.ಲೆ.ಪ.	ಪರಿಷ್ಕೃತ	ವ್ಯತ್ಯಾಸ ರೂ ಗಳಲ್ಲಿ	ವ್ಯತ್ಯಾಸ ಪ್ರತಿಶತದಲ್ಲಿ
5227	24275	1978407	1954132	98.77%
5012	159000	620100	461000	74.35%
5013	115405	371000	255595	68.89%

5.2017–18 ರ ಆಯವ್ಯಯ ಅಂದಾಜು ರೂ.**368,98,37,496/–** ಹಾಗೂ ಪರಿಷ್ಕೃತ ಅಂದಾಜು ರೂ.**569,55,20,603/–**ವ್ಯತ್ಯಾಸ ರೂ.**200,56,83,107/–** ರಷ್ಟು ಅಂದರೆ ಆಯವ್ಯಯ ಅಂದಾಜು ಮತ್ತು ಪರಿಷ್ಕೃತ ಆಂದಾಜಿಗೆ **54%** ರಷ್ಟು ವ್ಯತ್ಯಾಸವಿರುತ್ತದೆ ಆದರೆ ಕರ್ನಾಟಕ ಬಜೆಟ್ ಕೈಪಿಡಿ **1958** ರ ನಿಯಮ **96** ರ ಪ್ರಕಾರ ಬಜೆಟ್ ತಯಾರಿಕೆಯಲ್ಲಿ ಆದಷ್ಟು ಮಟ್ಟಿಗೆ ವಾಸ್ತವದ ಸರಿಸುಮಾರು ಹಂತವನ್ನು ಸಾಧಿಸುವುದೇ ಮುಖ್ಯ ಗುರಿ ಆಗಿರುತ್ತದೆ.ಆದರೆ ವಾಸ್ತವಕ್ಕೆ ಮತ್ತು ಪರಿಷ್ಕೃತ ಅಂದಾಜಿಗೆ ಇರುವ ವ್ಯತ್ಯಾಸದ ಕುರಿತು ಸ್ಪಷ್ಟೀಕರಣ ನೀಡಲು ಕೊರಿದ್ದು ನೀಡಿದ ಅನುಸರಣೆಯಲ್ಲಿ ಪರಿಷ್ಕೃತಆಯವ್ಯಯನ್ನು ನಿಖರವಾದ ಸ್ವೀಕೃತಿ ಮತ್ತು ವೆಚ್ಚದ ಆಧಾರದಲ್ಲಿ ತಯಾರಿಸಲಾಗುತ್ತದೆ ಎಂದು ತಿಳಿಸಿದೆ. ಮೇಲೆ ವಿವರಿಸಿದ ನಿಯಮದಂತೆ ಅಂದಾಜು ಮತ್ತು ಪರಿಷ್ಕೃತ ಅಂದಾಜು ತಯಾರಿಸಡಲು ಸೂಚಿಸಿದೆ.**6.** ವಾರ್ಷಿಕ ಲೆಕ್ಕಪತ್ರದಲ್ಲಿ ತೋರಿಸಿರುವ ವೆಚ್ಚಕ್ಕೂ ಹಾಗೂ ಕೆಲವು ಲೆಕ್ಕ ಶೀರ್ಷಿಕೆಗಳಲ್ಲಿನ ವೋಚರಗಳಲ್ಲಿ ತೋರಿಸಿರುವ ವೆಚ್ಚಕ್ಕೆ ತಾಳೆಯಾಗದಿರುವುದು ಲೆಕ್ಕ ಪರಿಶೋದನೆ ವೇಳೆ ಕಂಡುಬರುತ್ತದೆ ಈ ಕುರಿತು ಸ್ಪಷ್ಟೀಕರಣ ನೀಡಲು ಕೋರಿದ್ದು ಸದರಿ ಲೆಕ್ಕ ಶೀರ್ಷಿಕೆಗಳಲ್ಲಿ ಸಾದಿಲ್ವಾರು ಬಿಲ್ಲುಗಳ ಹೊಂದಾಣಿಕೆಯಲ್ಲಿನ ವ್ಯತ್ಯಾಸವಾಗಿರುತ್ತದೆಂದು ಅನುಸರಣೆ ನೀಡಿರುತ್ತಾರೆಕಾರಣ ಉದಾಹರಣೆಯಲ್ಲಿ ಸೂಚಿಸಿದ ಹಾಗೂ ಇನ್ನೂಳಿದ ಲೆಕ್ಕ ಶೀರ್ಷಿಕೆಗಳಲ್ಲಿ ಆದ ವ್ಯತ್ಯಾಸಗಳನ್ನು ಸರಿಪಡಿಸಿಕೊಳ್ಳಲು ಸೂಚಿಸಿದೆ.

ಆಕ್ಷೇಪಣೆಯಂತೆ ಅಂದಾಜು & ಪರಿಷ್ಕೃತ ಅಂದಾಜು ತಯಾರಿಸುವ ಸಮಯದಲ್ಲಿ ಕ್ರಮ ಜರುಗಿಸಲಾಗುವುದು.

	ಉದಾಹರಣೆ: |	ವಾ.ಲೆ.ಪ.	ವೋಚರ್	ವ್ಯತ್ಯಾಸ
---	---	---	---
ಎಬಿಎಸಿ 7011	**1574299**	**1501590**	**72709**
7064	**2621475**	**223254**	**38892**
7082	3292484	3033353	259131 | **ii)ಸ್ವೀಕೃತಿ ಮತ್ತು ಪಾವತಿ:**	ಕಂಡಿಕೆಯಲ್ಲಿ ವಿವರಿಸಿದಂತೆ ವ್ಯತ್ಯಾಸಗಳನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು
	7.ಲೆಕ್ಕ ಪರಿಶೋಧನೆಗೆ ಒದಗಿಸಿದ ಮಾಹಿತಿಯಂತೆDAC-805 Professional Taxಲೆಕ್ಕಖಾತೆಯಲ್ಲಿ ರೂ.35,23,000/– ವೃತ್ತಿ ತೆರಿಗೆ ಜಮೆಯಾಗಿದ್ದು ಈ ಮೊತ್ತವನ್ನು ಆದಾಯ ಮತ್ತು ವೆಚ್ಚ ತಃಖ್ತೆಯಲ್ಲಿ ತೋರಿಸಿರುವುದಿಲ್ಲ. ಈ ಕುರಿತು ಸೂಕ್ತ ಸ್ಪಷ್ಟೀಕರಣ ನೀಡಲು ಕೋರಿದ್ದು ನೀಡಿದ ಅನುಸರಣೆಯಲ್ಲಿ ಒಟ್ಟು ಬಿಲ್ಲಿನ ಮೊತ್ತಕ್ಕೆ ಬಿಲ್‌ನ್ನು ಪಾಸ್ ಮಾಡಿದಂತೆ ಲೆಕ್ಕ ಪತ್ರಕ್ಕೆ ತೆಗೆದುಕೊಂಡಿದ್ದರಿಂದ ಪ್ರತ್ಯೇಕವಾಗಿ ಟ್ಯಾಕ್ಸ್ ಅಂಕಿ ಅಂಶಗಳನ್ನು ಪರಿಗಣಿಸಿರುವುದಿಲ್ಲ ಎಂದು ತಿಳಿಸಿದ್ದು ವೃತ್ತಿ ತೆರಿಗೆಯು ಶಾಸನಬದ್ಧ ಕಡಿತವಾಗಿರುವುದರಿಂದ ವಿಶ್ವವಿದ್ಯಾಲಯದ ವಾಸ್ತವಿಕ ಸ್ವೀಕೃತಿ ಮತ್ತು ಪಾವತಿ ತಿಳಿಯಬೇಕಾದ್ದಲ್ಲಿ ಇದನ್ನು ಆದಾಯ ಮತ್ತು ವೆಚ್ಚ ತಃಖ್ತೆಯಲ್ಲಿ ಅಳವಡಿಸಿಕೊಳ್ಳುವುದು ಲೆಕ್ಕಪತ್ರಗಳ ನಿಯಮಗಳ ಪ್ರಕಾರ ಕಡ್ಡಾಯವಾಗಿರುತ್ತದೆ ಕಾರಣ ಇದನ್ನು ಲೆಕ್ಕಪತ್ರ ತಯಾರಿಕೆಯಲ್ಲಿ ಪಾಲಿಸಲು ಸೂಚಿಸಲಾಗಿದೆ.	ಕಂಡಿಕೆಯಲ್ಲಿನ ಅನುಸರಣೆಗಳನ್ನು ಲೆಕ್ಕಪತ್ರ ತಯಾರಿಕೆಯಲ್ಲಿ ಪಾಲಿಸಲಾಗುವುದು
	8. ಲೆಕ್ಕಪರಿಶೋಧನೆಗೆ ಒದಗಿಸಿದ ಮಾಹಿತಿಯಂತೆDAC-832 CBFಲೆಕ್ಕ ಖಾತೆಯಲ್ಲಿ ರೂ.3,04,371/– ಗಳಷ್ಟು ಮೊತ್ತ ಜಮೆಯಾಗಿದ್ದು ಈ ಮೊತ್ತವನ್ನು ಸ್ವೀಕೃತಿ ಮತ್ತು ಪಾವತಿ ತಖ್ತೆಯಲ್ಲಿ ತೋರಿಸಿರುವುದಿಲ್ಲ ಈ ಕುರಿತು ಸೂಕ್ತ ಸ್ಪಷ್ಟೀಕರಣ ನೀಡಲು ಕೋರಿದ್ದು ನೀಡಿದ ಅನುಸರಣೆಯಲ್ಲಿ ಒಟ್ಟು ಬಿಲ್ಲಿನ ಮೊತ್ತಕ್ಕೆ ಬಿಲ್‌ನ್ನು ಪಾಸ್ ಮಾಡಿದಂತೆ ಲೆಕ್ಕ ಪತ್ರಕ್ಕೆ ತೆಗೆದುಕೊಂಡಿದ್ದರಿಂದ ಪ್ರತ್ಯೇಕವಾಗಿ ಟ್ಯಾಕ್ಸ್ ಅಂಕಿ ಅಂಶಗಳನ್ನು ಪರಿಗಣಿಸಿರುವುದಿಲ್ಲ ಎಂದು ತಿಳಿಸಿದ್ದು CBFಶಾಸನಬದ್ಧ ಕಡಿತವಾಗಿರುವುದರಿಂದ ವಿಶ್ವವಿದ್ಯಾಲಯದ ವಾಸ್ತವಿಕ ಸ್ವೀಕೃತಿ ಮತ್ತು ಪಾವತಿ ತಿಳಿಯಬೇಕಾದ್ದಲ್ಲಿ ಇದನ್ನು ಆದಾಯ ಮತ್ತು ವೆಚ್ಚ ತಃಖ್ತೆಯಲ್ಲಿ ಅಳವಡಿಸಿಕೊಳ್ಳುವುದು ಲೆಕ್ಕಪತ್ರಗಳ ನಿಯಮಗಳ ಪ್ರಕಾರ ಕಡ್ಡಾಯವಾಗಿರುತ್ತದೆ ಕಾರಣ ಇದನ್ನು ಲೆಕ್ಕಪತ್ರ ತಯಾರಿಕೆಯಲ್ಲಿ ಪಾಲಿಸಲು ಸೂಚಿಸಲಾಗಿದೆ	ಸ್ವೀಕೃತಿ & ವೆಚ್ಚದಲ್ಲಿ ಅಳವಡಿಸಿಕೊಳ್ಳಲಾಗುವುದು

	9.ಲೆಕ್ಕಪರಿಶೋಧನೆಗೆ ಒದಗಿಸಿದ ಮಾಹಿತಿಯಂತೆDAC-834ಕಾರ್ಮಿಕ ಕಲ್ಯಾಣ ನಿಧಿ ಖಾತೆಯಲ್ಲಿ ರೂ.**28,59,876/–** ರಷ್ಟು ಮೊತ್ತ ಜಮೆಯಾಗಿದ್ದು ಈ ಮೊತ್ತವನ್ನು ಸ್ವೀಕೃತಿ ಮತ್ತು ಪಾವತಿ ತಖ್ತೆಯಲ್ಲಿ ತೋರಿಸಿರುವುದಿಲ್ಲ ಈ ಕುರಿತು ಸೂಕ್ತ ಸ್ಪಷ್ಟೀಕರಣ ನೀಡಲು ಕೋರಿದ್ದು ನೀಡಿದ ಅನುಸರಣೆಯಲ್ಲಿ ಒಟ್ಟು ಬಿಲ್ಲಿನ ಮೊತ್ತಕ್ಕೆ ಬಿಲ್‌ನ್ನು ಪಾಸ್ ಮಾಡಿದಂತೆ ಲೆಕ್ಕ ಪತ್ರಕ್ಕೆ ತೆಗೆದುಕೊಂಡಿದ್ದರಿಂದ ಪ್ರತ್ಯೇಕವಾಗಿ ಟ್ಯಾಕ್ಸ್ ಅಂಕಿ ಅಂಶಗಳನ್ನು ಪರಿಗಣಿಸಿರುವುದಿಲ್ಲ ಎಂದು ತಿಳಿಸಿದ್ದುಕಾರ್ಮಿಕ ಕಲ್ಯಾಣ ನಿಧಿ ಶಾಸನಬದ್ಧ ಕಡಿತವಾಗಿರುವುದರಿಂದ ವಿಶ್ವವಿದ್ಯಾಲಯದ ವಾಸ್ತವಿಕ ಸ್ವೀಕೃತಿ ಮತ್ತು ಪಾವತಿ ತಿಳಿಯಬೇಕಾದ್ದಲ್ಲಿ ಇದನ್ನು ಆದಾಯ ಮತ್ತು ವೆಚ್ಚ ತಃಖ್ತೆಯಲ್ಲಿ ಅಳವಡಿಸಿಕೊಳ್ಳುವುದು ಲೆಕ್ಕಪತ್ರಗಳ ನಿಯಮಗಳ ಪ್ರಕಾರ ಕಡ್ಡಾಯವಾಗಿರುತ್ತದೆ ಕಾರಣ ಇದನ್ನು ಲೆಕ್ಕಪತ್ರ ತಯಾರಿಕೆಯಲ್ಲಿ ಪಾಲಿಸಲು ಸೂಚಿಸಲಾಗಿದೆ.	ಸ್ವೀಕೃತಿ & ವೆಚ್ಚದಲ್ಲಿ ಅಳವಡಿಸಿಕೊಳ್ಳಲಾಗುವುದು
	10.ಲೆಕ್ಕಪರಿಶೋಧನೆಗೆ ಒದಗಿಸಿದ ಮಾಹಿತಿಯಂತೆ DAC-807 Income Tax Work Contract ಖಾತೆಯಲ್ಲಿ ರೂ.**58,72,148/–** ರಷ್ಟು ಮೊತ್ತ **2017–18** ರಲ್ಲಿ ಜಮೆಯಾಗಿದ್ದು ಈ ಮೊತ್ತವನ್ನು ಸ್ವೀಕೃತಿ ಮತ್ತು ಪಾವತಿ ತಃಖ್ತೆಯಲ್ಲಿ ತೋರಿಸಿರುವುದಿಲ್ಲ ಈ ಕುರಿತು ಸೂಕ್ತ ಸ್ಪಷ್ಟೀಕರಣ ನೀಡಲು ಕೋರಿದ್ದು ನೀಡಿದ ಅನುಸರಣೆಯಲ್ಲಿ ಒಟ್ಟು ಬಿಲ್ಲಿನ ಮೊತ್ತಕ್ಕೆ ಬಿಲ್‌ನ್ನು ಪಾಸ್ ಮಾಡಿದಂತೆ ಲೆಕ್ಕ ಪತ್ರಕ್ಕೆ ತೆಗೆದುಕೊಂಡಿದ್ದರಿಂದ ಪ್ರತ್ಯೇಕವಾಗಿ ಟ್ಯಾಕ್ಸ್ ಅಂಕಿ ಅಂಶಗಳನ್ನು ಪರಿಗಣಿಸಿರುವುದಿಲ್ಲ ಎಂದು ತಿಳಿಸಿದ್ದುIncome Tax Work Contract ಶಾಸನಬದ್ಧ ಕಡಿತವಾಗಿರುವುದರಿಂದ ವಿಶ್ವವಿದ್ಯಾಲಯದ ವಾಸ್ತವಿಕ ಸ್ವೀಕೃತಿ ಮತ್ತು ಪಾವತಿ ತಿಳಿಯಬೇಕಾದ್ದಲ್ಲಿ ಇದನ್ನು ಆದಾಯ ಮತ್ತು ವೆಚ್ಚ ತಃಖ್ತೆಯಲ್ಲಿ ಅಳವಡಿಸಿಕೊಳ್ಳುವುದು ಲೆಕ್ಕಪತ್ರಗಳ ನಿಯಮಗಳ ಪ್ರಕಾರ ಕಡ್ಡಾಯವಾಗಿರುತ್ತದೆ ಕಾರಣ ಇದನ್ನು ಲೆಕ್ಕಪತ್ರ ತಯಾರಿಕೆಯಲ್ಲಿ ಪಾಲಿಸಲು ಸೂಚಿಸಲಾಗಿದೆ.	ಸ್ವೀಕೃತಿ & ವೆಚ್ಚದಲ್ಲಿ ಅಳವಡಿಸಿಕೊಳ್ಳಲಾಗುವುದು
	11. ಲೆಕ್ಕಪರಿಶೋಧನೆಗೆ ಒದಗಿಸಿದ ಮಾಹಿತಿಯಂತೆ **2017–18** ನೇ ಸಾಲಿನಲ್ಲಿ ಸ್ವೀಕೃತಿ ಮತ್ತು ಪಾವತಿ ತಃಖ್ತೆಯಲ್ಲಿ Debt and suspenseಖಾತೆಯಲ್ಲಿDAC-606ರಲ್ಲಿ Consultation On Krishi Kalyan Cess @0.5% ರೂ.40,46,196/– ರಷ್ಟುCessಜಮೆಯಾಗಿದ್ದು ಪಾವತಿ ಭಾಗದಲ್ಲಿ ದಾಖಲಿಸಿರುವುದಿಲ್ಲ ಹಾಗೂ ಲೆಕ್ಕ ಶಿರ್ಷಿಕೆ–**9607** GST-18%ಖಾತೆಯಲ್ಲಿ ರೂ.**40,73,268/–** ಗಳಷ್ಟು ಮೊತ್ತ ಪಾವತಿಯಾಗಿದ್ದು ಸ್ವೀಕೃತಿಯಭಾಗದಲ್ಲಿ ತೋರಿಸಿರುವುದಿಲ್ಲ ಈ ಕುರಿತು ಸೂಕ್ತ	ಸ್ವೀಕೃತಿಯಾದ ಮೊತ್ತವನ್ನು ಸ್ವೀಕೃತಿ ಕಾಲಂ ನಲ್ಲಿ ತೋರಿಸಿ ನಂತರ ಪಾವತಿಯನ್ನು ತೊರಿಸಲಾಗುವುದು

	ಸ್ಪಷ್ಟೀಕರಣ ನೀಡಲು ಕೋರಿದ್ದು ನೀಡಿದ ಅನುಸರಣೆಯಲ್ಲಿ ಮಾರ್ಚ್ ತಿಂಗಳಲ್ಲಿ ಬಾಕಿ ಇದ್ದ ಮೊತ್ತವನ್ನು ಪ್ರಸಕ್ತ ಸಾಲಿನಲ್ಲಿ ಜಮೆ ಮಾಡಿದ ಪ್ರಯುಕ್ತ ವ್ಯತ್ಯಾಸ ಕಂಡು ಬರುತ್ತದೆ ಎಂದು ತಿಳಿಸಿದ್ದು ಒಪ್ಪಲಾಗುವುದಿಲ್ಲ ಕಾರಣ ಲೆಕ್ಕ ಶಿರ್ಷಿಕೆ **9607** ಜಿಎಸ್‌ಟಿ **18%** ರಲ್ಲಿ ರೂ.**4073268/–** ಗಳನ್ನು ಸ್ವೀಕೃತಿಯಾಗದೆ ಪಾವತಿಸಿರುವುದಕ್ಕೆ ಆಕ್ಷೇಪಿಸಲಾಗಿದೆ ಹಾಗೂDAC-606ರಲ್ಲಿConsultation On Krishi Kalyan Cess @0.5% ರೂ.40,46,196/– ರಷ್ಟುCessಜಮೆಯಾಗಿದ್ದು ಸಂಭಂದಿಸಿದ ಇಲಾಖೆಗೆ ಪಾವತಿಸಿದ ವಿವರಗಳನ್ನು ಹಾಜರುಪಡಿಸಲು ಸೂಚಿಸಿದೆ. **<u>iii)ಆದಾಯ ಮತ್ತು ವೆಚ್ಚದ ತಃಖ್ತೆ:</u>**	
	12. 2017–**18** ನೇ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಸಂಕ್ಷೀಪ್ತ ಸಾದಿಲ್ವಾರು ಬಿಲ್‌ಗಳನ್ನು ಸೆಳೆದಿರುತ್ತಾರೆ. ಅದರಂತೆ ಸೆಳೆದ ಎಲ್ಲ ಮೊತ್ತವನ್ನು ಖರ್ಚೆಂದು ತೋರಿಸಿರುತ್ತಾರೆ ವಿವಿಧ ಲೆಕ್ಕಶೀರ್ಷಿಕೆಗಳಡಿ ಖರ್ಚಾಗದೇ ಉಳಿದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲನ್ನುDAC-584 AUDIT RSP-UAS ADJಖಾತೆಗೆ ಒಟ್ಟಾಗಿ ರೂ.**1,94,27,937/–** ರಷ್ಟು ಮೊತ್ತ **2017–18** ನೇ ಸಾಲಿನ ಆದಾಯ ತಃಖ್ತೆಯಲ್ಲಿ ಜಮೆಯಾಗಿರುತ್ತದೆ. ವಾಸ್ತವವಾಗಿ ಸೆಳೆದ ಎಲ್ಲ ಮೊತ್ತವನ್ನು ಹೀಗೆ ಖರ್ಚೆಂದು ತೋರಿಸಿರುವುದರಿಂದ ಹಣಕಾಸಿನ ವರ್ಷದಲ್ಲಿ ಆದ ಆದಾಯ ಮತ್ತು ವೆಚ್ಚದ ನಿಖರತೆ ಸಿಗುವುದಿಲ್ಲ ಈ ಕುರಿತು ಸೂಕ್ತ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ಹಾಜರಪಡಿಸಲು ಕೋರಿದ್ದು ಯಾವುದೇ ಅನುಸರಣೆ ನೀಡಿಲ್ಲ ಈ ರೀತಿ ನ್ಯೂನ್ಯತೆಗಳು ಮರುಕಳಿಸದಂತೆ ನೋಡಿಕೊಳ್ಳಲು ಸೂಚಿಸಿದೆ. **<u>iV)ಅಡಾವೆ ಪತ್ರಿಕೆ</u>**	ಆದಾಯ ಮತ್ತು ವೆಚ್ಚದ ತಃಖ್ತೆಯಲ್ಲಿ ಸ್ವೀಕೃತಿ ಮತ್ತು ವೆಚ್ಚದ ವಿವರವನ್ನು ತೋರಿಸಲಾಗುತ್ತದೆ
	13.ಕೃಷಿ ವಿಶ್ವವಿದ್ಯಾಲಯ ಧಾರವಾಡ ವ್ಯಾಪ್ತಿಯಲ್ಲಿ ಬರುವ ವಿವಿಧ ವಿಭಾಗಗಳಲ್ಲಿ ಜಾನುವಾರುಗಳನ್ನು ಸಾಕಲಾಗಿರುತ್ತದೆ. ಆದರೆ ಅವುಗಳ ಪುಸ್ತಕ ಮೌಲ್ಯವನ್ನು(Book Value)ಅಡಾವೆ ಪತ್ರಿಕೆಯ ಆಸ್ತಿ ಭಾಗದ ಚರಾಸ್ತಿಯಲ್ಲಿ ತೋರಿಸಿರುವುದಿಲ್ಲ ಈ ಕುರಿತು ಸೂಕ್ತ ಸ್ಪಷ್ಟೀಕರಣವನ್ನು ನೀಡಲು ಕೋರಿದ್ದು ನೀಡಿದ ಅನುಸರಣೆಯಲ್ಲಿ ಘಟಕಗಳಲ್ಲಿ ರಜಿಸ್ಟರ್ ನಿರ್ವಹಿಸಿದ್ದು ಸದರಿ ಜಾನುವಾರುಗಳಮೌಲ್ಯಮಾಪನ ಮಾಡಿ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದೆ. ಲೆಕ್ಕಪತ್ರಗಳ ನಿಯಮದಂತೆ ಸದರಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಜಾನುವಾರುಗಳನ್ನು ಹೊಂದಿದ ಘಟಕಗಳಲ್ಲಿರುವ	ಕಂಡಿಕೆಯಲ್ಲಿ ವಿವರಿಸಿದನುಸಾರ ಕ್ರಮ ತೆಗೆದುಕೊಂಡು ಮುಂದಿನ ಲೆಕ್ಕ ಪರಿಶೋಧನೆಯಲ್ಲಿ ಹಾಜರು ಪಡಿಸಲಾಗುವುದು.

	ಜಾನುವಾರುಗಳ ಪುಸ್ತಕ ಮೌಲ್ಯವನ್ನು ಅಡಾವೆ ಪತ್ರಿಕೆಯಲ್ಲಿ ಅಳವಡಿಸಿಕೊಂಡು ವಾರ್ಷಿಕ ಲೆಕ್ಕಪತ್ರವನ್ನು ತಯಾರಿಸಲು ಸೂಚಿಸಿದೆ ಈ ರೀತಿ ಜಾನುವಾರಗಳ ಪುಸ್ತಕ ಮೌಲ್ಯವನ್ನು ಅಳವಡಿಸಿಕೊಳ್ಳದೆ ಇರುವುದರಿಂದ ವಾರ್ಷಿಕ ಲೆಕ್ಕ ಪತ್ರದಲ್ಲಿ ವಿಶ್ವವಿದ್ಯಾಲಯದ ಆಸ್ತಿ ಮೌಲ್ಯವನ್ನು ಪೂರ್ಣ ಪ್ರಮಾಣದಲ್ಲಿ ತಯಾರಿಸಲಾಗಿದೆಂದು ಒಪ್ಪಲಾಗುವುದಿಲ್ಲ. ಉದಾ:–ಮುಖ್ಯ ಸಂಶೋಧನಾ ಕೇಂದ್ರ i)ಡೈರಿ ಶಾಖೆ– ರೂ. **9,63,350** (ಪುಸ್ತಕ ಮೌಲ್ಯ) ii)ಪೌಲ್ಟ್ರಿ ಮತ್ತು ಮೇಕೆ ರೂ.**3,37,410** ಒಟ್ಟು = ರೂ.**13,00,760** iii)ಎತ್ತುಗಳು ರೂ. **3,00,000** ರೂ. **16,00,760**	
	14. 2017–18 ನೇ ಸಾಲಿನಲ್ಲಿ ಲೆಕ್ಕಪರಿಶೋಧನೆಗೆ ಸಮಯದಲ್ಲಿ ಕೃಷಿ ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿ ಅಡಿ ಇರುವ ಆಸ್ತಿದಾಯಿತ್ವಗಳಲ್ಲಿ ಬರುವ ಕಟ್ಟಡಗಳ ಸವಕಳಿ ಕುರಿತು ನಿರ್ವಹಣೆ ಇಂಜಿನಿಯರ್‌ರವರಿಂದ ಕಟ್ಟಡಗಳ ಕುರಿತು ಸವಕಳಿ ಮಾಹಿತಿಯನ್ನು ಹಾಜರಪಡಿಸಿರುವುದಿಲ್ಲ ಈ ಕುರಿತು ಸ್ಪಷ್ಟೀಕರಣ ನೀಡಲು ಕೋರಿದ್ದು ನೀಡಿದ ಅನುಸರಣೆಯಲ್ಲಿ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದ್ದು ನ್ಯೂನ್ಯತೆಯನ್ನು ಸರಿಪಡಿಸಿಕೊಳ್ಳಲು ಸೂಚಿಸಿದೆ.	ಸದರಿ ಮಾಹಿತಿಯನ್ನು ಮುಂದಿನ ಲೆಕ್ಕ ತನಿಖೆಯ ಸಂದರ್ಭದಲ್ಲಿ ಹಾಜರುಪಡಿಸಲಾಗುವುದು
	15. 2017–18 ನೇ ಸಾಲಿನಲ್ಲಿ ಅಡಾವೆ ಪತ್ರಿಕೆಯ ಚರಾಸ್ಥಿಯಲ್ಲಿ ರೂ. 46,20,475/–ಗಳ Stock Of Buildings Materials ದಾಸ್ತಾನು ಎಂದು ತೋರಿಸಲಾಗಿರುತ್ತದೆ. ಇದರ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿದ್ದು ಅನುಸರಣೆಯಲ್ಲಿ ಪರಿಶೀಲಿಸಿ ಕ್ರಮಜರುಗಿಸಲಾಗುವುದೆಂದು ವಿವರಣೆ ನೀಡಿದ್ದು ಈ ದಾಸ್ತಾನಿನ ವಾಸ್ತವತೆ ಬಗ್ಗೆ ವಿವರಣೆ ಇರುವುದಿಲ್ಲ.	ಕಂಡಿಕೆಯಲ್ಲಿ ವಿವರಿಸಿದಂತೆ **Stock Of Buildings Materials** ದಾಸ್ತಾನು ವಿವಿರವನ್ನು ಮುಂದಿನ ತನಿಖೆಯಲ್ಲಿ ತೊರಿಸಲಾಗುವುದು
	16.ಅಡಾವೆ ಪತ್ರಿಕೆಯ ಆಸ್ತಿ ಭಾಗದಲ್ಲಿ ಸ್ಥಿರಾಸ್ಥಿಯಾದ ಭೂಮಿಯ ಮೌಲ್ಯವರ್ದನೆ	ಸದರಿ ಮಾಹಿತಿಯನ್ನು ಮುಂದಿನ ಲೆಕ್ಕ ತನಿಖೆಯ

	ಅಂದರೆAppreciationಮೌಲ್ಯವನ್ನು ತೋರಿಸಿರುವುದಿಲ್ಲ, ಈ ಕುರಿತು ಸ್ಪಷ್ಟೀಕರಣ ನೀಡಲು ಕೋರಿದ್ದು ನೀಡಿದ ಅನುಸರಣೆಯಲ್ಲಿಪರಿಶೀಲಿಸಿ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದ್ದು ನ್ಯೂನ್ಯತೆಯನ್ನು ಸರಿಪಡಿಸಿಕೊಳ್ಳಲು ಸೂಚಿಸಿದೆ.	ಸಂದರ್ಭದಲ್ಲಿ ಹಾಜರುಪಡಿಸಲಾಗುವುದು
	17.ಹಣಕಾಸು ವಿಭಾಗದ ಸುತ್ತೋಲೆ ಸಂಖ್ಯೆ:C/REVFund/2300-A/2312-13 Dated :08.10.2012ರ ಪ್ರಕಾರ171 Revolving Fund(ಆವರ್ತ ನಿಧಿ) ಗಳನ್ನು ಮುಕ್ತಾಯಗೊಳಿಸಲು ಸೂಚಿಸಲಾಗಿದೆ ಆದರೆ ಲೆಕ್ಕಪರಿಶೋಧನೆಗೆ ಹಾಜರಪಡಿಸಿದ ದಾಖಲೆಗಳ ಪ್ರಕಾರ ಇನ್ನೂ "33" Revolving Fundಗಳನ್ನು ಮುನ್ನಡೆಸುತ್ತಿರುವುದು ಕಂಡು ಬಂದಿದ್ದು ಇದಕ್ಕೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದ ಕುರಿತು ಸೂಕ್ತ ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆಗೆ ಹಾಜರಪಡಿಸಲು ಕೋರಿದ್ದು ನೀಡಿದಅನುಸರಣೆಯಲ್ಲಿ ಆಯ್.ಸಿ.ಎ.ಆರ್ ದಿಂದ ನೀಡಲ್ಪಟ್ಟ ಆವರ್ತ ನಿಧಿಗಳು ಮಾತ್ರ ಚಲಾವಣೆಯಲ್ಲಿರುತ್ತವೆ ಎಂದು ತಿಳಿಸಿದ್ದು ಸಕ್ಷಮ ಪ್ರಾಧಿಕಾರದ ಅನುಮೋದನೆ ಹಾಜರುಪಡಿಸಿರುವುದಿಲ್ಲ	ಕೃಷಿ ವಿಶ್ವವಿದ್ಯಾಲಯದ ನಿಧಿಯ ಎಲ್ಲ ಆವೃತ್ತ ನಿಧಿಗಳನ್ನು ಸಂಖ್ಯೆ:C/REVFund/2300-A/2312-13 Dated :08.10.2012ರ ಪ್ರಕಾರ ಸಮಾಪ್ತಿಗೊಳಿಸಲಾಗಿದೆ. ಈಗ ICAR ದಿಂದ ಬಿಡುಗಡೆಯಾದ Revolving Fundಗಳನ್ನು ICAR ದಿಂದ ಬಿಡುಗಡೆಯಾದ ಮಾರ್ಗ ಸೂಚಿಗಳ ಅನ್ವಯ ನಿರ್ವಹಿಸಲಾಗುತ್ತಿದೆ.
	18. ರಶೀದಿ ಫೋಷ್ವಾರೆ ಮತ್ತು ಪಾವತಿ ಮತ್ತು ಅಂದಾಜು ವಿವರಗಳ ಪರಿಷ್ಕೃತ ಅಂದಾಜುಗಳಲ್ಲಿನ ವ್ಯತ್ಯಾಸದ ಕುರಿತು (ಲೆಕ್ಕ ಶೀರ್ಷಿಕೆ **–5419)** ಲೆಕ್ಕ ಶೀರ್ಷಿಕೆ**–5419** ರಶೀದಿ ಫೋಷ್ವಾರೆ ಮತ್ತು ಪಾವತಿಯಲ್ಲಿ **2017–18** ರಲ್ಲಿ ರೂ.**5,00,000/–** ಪರಿಷ್ಕೃತ ಅಂದಾಜು ಮತ್ತು ನಮೂದಿರುತ್ತದೆ. ಈ ಕುರಿತು ಅನುಬಂಧ-(ii)ರಲ್ಲಿ ವಿವರಿಸಿದಂತೆ ಅಂದಾಜು ವಿವರ ಲೆಕ್ಕ ಶೀರ್ಷಿಕೆ **–5419** ರಲ್ಲಿ ರೂ. **5,00,000/–** ಹಾಗೂ **2017–18** ರ ಪರಿಷ್ಕೃತ ಅಂದಾಜು ರೂ. **12,54,500/–** ಎಂದು ತೋರಿಸಿರುತ್ತಾರೆ ಕಾರಣ ಆಯವ್ಯಯ ಅಂದಾಜು ಪತ್ರಿಕೆಯ ಅನುಬಂಧ–(i) ಮತ್ತು ಅನುಬಂಧ–(ii) ಹೋಲಿಸಲಾಗಿದೆ. ರೂ **7,54,500/–** ವ್ಯತ್ಯಾಸದ ಕಂಡುಬಂದಿರುತ್ತದೆ ಇದರ ಪರಿಣಾಮ 2017–18 ರ(V)OTHER AGENCIES ಪರಿಷ್ಕೃತ ಅಂದಾಜು ಮೇಲೆ ಆಗಿರುತ್ತದೆ. ಅಂದರೆ ಅನುಬಂಧ–(ಯು) ರಲ್ಲಿ ವಿವರಿಸಿದಂತೆ ಪರಿಷ್ಕೃತ ಅಂದಾಜು ರೂ.**3,79,85,179/–** ಇದ್ದು ರೂ.**7,54,500/–** ಸಂಕಲನ ಮಾಡಿದರೆ ರೂ.**3,87,39,679/–** ಆಗಬೇಕು ಒಟ್ಟು **2017–18** ಪರಿಷ್ಕೃತ ಅಂದಾಜು ಅಂತಿಮ ಶಿಲ್ಕನ್ನು ಸೇರಿಸಿ ರೂ.**6,52,62,23,345/–** ತೋರಿಸಿದ್ದು ವ್ಯತ್ಯಾಸದ ಮೊತ್ತ ರೂ.**7,54,500/–**ಸೇರಿಸಿದಾಗ ರೂ.**6,52,69,77,845/–** ಆಗಬೇಕಾಗಿರುತ್ತದೆ. ಅದರಂತೆ ಈ ರೀತಿ ರಶೀದಿ ಫೋಷ್ವಾರೆ ಮತ್ತು	ಕಂಡಿಕೆಯಲ್ಲಿ ಆಕ್ಷೇಪಿಸಿದಂತೆ ಮುಂದೆ ಈ ರೀತಿ ಆಗದಂತೆ ಕ್ರಮ ವಹಿಸಲಾಗುವುದು.

	ಪಾವತಿ ಹಾಗೂ ಅಂದಾಜು ವಿವರಗಳ ಪರಿಷ್ಕೃತ ಅಂದಾಜುಗಳ ವ್ಯತ್ಯಾಸದ ಕುರಿತು ಸೂಕ್ತ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿದೆ. ಈ ಕುರಿತು ಅನುಬಂಧ ಲಗತ್ತಿಸಲಾಗಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರಸಂಖ್ಯೆ:34 ದಿನಾಂಕ: 15.01.2020 ರಂದು ನೀಡಲಾಗಿ ನೀಡಿದ ಅನುಸರಣೆಯಲ್ಲಿ ಕಣ್ತಪ್ಪಿನಿಂದ ವ್ಯತ್ಯಾಸವಾಗಿದೆ ಎಂದು ತಿಳಿಸಿದ್ದು ಇಂತಹ ನ್ಯೂನ್ಯತೆಗಳುಮರುಕಳಿಸದಂತೆ ನೋಡಿಕೊಳ್ಳಲು ಸೂಚಿಸಿದೆ.	
	19. ವಾರ್ಷಿಕ ಲೆಕ್ಕ ಪತ್ರದಲ್ಲಿಯ ಮೊತ್ತಕ್ಕೂ ಹಾಗೂ ಲೆಕ್ಕ ಶೀರ್ಷಿಕೆ 3630 ರಲ್ಲಿ ಖರ್ಚಿನ ಮೊತ್ತಕ್ಕೂ ವ್ಯತ್ಯಾಸದ ಕುರಿತು. ಹಣಕಾಸು ಅಧಿಕಾರಿಗಳ ಕಛೇರಿಯ 2017–18 ನೇ ಸಾಲಿನ ಲೆಕ್ಕ ಪರಿಶೋಧನಾ ವೇಳೆ ವೋಚರ್‌ಗಳನ್ನು ಪರಿಶೀಲಿಸಲಾಗಿ ಈ ಕೆಳಗಿನಂತೆ ನ್ಯೂನ್ಯತೆಗಳು ಕಂಡು ಬಂದಿವೆ. 1) ಎಬಿಎಸಿ 3630 ರಡಿ ಖರ್ಚಿನ ವೋಚರ್‌ಗಳನ್ನು ಪರಿಶೀಲಿಸಲಾಗಿ ರೂ 34,16,405/– ಗಳಷ್ಟು ವೆಚ್ಚವಾಗಿರುತ್ತದೆ. 2) ವಾರ್ಷಿಕ ಲೆಕ್ಕ ಪತ್ರದಲ್ಲಿ ಸದರಿ ಎಬಿಎಸಿ 3630 ರಡಿ ರೂ 3875991/– ಖರ್ಚಾದ ಕುರಿತು ನಮೂದಿಸಲಾಗಿರುತ್ತದೆ. ರೂ (–)4,59,586/– ಗಳು ಖರ್ಚು ಭರಿಸಿದ್ದಕ್ಕೆ ಸೂಕ್ತ ದಾಖಲೆಗಳೊಂದಿಗೆ ಅನುಸರಣೆ ನೀಡಲು ಕೋರಿ, ಲೆ.ಪ.ವಿ.ಪ.ಸಂ.102, ದಿ:28–01–2020 ನೀಡಲಾಗಿದ್ದು, ಸ್ವೀಕರಿಸಿದ ಅನುಸರಣೆಯಲ್ಲಿ ಸದರ ಮೊತ್ತ ವೆಚ್ಚವಾಗದೆ ಬಾಕಿ ಉಳಿದಿದೆ ಎಂದು ತಿಳಿಸಿದ್ದು ವಾರ್ಷಿಕ ಲೆಕ್ಕ ಪತ್ರದಲ್ಲಿ ದಾಖಲಿಸಿದ ವೆಚ್ಚಕ್ಕೂ ಹಾಗೂ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ವೋಚರಗಳ ಮೊತ್ತಕ್ಕೂ ಇರುವ ವ್ಯತ್ಯಾಸವನ್ನು ಸರಿಪಡಿಸಿಕೊಳ್ಳಲು ಸೂಚಿಸಿದೆ.	ವ್ಯತ್ಯಾಸ ಕುರಿತು ಕ್ರಮ ಜರುಗಿಸಲಾಗುತ್ತದೆ.
	20. ಲೆಕ್ಕ ಶೀರ್ಷಿಕೆ 6700/300 ಅಡಿ ಪರಿಷ್ಕೃತ ಆಯವ್ಯಯ ಅಂದಾಜು ಮೊತ್ತದಿಂದ ಅಧಿಕ ವೆಚ್ಚ ಭರಿಸಿದ ಕುರಿತು. 2017–18ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಲೆಕ್ಕ ಶೀರ್ಷಿಕೆ 6700–300 ಅಡಿ 2017–18 ನೇ ಸಾಲಿನ ಆಯವ್ಯಯ ಅಂದಾಜು ಮೊತ್ತ ರೂ. 35,00,000.00 ಕಲ್ಪಿಸಿಕೊಂಡಿದ್ದು ಇದಕ್ಕೆ ಸಂಬಂಧಿಸಿದ ಖರ್ಚಿನ ಒಚರಗಳನ್ನು ಮತ್ತು ವೆಚ್ಚದ ತಖ್ತೆಯನ್ನು ಪರಿಶೀಲಿಸಲಾಗಿ ರೂ. 40,06,690.00 ಗಳಷ್ಟು ಖರ್ಚು ಭರಿಸಿದ್ದು ಪರಿಷ್ಕೃತ ಅಂದಾಜು ಮೊತ್ತಕ್ಕಿಂತ ಹೆಚ್ಚುವರಿಯಾಗಿ ಭರಿಸಿದ ವ್ಯತ್ಯಾಸದ ರೂ.5,06,690.00 ಮೊತ್ತಕ್ಕೆ ಪರಿಷ್ಕೃತ ಅಂದಾಜು ಮಾಡಿದ್ದಲ್ಲಿ ದಾಖಲೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರಸಂಖ್ಯೆ:07 ದಿನಾಂಕ:08.01.2020 ರಂದು ನೀಡಲಾಗಿ ಇದರನ್ವಯ ವಿಭಾಗದವರು ನೀಡಿದ ಅನುಸರಣೆಯಲ್ಲಿ 2017–18 ಸಾಲಿಗೆ ಪರಿಷ್ಕೃತ ಆಯವ್ಯಯದಲ್ಲಿ ರೂ. 73,00,000 ಗಳನ್ನು ಅಳವಡಿಸಿಕೊಳ್ಳಲಾಗಿದೆ ಎಂದು ತಿಳಿಸಿ ಪ್ರತಿ ಲಗತ್ತಿಸಿ ಅನುಸರಣೆ ನೀಡಲಾಗಿದೆ.	ಕಂಡಿಕೆಯಲ್ಲಿ ವಿವರಿಸಿದರನುಸಾರ ಕ್ರಮ ಜರುಗಿಸಲಾಗುವುದು.

	21.ವಾರ್ಷಿಕ ಲೆಕ್ಕಪತ್ರದಲ್ಲಿಯ ಮೊತ್ತಕ್ಕೂ ಹಾಗೂ ಲೆಕ್ಕ ಶೀರ್ಷಿಕೆ 7163 ರಲ್ಲಿ ಖರ್ಚಿನ ಮೊತ್ತಕ್ಕೂ ವ್ಯತ್ಯಾಸದ ಕುರಿತು. **ಹಣಕಾಸು ಅಧಿಕಾರಿಗಳ ಕಚೇರಿಯ 2017–18 ನೇ ಸಾಲಿನ ಲೆಕ್ಕಪರಿಶೋಧನಾ ವೇಳೆ ವೋಚರಗಳನ್ನು ಪರಿಶೀಲಿಸಲಾಗಿ ಈ ಕೆಳಗಿನಂತೆ ನೂನ್ಯತೆಗಳು ಕಂಡುಬಂದಿವೆ.** **1.ಲೆಕ್ಕ ಶೀರ್ಷಿಕೆ 7163/–ರಡಿ ಖರ್ಚಿನ ವೋಚರಗಳನ್ನು ಪರಶೀಲಿಸಲಾಗಿ ರೂ.60,20,449/– ಗಳು ಖರ್ಚಾದ ಮೊತ್ತವಾಗಿರುತ್ತದೆ.** **2. ವಾರ್ಷಿಕ ಲೆಕ್ಕಪತ್ರದಲ್ಲಿ ಸದರಿ ಲೆಕ್ಕ ಶೀರ್ಷಿಕೆ 7163ರಡಿ ರೂ.45,15,337/– ಖರ್ಚಾದ ಕುರಿತು ನಮೂದಿಸಲಾಗಿರುತ್ತದೆ. ವ್ಯತ್ಯಾಸ ರೂ.15,05,112/– ಗಳ ಹೆಚ್ಚಿನ ಮೊತ್ತದ ಖರ್ಚು ಭರಿಸಲಾಗಿರುತ್ತದೆ. ಹೆಚ್ಚಿಗೆ ಖರ್ಚು ಭರಿಸಿದ್ದಕ್ಕೆ ಸೂಕ್ತ ದಾಖಲೆಗಳೊಂದಿಗೆ ಅನುಸರಣೆ ನೀಡಲು ಕೋರಿ ಲೆ.ಪ.ವಿ.ಪ.ಸಂ.97, ದಿ:27–01–2020 ರಂದು ನೀಡಲಾಗಿ ನೀಡಿದ ಅನುಸರಣೆಯಲ್ಲಿ ಶೇ 75% ರಷ್ಟು ಆಯ್.ಸಿ.ಎ.ಆರ್ ಪಾಲುದಾರಿಕೆ ಮತ್ತು 25% ರಷ್ಟು ರಾಜ್ಯದ ಪಾಲುದಾರಿಕೆ ಇರುತ್ತದೆ ಈ ಯೋಜನೆಯು 75:25 ರ ಅನುಪಾತದಲ್ಲಿ ಕಾರ್ಯನಿರ್ವಹಿಸುತ್ತದೆ. ಎಂದು ತಿಳಿಸಿದ್ದು ದಾಖಲೆಗಳನ್ನು ನಿರ್ವಹಿಸಲು ಸೂಚಿಸಿದೆ.**	**ಕಂಡಿಕೆಯಲ್ಲಿ ವಿವರಿಸಿದರನುಸಾರ ಕ್ರಮ ಜರುಗಿಸಲಾಗುವುದು.**
	22.ಲೆಕ್ಕ ಶೀರ್ಷಿಕೆ –5094 ರಲ್ಲಿ ಕಂಡುಬಂದ ನ್ಯೂನ್ಯತೆಗಳ ಕುರಿತು. **1.ಲೆಕ್ಕ ಶೀರ್ಷಿಕೆ –5094 ಗೆ 2017–18ರಲ್ಲಿ ರೂ.2,27,272/–ಗಳಷ್ಟು ಪರಿಷ್ಕೃತ ಅಂದಾಜು ಅನುಮೋದನೆ ಆಗಿರುತ್ತದೆ.** **2.ಪರಿಷ್ಕೃತ ಅಂದಾಜಿನಲ್ಲಿ**Transfer Entry Order No **ದಿನಾಂಕ:**26.3.2018 **ರಲ್ಲಿ**Transfer expenditure from **ಲೆಕ್ಕ ಶೀರ್ಷಿಕೆ** No:3636 to **ಲೆಕ್ಕ ಶೀರ್ಷಿಕೆ** -5094**ವೋಚರ್ ಸಂಖ್ಯೆ:1119 ರಲ್ಲಿ ರೂ.1,92,600/– ಮೊತ್ತ ವರ್ಗಾವಣೆಯಾಗಬೇಕೆಂಬ ಆದೇಶವಾಗಿರುತ್ತದೆ.** **3. 2017–18ರ ವಾರ್ಷಿಕ ವೆಚ್ಚದ ತಖ್ತೆ ಪರಿಶೀಲಿಸಲಾಗಿ ರೂ.1,92,600/– ವೆಚ್ಚ ತೋರಿಸಿರುತ್ತಾರೆ ಮತ್ತು ಪರಿಷ್ಕೃತ ಅಂದಾಜು ರೂ.2,27,272/–ರ ತರುವಾಯ ಖರ್ಚು ಮಾಡಿ ರೂ.34,672/– ರೂ.ಗಳನ್ನು ಅನುದಾನ ನೀಡಿದ ಸಂಸ್ಥೆಗೆ 2018–19 ರಲ್ಲಿ ಮರುಭರಣಾ ಮಾಡಿರುತ್ತಾರೆ.** **4. 2017–18 ರ ವಾರ್ಷಿಕ ಲೆಕ್ಕ ಪತ್ರದಲ್ಲಿ ರೂ.3,85,200/– ಗಳಷ್ಟು ಖರ್ಚು ಆಗಿದೆಯೆಂದು ತೋರಿಸಿರುತ್ತಾರೆ.**	**ಕಂಡಿಕೆಯಲ್ಲಿನ ನಿರ್ದೇಶನಗಳನ್ನು ಅಳವಡಿಸಿಕೊಳ್ಳಲಾಗುವುದು**

	5. ರೂ.3,85,200/– ಗಳಲ್ಲಿನ ವೋಚರ್ ಸಂಖ್ಯೆ–1119 ರಲ್ಲಿ ರೂ. 1,92,600/– ಕಾಮಗಾರಿ ವೋಚರನ್ನು ಲೆಕ್ಕಪರಿಶೋಧನೆಗೆ ಹಾಜರಪಡಿಸಿರುತ್ತಾರೆ. **6.ಅದರಂತೆ ಇನ್ನೂಳಿದ ಮೊತ್ತದ ಅಂದರೆ ರೂ. 1,92,600/– ಗಳ ಖರ್ಚಿನ ದಾಖಲೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ ಹಾಗೂ ಈ ಖರ್ಚನ್ನು ಯಾವ ಚೆಕ್ ನಂ: ದಿನಾಂಕದ ಮೂಲಕ ಭರಿಸಲಾದ ಕುರಿತು ದಾಖಲೆ ನೀಡಿರುವುದಿಲ್ಲ.** **7.ಪರಿಷ್ಕೃತ ಅನುಮೋದಿತ ಅಂದಾಜಿಗಿಂತ ಹೆಚ್ಚು ಖರ್ಚನ್ನುಲೆಕ್ಕ ಶೀರ್ಷಿಕೆ –5094ರಲ್ಲಿ ಭರಿಸಿದ ಕುರಿತು ಸ್ಪಷ್ಟೀಕರಣವನ್ನು ನೀಡುವುದು.** **8. ಪರಿಷ್ಕೃತ ಅನುಮೋದಿತ ಅಂದಾಜಿಗಿಂತ ಹೆಚ್ಚಾಗಿ ಭರಿಸಿದ ಖರ್ಚನ್ನು ಯಾವ ಮೂಲದಿಂದ ಭರಿಸಲಾಗಿದೆ ಎಂಬುದರ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ಹಾಜರಪಡಿಸುವುದು.** **ಈ ಕುರಿತು ವಿಚಾರಣಾ ಪತ್ರ ಸಂಖ್ಯೆ – 100 ದಿನಾಂಕ 27–01–2020 ರಂದು ನೀಡಲಾಗಿ ದಿನಾಂಕ 14–02–2020 ರಂದು ನೀಡಿದ ಅನುಸರಣೆಯಲ್ಲಿರಶೀದಿ ಸಂ.1119 ದಿನಾಂಕ 08.12.2017 ರನುಸಾರ ₹.192600 ಪಾವತಿಯು ಲೆಕ್ಕ ಶಿರ್ಷಿಕೆ 3636/880 ರ ಅಡಿ ಪಾವತಿಯಾಗಿರುತ್ತದೆ. ಈ ಲೆಕ್ಕ ಶಿರ್ಷಿಕೆಯಡಿ ಅನುದಾನ ಲಭ್ಯವಿಲ್ಲದ ಪ್ರಯುಕ್ತ** Transfer Entry Order No.C/S.I/FS/2017-18 dated: 26.03.2018 **ರನುಸಾರ ಲೆಕ್ಕ ಶಿರ್ಷಿಕೆ ಸಂ.5094/880 ಗೆ ವರ್ಗಾವಣೆ ಮಾಡಲಾಗಿದೆ. ಕಾರಣ ಈ** Transfer Entry **ಗೆ ಚೆಕ್ಕ ವಿತರಿಸಿರುವುದಿಲ್ಲ. ಅನುದಾನ ಲಭ್ಯತೆಗ್ಯೆನುಗುಣವಾಗಿ ಹೊಂದಾಣಿಕೆ ಮಾಡುವ ಸಲುವಾಗಿ** Transfer Entry Order No.C/S.I/FS/2017-18 dated: 26.03.2018 **ಹಾಕಲಾಗಿದೆ. ಇದಕ್ಕೆ ಸಂಬಂಧಿಸಿದಂತೆ, ರಶೀದಿ ಪ್ರತಿ &**Transfer Entry Order **ಪ್ರತಿಯನ್ನು ಲಗತ್ತಿಸಲಾಗಿದೆ. ವಾರ್ಷಿಕ ಲೆಕ್ಕಪತ್ರದಲ್ಲಿ ಕಣ್ತಪ್ಪಿನಿಂದ ಹೆಚ್ಚುವರಿಯಾಗಿ ರೂ.192600 ಖರ್ಚು ಬಿದ್ದಮೊತ್ತವನ್ನು 2019–20 ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರದಲ್ಲಿ ಹೊಂದಾಣಿಕೆ ಮಾಡಲಾಗುವುದು ಎಂದು ತಿಳಿಸಿದ್ದು ವಾರ್ಷಿಕ ಲೆಕ್ಕ ಪತ್ರದ ಪಾವತಿ ತಖ್ತೆಯಲ್ಲಿ ಹೆಚ್ಚಿನ ಖರ್ಚು ತೋರಿಸಿದಂತಾಗಿದ್ದು ಈ ರೀತಿಯ ನ್ಯೂನ್ಯತೆಗಳು ಮರುಕಳಿಸದಂತೆ ನೋಡಿಕೊಳ್ಳಲು ಸೂಚಿಸಿದೆ.**	

4

ವಿತ್ತೀಯ ಸ್ಥಿತಿ ಹಣಕಾಸು ವಿಭಾಗದಲ್ಲಿ ನಿರ್ವಹಿಸಲಾಗುವ ವಿವಿಧ ಖಾತೆಗಳ ವಿವರ (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ.ಕಂ.ಸಂ.3)

Sl. No	Name /A/c No.	ಪ್ರಾರಂಭದ ಶಿಲ್ಕು	ಜಮಾ	ಒಟ್ಟು	ಖರ್ಚು	ಕ್ಯಾಶ್ ಬುಕ್ ಪ್ರಕಾರ ಅಂತಿಮ ಶಿಲ್ಕು	ಬ್ಯಾಂಕ್ ಪ್ರಕಾರ ಅಂತಿಮ ಶಿಲ್ಕು	ಅನುಬಂಧ
1	General Fund 10025445154	525694297.2	4908642684	5434336981	4968809032	465527948.9	657171283.4	6.1
2	PD A/C 03000007	898.15	0	898.15	0	898.15	-	-
3	Donation 10025446703	48479.21	1805	50284.21	0	50284.21	50284.21	6.2
4	Endowment 10025446714	701485.35	3539017	4240502.35	3049680	1190822.35	1214939.35	6.3
5	PENSION 1002544667	1473478.68	353049888	354523366.7	342466558.8	12056807.93	13056941.93	6.4
6	GPF 10025446689	2791855.16	688189677	690981532.2	665955342.8	25026189.41	32030812.41	6.5
7	GSLIS 10025446725	2989696.78	8261704	11251400.78	7664235	3587165.78	3587165.78	6.6
8	NAIP 30275637259	555875	24421	580296	00 .00	580296	580296	6.7
9	SUJALA-III PROJECT 35254968172	43891423	1610363	45501786	31806939	13694847	22194942	6.8
10	K-PIST-LEVEL-I 32015319875	98767	3680	102447	0	102447	102447	6.9
11	CHAIR(FAV) HEALTH 32269401421	31080.77	427.23	31508	590	30918	-	6.1
12	COPTROLLER(FAV) HEALTH 32552645921	1236248.31	16980	1253228.31	590.31	1252638	-	6.11
13	DST 35662818048	637923	434216	1072139	512624	559515	1978584	6.12

4 ನಗದು ಪುಸ್ತಕದಲ್ಲಿ ಆರಂಭದ ಶಿಲ್ಕು ಮತ್ತು ಅಂತಿಮ ಶಿಲ್ಕುಗಳನ್ನು ತೋರಿಸಲಾಗಿದ್ದು ಇದೇ ರೀತಿ ಲೆಕ್ಕ ಪತ್ರದಲ್ಲಿ ಅಳವಡಿಸಲಾಗಿದೆ

14	DST FIST 36997820115	0	3578595	3578595	612905	2965690	3578595	6.13
15	REVOLVING FUND	100484904.6	200971702.5	301456607	164471031.1	136985575.9	-	-
16	THE COPTROLLER DBT MSC AGRI BIOTECH 33742103509	2716575	1272463	3989038	1229292	2759746	2786285	6.14
17	F.C.R.A 32304113504	1214	45	1259	0	1259	1259	6.15
18	CORPUS STUDENTS INSURE FUND 34503155791	3337829	2463377	5801206	434287	5366919	5366919	6.16
19	S.C. STUDENTS HONARARIUM R.FUND 33939817896	657468	4508808	5166276	4000000	1166276	117261	6.17
20	S.T. STUDENTS HONARARIUM R.FUND 33939857806	138106	904671	1042777	800000	242777	240065	6.18
	Total	687487604.2	6177474523	6864962128	6191813107	673149020.7	744058080.1	

ವಿಶ್ವವಿದ್ಯಾಲಯ ಒಟ್ಟಾರೆ ಹಣಕಾಸಿನ ವ್ಯವಹಾರಗಳನ್ನು ಹೊಂದಿದ ಸ್ಟೇಟ ಬ್ಯಾಂಕ ಚಾಲ್ತಿ ಖಾತೆಗೆ ಸಂಬಂಧಿಸಿದಂತೆ ಈ ವಿಶ್ವವಿದ್ಯಾಲಯ ಪ್ರಾರಂಭವಾದಾಗಿನಿಂದ 2007-08 ನೇ ಸಾಲಿನ ವರೆಗೂ ನಗದು ಪುಸ್ತಕವನ್ನಿಟ್ಟಿರಲಿಲ್ಲ. ಅಲ್ಲದೆ ಪ್ರಾರಂಭದ ಹಾಗೂ ಅಂತಿಮ ಶಿಲ್ಕಿನ ಮಾಹಿತಿಯನ್ನು ಸಹ ನಿರ್ವಹಿಸಿರಲಿಲ್ಲ. ಇದರಿಂದ ಈ ಬಗ್ಗೆ ತಾತ್ಕಾಲಿಕ ಪ್ರಾರಂಭದ ಶಿಲ್ಕೊಂದನ್ನು ಪರಿಗಣಿಸಿ ನಿರ್ವಹಿಸಲ್ಪಟ್ಟ ನಗದು ಪುಸ್ತಕ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದೆ.

1) ಪಿ.ಡಿ ಖಾತೆಯನ್ನು 2005ನೇ ಸಾಲಿನಿಂದ ಬಳಸುತ್ತಿಲ್ಲವಾದ್ದರಿಂದ ಅವಶ್ಯಕತೆ ಇಲ್ಲದ ಪಕ್ಷದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಖಾತೆ ಬರ್ಖಾಸ್ತು ಮಾಡಲು ಸೂಚಿಸಿದೆ. ಈ ಕುರಿತು ಜಂಟಿ ನಿರ್ದೇಶಕರು ಜಿಲ್ಲಾ ಖಜಾನೆ ಧಾರವಾಡ ಇವರಿಗೆ ದಿನಾಂಕ 02.12.2019 ರಂದು ಪತ್ರ ವ್ಯವಹಾರ ಮಾಡಿರುತ್ತಾರೆ.
2) ವಿಶ್ವವಿದ್ಯಾಲಯದಲ್ಲಿ ವಿವಿಧ ಘಟಕಗಳಲ್ಲಿ ಆವರ್ತ ನಿದಿಗಳನ್ನು ನಿರ್ವಹಿಸುತ್ತಿದ್ದು ಖಾಸಗಿ ಲೆಕ್ಕ ಪರಿಶೋಧಕರಿಂದ ಪರಿಶೋಧನೆ ಮಾಡಿಸಿ ಜಮಾ ಖರ್ಚಿನ ವಿವರದ ತಖ್ತೆ ಪಡೆಯಲಾಗಿದ್ದು ಲೆಕ್ಕ ಪರಿಶೋಧನೆಯಲ್ಲಿ ಆರಂಭಿಕ ಮತ್ತು ಅಂತಿಮ ಶಿಲ್ಕನ್ನು ನಿಖರತೆಯ ಸ್ಪಷ್ಟತೆಯಿರುವುದಿಲ್ಲ.

ಈ ಕುರಿತು ವಿವರಗಳನ್ನು ಅನುಬಂಧ-6.1 ರಿಂದ 6.18 ರವರೆಗೆ ವಿವರಿಸಿದೆ.

5	**ಹೆಚ್ಚಿನ ಹಣಕಾಸಿನ ವ್ಯವಹಾರವನ್ನು ವರ್ಷದ ಕೊನೆ ದಿನ ಅಂದರೆ ದಿ.31.03.2018 ರಂದು ನಡೆಸಿದ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ.ಕಂ.ಸಂ.4)** ಕರ್ನಾಟಕ ಆಯವ್ಯಯ ಅಂದಾಜು ಪತ್ರಿಕೆ ಪಟ್ಟಿ ಹಾಗೂ ಕರ್ನಾಟಕ ಆರ್ಥಿಕ ಸಂಹಿತೆ 1958 ರ ನಿರ್ದೇಶನದಂತೆ ಆರ್ಥಿಕ ವರ್ಷದ ಕೊನೆಯಲ್ಲುಂಟಾಗಬಹುದಾದ ಖರ್ಚಿನ ಒತ್ತಡ ಹಾಗೂ ಇದರ ಪರಿಣಾಮದಿಂದಾಗುವ ಕಳಪೆ ಗುಣಮಟ್ಟದ ಸಾಮಗ್ರಿ ಖರೀದಿ ಕಾಮಗಾರಿ ನಿರ್ವಹಣೆ ಇತ್ಯಾದಿಗಳನ್ನು ತಪ್ಪಿಸುವ ಉದ್ದೇಶದಿಂದ ವಾರ್ಷಿಕ ಅನುದಾನವನ್ನು ವರ್ಷಪೂರ್ತಿ ಸಮಾನವಾಗಿ ಖರ್ಚು ಮಾಡಬೇಕೆಂದಿದೆ. ಆದರೆ ಈ ವಿಶ್ವವಿದ್ಯಾಲಯದ ಚಾಲ್ತಿ ಖಾತೆ ಸಂಖ್ಯೆ: **10025445154** ಯಲ್ಲಿ **2017–18** ನೇ ಸಾಲಿನಲ್ಲಾದ ಖರ್ಚುಗಳಲ್ಲಿ ರೂ.**113,23,37,731/–** ಗಳನ್ನು ಮಾರ್ಚ ಒಂದೇ ತಿಂಗಳಲ್ಲಿ ಖರ್ಚು ಮಾಡಲಾಗಿದೆ. ಅದರಲ್ಲೂ ದಿ. **31.03.2018** ರಂದು ಒಂದೇ ದಿನದಲ್ಲಿ ರೂ.**24,05,94,153/–**ಗಳ ಚೆಕ್ ತೆಗೆದಿದ್ದನ್ನು ಕಾಣಬಹುದು. ಇದರ ಕ್ರಮಬದ್ಧತೆಯನ್ನು ವಿವರಿಸಿಲ್ಲ.ಸದರಿ ಚಾಲ್ತಿ ಖಾತೆಯನ್ನು ಉಳಿತಾಯ ಖಾತೆಗೆ ಬದಲಾಯಿಸಿಕೊಳ್ಳಲು ಸೂಚಿಸಿದೆ.	5	ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಸಂಶೋಧನೆ ಹಾಗೂ ವಿಸ್ತರಣಾ ಘಟಕಗಳಲ್ಲದೆ ಅನೇಕ ಕಾಲಿಕ– ಅರೆಕಾಲಿಕ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಇಂತಹ ಕಾಲಿಕ ಹಾಗೂ ಅರೆಕಾಲಿಕ ಯೋಜನೆಗಳ ಅನುದಾನವು ಸಾಮಾನ್ಯವಾಗಿ ಫೆಬ್ರುವರಿ ಹಾಗೂ ಮಾರ್ಚ ತಿಂಗಳಲ್ಲಿ ಬರುತ್ತಿದ್ದು ಮಾರ್ಚ 31 ರ ಒಳಗಾಗಿ ವೆಚ್ಚ ಮಾಡಲು ನಿರ್ದೇಶನವಿರುತ್ತದೆ. ಹೀಗಾಗಿ ಇಂತಹ ವೆಚ್ಚಗಳ ಬಿಲ್ಲುಗಳು ಸಾಮಾನ್ಯವಾಗಿ ಮಾರ್ಚ ಕೊನೆಯಲ್ಲಿ ಬರುತ್ತಿದ್ದು ಮಾರ್ಚ ತಿಂಗಳ ಕೊನೆಗೆ ಹೆಚ್ಚಿಗೆ ವೆಚ್ಚವಾಗುತ್ತದೆ.
6	**ತಳಿವರ್ಧಕ ಬೀಜ ಆವರ್ತ ನಿಧಿಯಿಂದ ಬೀಜೋತ್ಪಾದನಾ ಆವರ್ತ ನಿಧಿಗೆ ಹಣ ವರ್ಗಾಯಿಸಿರುವ ಕುರಿತು.(ಬಿ.ಎಸ್.ಪಿ/ಎನ್.ಎಸ್.ಪಿ.ಕಂ.ಸಂ.33)** ಕೃಷಿ ವಿಶ್ವವಿದ್ಯಾಲಯ, ಧಾರವಾಡ ಬಿಎಸ್‌ಪಿ/ಎನ್‌ಎಸ್‌ಪಿ ಘಟಕದ **2017–18** ನೇ ಲೆಕ್ಕಪರಿಶೋಧನಾ ವೇಳೆ ಪರಿಶೀಲಿಸಲಾಗಿ, ದಿನಾಂಕ **13.09.2017** ರ ಚೆಕ್ ಸಂ.**124484** ರಲ್ಲಿ ಆದೇಶ ಸಂ.SOS/C/S/TL/ /2017-18 ರನ್ವಯ ಬೀಜೋತ್ಪದನಾ ಆವರ್ತ ನಿಧಿ ಲೆಕ್ಕಶಿರ್ಷಿಕೆ **9803/300**ಕ್ಕೆ ರೂ.**35,00,000/–** ಗಳ ವರ್ಗಾವಣೆಯನ್ನು ತಳಿವರ್ಧಕ ಬೀಜ ಆವರ್ತ ನಿಧಿಯಿಂದ ಮಾಡಿರುತ್ತಾರೆ. ಅದರಂತೆ ಪತ್ರ ಆದೇಶದ ಪ್ರಕಾರ ಹಣಕಾಸಿನ ವರ್ಷದ ಎಲ್ಲ ರಶೀದಿಗಳು ಜಮೆಯಾದ ನಂತರ ಬೀಜೋತ್ಪಾದನಾ ಘಟಕದವರು ಪಡೆದ ಹಣವನ್ನು ತಳಿವರ್ಧಕ ಆವರ್ತ ನಿಧಿಗೆ ಮರಳಿ ಜಮೆ ಮಾಡುವುದಾಗಿ ಹೇಳಿದ್ದು ಇಲ್ಲಿಯವರೆಗೂ ಅಂತಹ ಯಾವುದೇ ಜಮೆ ತಳಿವರ್ಧಕ ಆವರ್ತ ನಿಧಿಗೆ ಮರಳಿ ಬಂದಿರುವುದಿಲ್ಲ. ಈ ಕುರಿತು ಸೂಕ್ತ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರಪಡಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ **41** ದಿನಾಂಕ **26.09.2019** ನೀಡಲಾಗಿ ಬೀಜೋತ್ಪಾದನಾ ಆವರ್ತ ನಿಧಿಯಡಿಯಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ಬೀಜ ಮಾರಾಟ ಮಾಡಲಾಗಿದ್ದು, ಸದರಿಯವರಿಂದ ಹಣ ಪಾವತಿ ವಿಳಂಬವಾಗಿದ್ದರಿಂದ ಹಣದ ಕೊರತೆ ಕಾರಣ ಹಣ ವರ್ಗಾಯಿಸಲಾಗಿದೆ ಎಂದು ತಿಳಿಸಿದ್ದು ಲೆಕ್ಕಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ ಕಾರಣ ಮೊತ್ತ ರೂ.**35,00,000/–** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	6	ಬೀಜೋತ್ಪಾದನಾ ಆವರ್ತ ನಿಧಿಯಡಿಯಲ್ಲಿ ಬೀಜೋತ್ಪಾದನೆ ಮಾಡಿ ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ಬೀಜ ಮಾರಾಟ ಮಾಡಲಾಗಿದ್ದು ಸದರಿಯವರಿಂದ ಬೀಜದ ಮೊತ್ತ ಪಾವತಿಯು ವಿಳಂಬವಾಗಿದ್ದರಿಂದ ಬೀಜೋತ್ಪಾದನಾ ಆವರ್ತ ನಿಧಿಯಲ್ಲಿ ಹಣದ ಕೊರತೆ ಉಂಟಾಗಿತ್ತು. ಕಾರಣ ತಳಿವರ್ಧಕ ಬೀಜ ಆವರ್ತ ನಿಧಿಯಿಂದ ಬೀಜೋತ್ಪಾದನಾ ಆವರ್ತ ನಿಧಿಗೆ ದಿ.**13.9.2017** ರಂದು ರೂ.**35,00,000.00** ಮೊತ್ತವನ್ನು ವರ್ಗಾಯಿಸಲಾಗಿತ್ತು. ಮುಂದುವರೆದು, ಕರ್ನಾಟಕ ರಾಜ್ಯ ಬೀಜ ನಿಗಮದಿಂದ ಬಾಕಿ ಹಣ ಪಾವತಿಯಾದ ನಂತರ ಚೆಕ್.ಸಂ.**757261**ರ ದಿನಾಂಕ **12.10.2020**ರ ಮೂಲಕ ಬೀಜೋತ್ಪಾದನಾ ಆವರ್ತ ನಿಧಿಯಿಂದ ತಳಿವರ್ಧಕ ಆವರ್ತ ನಿಧಿಗೆ ರೂ.**35,00,000.00** ಮೊತ್ತವನ್ನು ಮರು ವರ್ಗಾವಣೆ ಮಾಡಲಾಗಿದೆ.

<table>
<tr><td></td><td>ಅನುದಾನಗಳು</td><td></td></tr>
<tr><td>7</td><td>ರಾಜ್ಯ ಸರ್ಕಾರದ ಬ್ಲಾಕ್ ಗ್ರ್ಯಾಂಟ್ (ವರದಿಯ ಅವಧಿಯಲ್ಲಿ ರಾಜ್ಯ ಸರಕಾರ ಹಾಗೂ ಐ.ಸಿ.ಎ.ಆರ್ ದಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿದೆ.)
(ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ.ಕಂ.ಸಂ.14.1)
ರೂ ಲಕ್ಷಗಳಲ್ಲಿ
<table>
<tr><td>ಕ್ರ.ಸಂ</td><td>ವಿವರ</td><td>ಅನುದಾನ ಬಿಡುಗಡೆ</td><td>ಅನುದಾನ ಬಳಕೆ</td><td>ಬಳಕೆಮಾಡಿದ ಹೆಚ್ಚುವರಿ ಮೊತ್ತ</td></tr>
<tr><td>ಅ)</td><td>ಬ್ಲಾಕ ಗ್ರಾಂಟ</td><td>1834500000</td><td>1838326191.50</td><td>(–)3826191.5</td></tr>
</table>
ಬ್ಲಾಕ್ ಗ್ರ್ಯಾಂಟ್ ಅನುದಾನದಲ್ಲಿ ಮೊತ್ತ ರೂ.(–)3826191.5ಅಂದರೆ ಅನುದಾನದ ಬಿಡುಗಡೆಗಿಂತ ಹೆಚ್ಚುವರಿಯಾಗಿ ವೆಚ್ಚ ಮಾಡಲಾಗಿದ್ದು, ಯಾವ ಮೂಲದಿಂದ ಸದರಿ ಹೆಚ್ಚುವರಿ ವೆಚ್ಚವನ್ನು ಭರಿಸಲಾಗಿದೆ ಎಂದು ತಿಳಿದು ಬಂದಿರುವುದಿಲ್ಲ. ಕಾರಣ ಹೆಚ್ಚುವರಿಯಾಗಿ ಖರ್ಚು ಮಾಡಿದ ರೂ. 3826191.5 ಗಳನ್ನು ಆಕ್ಷೇಪಣೆಯಲ್ಲಿರಸಲಾಗಿದೆ.ಬ್ಲಾಕ್ ಗ್ರ್ಯಾಂಟ್/ಅಭಿವೃದ್ಧಿ ಅನುದಾನ ಬಿಡುಗಡೆಯಾದ ವಿವರ ಈ ವರದಿಗೆ ಲಗತ್ತಿಸಿದ ಅನುಬಂಧ “ 7 ”ರಲ್ಲಿ ವಿವರಿಸಿದೆ.</td><td>7 ಅನುಸರಣೆ ಅವಶ್ಯವಿಸರುವುದಿಲ್ಲ</td></tr>
<tr><td>8</td><td>ಭಾರತೀಯ ಕೃಷಿ ಅನುದಾನ ಪರಿಷತ್–ಐ.ಸಿ.ಎ.ಆರ್ (Indian Institute of Agricultural Research) ರಾಜ್ಯ ಸರ್ಕಾರದಿಂದ ಹಾಗೂ ಇತರೆ ಪ್ರಾಧಿಕಾರಗಳಿಂದ ಪ್ರಾಯೋಜಿತ ವಿಶೇಷ ಸಂಶೋಧನಾ ಯೋಜನೆಗಳು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ.ಕಂ.ಸಂ.14.3)
ಭಾರತೀಯ ಕೃಷಿ ಅನುದಾನ ಪರಿಷತ್–ಐ.ಸಿ.ಎ.ಆರ್ (Indian Institute of Agricultural Research) ರಾಜ್ಯ ಸರ್ಕಾರದಿಂದ ಹಾಗೂ ಇತರೆ ಪ್ರಾಧಿಕಾರಗಳಿಂದ ಪ್ರಾಯೋಜಿತ ವಿಶೇಷ ಸಂಶೋಧನಾ ಯೋಜನೆಗಳ ವಿವಿರ ಈ ಕೆಳಗಿನಂತಿದೆ.
<table>
<tr><td>1</td><td>ಇತರೆ ಹಣಕಾಸು ನೆರವು ಸಂಸ್ಥೆಯಿಂದ ಅನುದಾನ</td><td>25265918.00</td></tr>
<tr><td>2</td><td>ಭಾ.ಕೃ.ಪ ಎಡಹಾಕ ಸಂಶೋಧನಾ ಯೋಜನೆ</td><td>20797534.00</td></tr>
<tr><td>3</td><td>ರಾಜ್ಯ ಸರ್ಕಾರದ ಅಡಹಾಕ ಪ್ರೊಜೆಕ್ಟ್</td><td>116328253.00</td></tr>
</table></td><td>8 ಭಾರತೀಯ ಕೃಷಿ ಅನುಸಂಧಾನ ಪರಿಷತ್ ಅಡಹಾಕ್ ಪ್ರೊಜೆಕ್ಟಗಳ ಲೆಕ್ಕ ಶಿರ್ಷಿಕೆ ಹಾಗೂ ರಾಜ್ಯ ಸರ್ಕಾರಕ್ಕೆ ಮೀಸಲಾದ ಲೆಕ್ಕ ಶಿರ್ಷಿಕೆಗಳನ್ನು ಯೋಜನೆಗಳ ಅನುಸಾರ ನೀಡಲಾಗುತ್ತದೆ.</td></tr>
</table>

4	ಕೇಂದ್ರ ಸರಕಾರದ ಸಂಶೋಧನಾ ಯೋಜನೆ ಅನುದಾನ	33805183.00
5	ಭಾ.ಕೃ.ಪ. ಅಭಿವೃದ್ಧಿ ಅನುದಾನ	5199153.00
6	ಅ.ಭಾ.ಸ ಸಂ. ಯೊ (ಎ.ಆಯ್.ಸಿ.ಆರ್.ಪಿ)	184223973.00
7	ಭಾ.ಕೃ.ಪ. –ಕೃ.ವಿ.ಕೇಂ.	67517121.00
	ರಾಜ್ಯ ಅಭಿವೃದ್ಧಿ ಅನುದಾನ	
8	ಸಂಶೋಧನೆ	
9	ಶಿಕ್ಷಣ	1834500000.00
10	RKVY	64000000.00
	ಒಟ್ಟು	**2351637135**

ನಿರ್ದಿಷ್ಟ ಉದ್ದೇಶಿತ ಅನುದಾನಕ್ಕೆ ಸಂಬಂಧಿಸಿದಂತೆ ಪ್ರಾಧಿಕವಾರ ಬಿಡುಗಡೆಯಾದ ಹಣ ಖರ್ಚು ಹಾಗೂ ಬಾಕಿ ಉಳಿದ ವಿವರ ಈ ವರದಿಗೆ ಲಗತ್ತಿಸಿದ ಅನುಬಂದ " 8 " ರಲ್ಲಿ ವಿವರಿಸಿದಂತಿದೆ. ಯೋಜನಾವಾರುಅನುದಾನಗಳ ಕುರಿತು ಪ್ರತ್ಯೇಕವಾಗಿ ರಜಿಸ್ಟರ್‌ಗಳನ್ನು ನಿರ್ವಹಿಸಿರುವುದಿಲ್ಲ ಇದರಿಂದಾಗಿ ವಿವಿಧ ಯೋಜನೆಗಳಲ್ಲಿ ಕಾಯ್ದಿರಿಸಿದ ಮೊತ್ತಗಳನ್ನು ಅವಶ್ಯಕತೆಗೆ ಅನುಗುಣವಾಗಿವಿವಿಧ ಸಂಶೋಧನೆಗಳಿಗೆ ಉಪಯೋಗಿಸಿಕೊಂಡಿದ್ದು ನಿಧಿ ವರ್ಗಾವಣೆ ಪ್ರಕ್ರಿಯೆ ಕುರಿತು ಲೆಕ್ಕ ಪರಿಶೋಧನೆಯಲ್ಲಿ ಪರಿಶೀಲಿಸಲು ಸಾಧ್ಯವಾಗುವುದಿಲ್ಲ.

9 ಅನುದಾನ ಲೆಕ್ಕವನ್ನು ಕ್ರಮಬದ್ಧವಾಗಿ ನಿರ್ವಹಿಸದಿರುವುದು.(ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ.ಕಂ.ಸಂ.14.4)

ನಿರ್ದಿಷ್ಟ ಉದ್ದೇಶಕ್ಕಾಗಿ ಬಿಡುಗಡೆಯಾದ ಅನುದಾನದ ಬಳಕೆ ಹಾಗೂ ಈ ಕುರಿತಾದ ಲೆಕ್ಕ ಪತ್ರಗಳನ್ನಿಡುವಲ್ಲಿ ಈ ಕೆಳಗಿನಂತೆ ನೂನ್ಯತೆಗಳಿರುವುದನ್ನು ಕಾಣಬಹುದು.

ಅ. ಯೋಜನಾವಾರು ಬಿಡುಗಡೆಯಾದ ಅನುದಾನ ಕುರಿತಂತೆ ಖಾತೆ ಪುಸ್ತಕವನ್ನು ನಿರ್ವಹಿಸಿ ಅನುದಾನದ ರಸೀದಿ, ಖರ್ಚು ಹಾಗೂ ಅಂತಿಮ ಶಿಲ್ಕನ್ನು ವಿವರಿಸಿಟ್ಟಿಲ್ಲ. ಇದರಿಂದ ಈ ಬಾಬಿನಲ್ಲಿ ಸಂಶೋಧನಾ ಯೋಜನೆವಾರು ಬಿಡುಗಡೆಯಾದ ಅನುದಾನ ವಿನಿಯೋಗ ಹಾಗೂ ಖರ್ಚಾಗದೇ ಉಳಿದ ಮೊತ್ತವನ್ನು ಸಂಬಂಧಿಸಿದ ಪ್ರಾಧಿಕಾರಕ್ಕೆ ಮರಳಿ ಜಮೆ ಮಾಡಿದ್ದನ್ನು ಪರಿಶೀಲಿಸುವುದು ಲೆಕ್ಕ ಪರಿಶೋಧನೆಯ ಕಾಲಕ್ಕೆ ಸಾಧ್ಯವಾಗಿಲ್ಲ. ಆದರೂ ವಿಬಾಗದವರು ಒದಗಿಸಿದ ಮಾಹಿತಿಯಂತೆ ವರದಿಯ ಅವಧಿಯ ಅನುದಾನದ ಲೆಕ್ಕವನ್ನು ಅನುಬಂಧ– 8 ರಲ್ಲಿ ತೋರಿಸಿದಂತಿರುವುದನ್ನು ಪರಿಶೀಲಿಸಲಾಯಿತು. ಈ ಬಗ್ಗೆ ಸೂಕ್ತ ಕಿರ್ದಿ ಪುಸ್ತಕವನ್ನಿಟ್ಟು ಈ ಅಂಕೆ ಸಂಖ್ಯೆಗಳನ್ನು ಧೃಡೀಕರಿಸಿಕೊಳ್ಳುವುದು.

ಆ. ವಿಶೇಷ ಯೋಜನೆಗಳಡಿ ಕೈಗೆತ್ತಿಕೊಳ್ಳಲಾದ ಈ ಕೆಳಗಿನ ಸಂಶೋಧನಾ ಯೋಜನೆಗಳ ಬಗ್ಗೆ ಬಿಡುಗಡೆಯಾದ ಹಣಕ್ಕಿಂತ ಹೆಚ್ಚಿಗೆ ಖರ್ಚು ಮಾಡಿರುವುದು ಕಂಡು ಬರುತ್ತದೆ.

ಅನಂ	ಸಂಶೋಧನಾ ಯೋಜನೆಗಳ ಹೆಸರು	ಪ್ರಾರಂಭದ ಶಿಲ್ಕು	ಜಮಾ	ಒಟ್ಟು	ಖರ್ಚು	ಅಂತಿಮ ಶಿಲ್ಕು
SL. NO.	**PARTICULARS**	**OB**	**RECP**	**TOTAL**	**EXPN**	**CB**
1	OTHER AGENCIES	(-)81161845.00	25265918	(-)55895927	28231167	(-)84127094
2	GOI SPON.ADHOC PROJECTS	(-)2329031.00	33805183	31476152	36528912	(-)5052760
3	ICAR-KVK-PROJECTS	(-)43941726.00	67517121	23575395	63853829	(-)40278434
5	NFBSR	(-)3460910.00	0.00	(-)3460910.00	0.00	(-)3460910.00
	Total	(-)130893517	126588222	(-)4305290	128613908	(-)132919198

ಮೇಲಿನ ತಃಖ್ತೆಯಲ್ಲಿ ತೋರಿಸಿದಂತೆ ಆರಂಭಿಕ ಶಿಲ್ಕು ಮತ್ತು ಅಂತಿಮ ಶಿಲ್ಕುಗಳು ಋಣಾತ್ಮಕವಾಗಿದ್ದು, ಅನುದಾನ ಲಭ್ಯವಿಲ್ಲದೇ ಖರ್ಚು ಮಾಡುವುದನ್ನು ನಿಲ್ಲಿಸಲು ತಿಳಿಸಿದ್ದು, ನ್ಯೂನ್ಯತೆಯನ್ನು ಸರಿಪಡಿಸಿಕೊಳ್ಳಲು ಸೂಚಿಸಿದೆ.

9 ಯೋಜನಾವಾರು ಬಿಡುಗಡೆಯಾದ ಅನುದಾನವನ್ನು ಕೃಷಿ ವಿಶ್ವವಿದ್ಯಾಲಯದ ಆಯವ್ಯಯ ಪತ್ರದಲ್ಲಿ ಪ್ರತ್ಯೇಕ ಲೆಕ್ಕ ಶಿರ್ಷಿಕೆಗಳಲ್ಲಿ ಅನುವು ಮಾಡಿ ಅದರಂತೆ ಪ್ರತ್ಯೇಕವಾಗಿ ಕೀರ್ದಿಯಲ್ಲಿ ನಮೂದಿಸಿ ವೆಚ್ಚ ನಿರ್ವಹಣೆ ಮಾಡುಲಾಗುತ್ತಿದೆ. ಅದಲ್ಲದೆ, ಪ್ರತಿ ತಿಂಗಳ ಶಿರ್ಷಿಕೆವಾರು ರಶೀದಿ ಹಾಗೂ ವೆಚ್ಚದ ವಿವರಗಳನ್ನು ಗಣಕೀಕರಿಸಲಾಗುತ್ತಿದೆ. ಇದರಿಂದ ನಿವ್ವಳ ರಶೀದಿ, ವೆಚ್ಚ ಬಾಕಿ ಶಿಲ್ಕು ವಿವರ ಲಭ್ಯವಿರುತ್ತದೆ. ಇದನ್ನು ಪರಿಶೀಲಿಸಬಹುದಾಗಿದೆ.

10

ADHOC PROJECTS GOI ಈ ಶೀರ್ಷಿಕೆಯಡಿ 2017–18 ನೇ ಸಾಲಿನಲ್ಲಿ ಮಂಜೂರಾದ ಮೊತ್ತ ಉಳಿಕೆ ಮೊತ್ತದ ವಿವರ ಲೆಕ್ಕ ಪರಿಶೋಧನೆಗೆ ಹಾಜರುಪಡಿಸದೆ ಇರುವ ಕುರಿತು (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.47)

2017–18 ನೇ ಸಾಲಿನಲ್ಲಿ ADHOC PROJECTS GOI ಈ ಯೋಜನೆಗಳ ಲೆಕ್ಕಶೀರ್ಷಿಕೆಗಳಲ್ಲಿ ರೂ.**3,65,28,912/–** ಗಳು ಖರ್ಚಾಗಿದ್ದು ಈ ಎಲ್ಲ ವಿವಿಧ ಪ್ರತಿ ಯೋಜನೆಗಳಲ್ಲಿ **2016–17** ರಲ್ಲಿ ಉಳಿಕೆ ಮೊತ್ತ **2017–18** ರಲ್ಲಿ ಮಂಜೂರಾದ ಅನುದಾನ ಖರ್ಚಾದ ಮೊತ್ತ ಮತ್ತು ಅಂತಿಮ ಶಿಲ್ಕಿನ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ ಮತ್ತು ಪ್ರತಿ ಯೋಜನೆಗಳ "ಹಣ ಬಳಕೆ ಪ್ರಮಾಣ" ಪತ್ರಗಳನ್ನು ಪಡೆದಿದ್ದಲ್ಲಿ ಲೆಕ್ಕಪರಿಶೋಧನೆಗೆ ಒದಗಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ **87** ದಿನಾಂಕ **24.01.2020** ನೀಡಲಾಗಿ ವಿಭಾಗದವರು ನೀಡಿದ ಅನುಸರಣೆಯಲ್ಲಿ ಮಾಹಿತಿಯ ದಾಖಲೆ ಒದಗಿಸಿರುವುದಾಗಿ ತಿಳಿಸಿದ್ದು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಮತ್ತು ಹಣ ಬಳಕೆ ಪ್ರಮಾಣ ಪತ್ರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ದಿನಾಂಕ **27.08.2020** ರ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಪುನರ್‌ಪರಿಶೀಲನೆಯಲ್ಲಿ ನೀಡಿದ ಅನುಸರಣೆಯಂತೆ ಲೆಕ್ಕ ಶೀರ್ಷಿಕೆ **5601** ರಿಂದ **5799** ರಲ್ಲಿ **2017–18** ರ ಸಾಲಿನ ಆರಂಭದ ಶಿಲ್ಕು ಸೀಕರಿಸಿದ ಮೊತ್ತ ವೆಚ್ಚ ಹಾಗೂ ಬಾಕಿ ಮೊತ್ತದ ವಿವರ ಈ ಕೆಳಗಿನಂತಿವೆ.

ಲೆಕ್ಕ ಶೀರ್ಷಿಕೆ	ಮೊತ್ತ
5604	**3240655**
5607	**476938**
5641	**703200**
5863	**45501**
ಒಟ್ಟು ಶಿಲ್ಕು	**4466294**

ಒಟ್ಟು ಆರಂಭದ ಶಿಲ್ಕು	**4466294**
ಸ್ವೀಕರಿಸಿದ ಮೊತ್ತ	**33805183**
ಒಟ್ಟು	**38271477**
ಖರ್ಚು	**36528912**
ಅಂತಿಮ ಶಿಲ್ಕು	**1742565**

ವೆಚ್ಚ ಭರಿಸಿ ಬಾಕಿ ಉಳಿದ ಮೊತ್ತ ರೂ.**17,42,565/–** ಬಾಕಿ ಇರುತ್ತದೆ. ಸದರಿ ಸಾಲಿನ ಹಣಬಳಕೆ ಪ್ರಮಾಣ ಪತ್ರವನ್ನು ಲಗತ್ತಿಸಿರುವುದಿಲ್ಲ. ಕಾರಣ ಪ್ರಸಕ್ತ ವರ್ಷದ ಸ್ವೀಕೃತಿ ಮೊತ್ತ ರೂ.**33805183** ಮತ್ತು ವೆಚ್ಚದ ಮೊತ್ತ ರೂ. **36528912** ಒಟ್ಟು ರೂ. **70334095/–**ಗಳನ್ನು ಆಕ್ಷೇಪಣೆಯಲ್ಲಿರಿಸಿದೆ. ಸದರಿ ಲೆಕ್ಕ ಶೀರ್ಷಿಕೆಯಡಿ ಮಂಜೂರಾದ ಪ್ರತಿ ಯೋಜನೆಗಳಿಗೂ ಪ್ರತ್ಯೇಕ ನಿಗಾವಹಿ ನಿರ್ವಹಿಸಲು ಸೂಚಿಸಿದೆ.

10 ಕಂಡಿಕೆಯಲ್ಲಿ ಆಕ್ಷೇಪಿಸಿದ ವಿವರದ ಈ ಕೆಳಗಿನಂತೆ ಮಾಹಿತಿಯನ್ನು ಪೂರೈಸಲು ಕೋರಿದ ಪ್ರಯುಕ್ತ ಲೆಕ್ಕ ಶೀರ್ಷಿಕೆ **5601** ರಿಂದ **5799** ರಲ್ಲಿ **2017–18** ರ ಸಾಲಿನ ಆರಂಭದ ಶಿಲ್ಕು ಸೀಕರಿಸಿದ ಮೊತ್ತ ವೆಚ್ಚ ಹಾಗೂ ಬಾಕಿ ಮೊತ್ತದ ವಿವರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಲೆಕ್ಕ ಶೀರ್ಷಿಕೆ	ಮೊತ್ತ
5604	**3240655**
5607	**476938**
5641	**703200**
5863	**45501**
ಒಟ್ಟು ಆರಂಭದ ಶಿಲ್ಕು	**4466294**
ಸ್ವೀಕರಿಸಿದ ಮೊತ್ತ	**33805183**
ಒಟ್ಟು	**38271477**
ಖರ್ಚು	**36528912**
ಅಂತಿಮ ಶಿಲ್ಕು	**1742565**

ವೆಚ್ಚ ಭರಿಸಿ ಬಾಕಿ ಉಳಿದ ಮೊತ್ತ ₹.**1742565** ಬಾಕಿ ಇರುತ್ತದೆ. ಸದರಿ ಸಾಲಿನ ಹಣಬಳಕೆ ಪ್ರಮಾಣ ಪತ್ರವನ್ನು ಲಗತ್ತಿಸಲಾಗಿದೆ. ಕಾರಣ ಆಕ್ಷೇಪಣೆಯಲ್ಲಿಟ್ಟ ₹.**36528912/–** ಗಳನ್ನು ಕೈ ಬಿಡಲು ಕೋರಲಾಗಿದೆ.

	ಮುದ್ದತ್ ಠೇವಣಿ	
11	**ಬ್ಯಾಂಕಗಳಲ್ಲಿ ತೊಡಗಿಸಿದ ಹಣ** ಸಾಮಾನ್ಯ ನಿಧಿ, ದತ್ತಿ ನಿಧಿ ಹಾಗೂ ಆವರ್ತ ನಿಧಿ ಸೇವಾ ನಿಧಿಗಳಿಂದ ಹಣ ತೊಡಗಿಸಲು ರಾಷ್ಟ್ರೀಕೃತ ಬ್ಯಾಂಕಗಳಿಂದ ದರಪಟ್ಟಿ ಪಡೆದು ಹೆಚ್ಚಿನ ಬಡ್ಡಿ ನೀಡುವ ಬ್ಯಾಂಕಿನಲ್ಲಿ ಹಣ ತೊಡಗಿಸಿರುವುದು ಕಂಡು ಬಂದಿರುತ್ತದೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ಗ್ರಾಮೀಣ ವಿಕಾಸ ಬ್ಯಾಂಕಗಳಲ್ಲಿ ಹಣ ತೊಡಗಿಸಿದ್ದು ಈ ಕುರಿತಾದ ವರದಿಯ ಅವಧಿಯ ವಹಿವಾಟು ಈ ಕೆಳಗಿನಂತಿದೆ. ವಿವರ | ಸಾಮಾನ್ಯ ನಿಧಿ | ದತ್ತಿ ನಿದಿ | ಆವರ್ತ ನಿಧಿಗಳು | ಒಟ್ಟು ಮೊತ್ತ ಪ್ರಾರಂಭ ಶಿಲ್ಕು | 768645000 | 8562389 | 33591698 | 810799087 ತೊಡಗಿಸಿದ್ದು | 2487800000 | 1300000 | 159217798 | 2648317798 ನಗದೀಕರಿಸಿದ್ದು | 2132900000 | 80000 | 143998854 | 2276978854 ಅಂತಿಮ ಶಿಲ್ಕು | 1123545000 | 9782389 | 48810642 | 1182138031 ತೊಡಗಿಸಿದ ಹಣದ ವಿವರಗಳು ಈ ವರದಿಗೆ ಲಗತ್ತಿಸಿದ ಅನುಬಂಧ –9ರಲ್ಲಿ ವಿವರಿಸಿದಂತಿವೆ. ಲೆಕ್ಕ ಪರಿಶೋಧನಾ ಕಾಲಕ್ಕೆ ಬ್ಯಾಂಕಗಳಿಂದ FDR Confirmation ಪಡೆದ ದಾಖಲೆಗಳನ್ನು ಒದಗಿಸಲು ಸೂಚಿಸಿದ್ದು ಲೆಕ್ಕ ಪರಿಶೋಧನೆಗೆ ಮಾಹಿತಿ ಒದಗಿಸಿರುವುದಿಲ್ಲ. Bank Confirmation ಪಡೆದುಕೊಳ್ಳುವಂತೆ ಸೂಚಿಸಲಾಗಿದೆ.	**11** ಬ್ಯಾಂಕಿನಲ್ಲಿ ಠೇವಣಿ ಮಾಡಲ್ಪಟ್ಟ ಮೊತ್ತದ **FDR Confirmation** ಪಡೆಯುವ ಕುರಿತು ಕ್ರಮ ಜರುಗಿಸಲಾಗುತ್ತದೆ.
	ವಿದ್ಯಾರ್ಥಿಗಳ ಶುಲ್ಕದ ಮಾಹಿತಿ	
12	**ಕೃಷಿ ವಿಶ್ವವಿದ್ಯಾಲಯ ಧಾರವಾಡ ಕಾಲೇಜು/ಮಹಾವಿದ್ಯಾಲಯಗಳ ಹಾಗೂ ಪಿ.ಜಿ, ಡಿಪ್ಲೋಮಾ ಕೋರ್ಸ್‌ಗಳ ವಿದ್ಯಾರ್ಥಿಗಳ 2017–18 ನೇ ಸಾಲಿನ ಪ್ರವೇಶಾತಿ ಶುಲ್ಕಗಳ ವಿವರ ಈ ಕೆಳಗಿನಂತಿವೆ.** Sl .No | Name of college | Year | No of students | Demand | Collection | Balance | Remarks 1 | Dharwad diploma | 2017-18 | 31+31=62 | 341360 | 336935 | 4425 | 2 | Jamakhandi diploma | 2017-18 | 96 | 236895 | 233485 | 3410 | -	**12** ಪ್ರವೇಶಾತಿ ಶುಲ್ಕಗಳು ಸ್ವೀಕೃತಿಯಾದ ನಂತರ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತದೆ

3	Kumata diploma	2017-18	86	166770	166770	0	-
4	Nippani diploma	2017-18	78	159610	159610	0	-
5	Hanamanamatti college	2017-18	470	5050425.00	4332465.00	717960.00	
6	Home science college	2017-18	303	8009925	6811515	1198410	-
7	Konnurdiploma	2017-18	36	102030	102030	0	-
8	Dean PG	2015-16	289	17592000	17592000	0	-
		2016-17	280	15450530	15450530	0	-
		2017-18	257	19832904	19832904	0	-
9	Sirsi college	2017-18	59	1414830	591000	823830	
10	Vijayapur college including diploma	2017-18	518	17193898	16346158	847740	-
11	diploma Hanamanamatti college	2017-18	20	112300	112300	00	
12	Dharwada agri college		1260	33069540	31986585	1082955	
			Total	118733017	114054287	4678730	

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಒಟ್ಟು ರೂ– 4678730/-ಗಳನ್ನು ವಸೂಲಾತಿಗೆಸೂಚಿಸಿದೆ.

	ಆಡಳಿತ ವಿಭಾಗದ ನ್ಯೂನ್ಯತೆಗಳು:–	
13	ವಿಭಾಗದಲ್ಲಿ ನಿರ್ವಹಿಸಿರುವ **Scale register** ಹಾಜರುಪಡಿಸದೇ ಇರುವ ಕುರಿತು. (ಕುಲಸಚಿವರ ಕಛೇರಿ ಕಂ.ಸಂ.11) ಕುಲಸಚಿವರ ಕಾರ್ಯಾಲಯದಿಂದ ನೇಮಕಾತಿ ಪ್ರಕ್ರಿಯೆಗಳು ಜರುಗುತ್ತವಾದ್ದರಿಂದ ಕೃಷಿ ವಿಶ್ವವಿದ್ಯಾಲಯಕ್ಕೆ ಕಾಲಕಾಲಕ್ಕೆ ಮಂಜೂರಾದ ವಿವಿಧ ವೃಂದದ ಹುದ್ದೆಗಳ ವಿವರವನ್ನು ದಾಖಲ್ಮಾಡುವ Scale Register ಗಳನ್ನು ಕಾಲೋಚಿತಗೊಳಿಸಿ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ–2 ದಿನಾಂಕ 04.08.2019 ರಲ್ಲಿ ನೀಡಲಾಗಿ ಯಾವುದೇ ಅನುಸರಣೆ ನೀಡಿರುವುದಿಲ್ಲ. Scale register ಕಾಲೋಚಿತಗೊಳಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. ಬೋಧಕ ಸಿಬ್ಬಂದಿ **Sl.No** | **cadre** | **No. of posts** (sanctioned | filled | vacant) **Group A** 1 | PROFESSOR | 57 | 13 | 44 2 | ASSOCIATE PROFESSOR | 90 | 42 | 48 3 | ASSISTANT PROFESSOR | 448 | 398 | 50 | TOTAL | 595 | 453 | 142 ಬೋಧಕೇತರ ಸಿಬ್ಬಂದಿ **Sl.No.** | **cadre** | **No. of posts** (sanctioned | filled | vacant) 1 | Group A | 44 | 29 | 15 2 | Group B | 60 | 34 | 26 3 | Group C | 567 | 346 | 221 4 | Group D | 403 | 93 | 310 | TOTAL | 1074 | 502 | 572 ವಿಶ್ವವಿದ್ಯಾಲಯದಲ್ಲಿ 50% ರಷ್ಟು ಹುದ್ದೆಗಳು ಖಾಲಿ ಇದ್ದು ಶೈಕ್ಷಣಿಕ/ಶೈಕ್ಷಣಿಕೇತರ ಕಾರ್ಯಕ್ರಮಗಳು ಕ್ರಮಬದ್ಧವಾಗಿ ನಡೆಯುತ್ತಿರುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಂಡು ಲೆಕ್ಕ ಪರಿಶೋಧನೆಗೆ ಮಾಹಿತಿ ಒದಗಿಸಲು ಸೂಚಿಸಿದೆ. ಮುಂದುವರೆದು ಖಾಲಿ ಹುದ್ದೆಗಳ ಅವಶ್ಯಕತೆ ಇಲ್ಲದಿದ್ದಲ್ಲಿ ಅವುಗಳನ್ನು ರದ್ದು ಪಡಿಸಲು ಕೋರಿ ಸರ್ಕಾರಕ್ಕೆ ಮಾಹಿತಿ ಒದಗಿಸಲು ಸೂಚಿಸಿದೆ. Scale registerಕಾಲೋಚಿತಗೊಳಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.	13 **Scale register** ನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗುವುದು

	ಸಿಬ್ಬಂದಿ ಸೇವಾ ಪುಸ್ತಕ	
14	ಶಿಕ್ಷಕೇತರ ಸಿಬ್ಬಂದಿಗಳಿಗೆ ಹಿಂದಿನಿಂದ ಕಾಲ್ಪನಿಕ ಬಡ್ತಿ ನೀಡಿ ನಿಯಮಬಾಹಿರವಾಗಿ ವೇತನ ನಿಗದಿಪಡಿಸಿರುವ ಕುರಿತು.(ಮುಂದುವರೆದ ಪ್ಯಾರಾ/2013–2014/2014–2015) (ಆಡಳಿತಾಧಿಕಾರಿಗಳ ಕಛೇರಿ ಕಂ.ಸಂ.6) ಕೃವಿವಿಯ ಬೋಧಕೇತರ ಸಿಬ್ಬಂದಿಗಳಿಗೆ ಹಿಂದಿನ ದಿನಾಂಕದಿಂದ ಕಾಲ್ಪನಿಕವಾಗಿ ಬಡ್ತಿ ನೀಡಿ ಸದರ ದಿನಾಂಕದಿಂದಲೇ ಬಡ್ತಿ ನೀಡಿದ ಹುದ್ದೆಯಲ್ಲಿ ವೇತನ ನಿಗದಿಪಡಿಸಿ, ಬಡ್ತಿ ನೀಡಿದ ಹುದ್ದೆಗೆ ಹಾಜರಾದ ದಿನಾಂಕದಿಂದ ಆರ್ಥಿಕ ಲಾಭ ನೀಡಿರುವದು ಅನೇಕ ಪ್ರಕರಣಗಳಲ್ಲಿ ಸಂಬಂಧಿಸಿದ ಘಟಕ/ಕಛೇರಿಗಳ ಲೆಕ್ಕ ಪರಿಶೋಧನಾ ಕಾಲಕ್ಕೆ ಕಂಡು ಬರುತ್ತದೆ. ಕರ್ನಾಟಕ ಸೇವಾ ನಿಯಮಾವಳಿಯ ನಿಯಮ–22 ರಲ್ಲಿಯ ನಿರ್ದೇಶನದಂತೆ ಯಾವುದೇ ಹುದ್ದೆಗೆ ಅನ್ವಯವಾಗುವ ವೇತನ ಹಾಗೂ ಬತ್ತೆಯನ್ನು ಪ್ರವಹಿಸಿಕೊಂಡ ದಿನದಿಂದ ಮಾತ್ರ ಪಡೆಯಬಹುದಾಗಿದೆ. ಕರ್ನಾಟಕ ನಾಗರಿಕ ಸೇವಾ (ಬಡ್ತಿ, ವೇತನ ಹಾಗೂ ಪಿಂಚಣಿ ನಿಯಂತ್ರಣ) ಅಧಿನಿಯಮ 1973 ರ ನಿಯಮಗಳಲ್ಲಿ ನಿರ್ದೇಶಿಸಿದಂತೆ ಹಾಗೂ ಸರ್ಕಾರದ ಆದೇಶ ಸಂ.ಜಿ.ಎಡ್–4 /ಐ.ಎಫ.ಪಿ–73 ದಿ.13.11.1973 ರಂತೆ ಜೇಷ್ಠತಾ ಪಟ್ಟಿಯಲ್ಲಿದ್ದ ಯಾವುದೇ ನೌಕರನನ್ನು ಕಡೆಗಣಿಸಿ ಕಿರಿಯ ನೌಕರನಿಗೆ ಬಡ್ತಿ ನೀಡಿದ ಪ್ರಕರಣಗಳಲ್ಲಿ ಮುಂದೆ ಹಿರಿಯ ನೌಕರನ ಬಡ್ತಿಯನ್ನು ಸಕ್ರಮಗೊಳಿಸುವ ಪ್ರಸಂಗದಲ್ಲಿ ಮಾತ್ರ ಹಿಂದಿನ ದಿನಾಂಕದಿಂದ ಬಡ್ತಿ ನೀಡಲು ಅವಕಾಶವಿದೆ. ಆದರೆ ಇಲ್ಲಿ ಸದರ ನಿಯಮಾವಳಿಯಡಿಯಲ್ಲಿ ಹೇಳಿದ ಷರತ್ತುಗಳನ್ನು ಪೂರೈಸಿರುವುದಿಲ್ಲ. ಆದ್ದರಿಂದ ಪೂರ್ವಾನ್ವಯವಾಗಿ ಬಡ್ತಿ ನೀಡಿದ್ದು ನಿಯಮಬಾಹಿರವಾಗುತ್ತದೆ. ಈ ವಿಷಯವನ್ನು ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ಆದೇಶಗಳಡಿಯಲ್ಲಿ ಪರಿಶೀಲಿಸಿ, ದಿ.31.05.1997 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ 55 ನೇಯ ಸಭೆಯಲ್ಲಿ ಶಿಕ್ಷಕೇತರ ಸಿಬ್ಬಂದಿಗಳಿಗೆ ಬಡ್ತಿಯನ್ನು ಅವರು ಬಡ್ತಿ ಪಡೆದ ಹುದ್ದೆಗೆ ಹಾಜರಾದ ದಿನದಿಂದ ಪರಿಗಣಿಸಲು ನಿರ್ಣಯ ತೆಗೆದುಕೊಂಡಿದ್ದು ಸದರ ಸಿಬ್ಬಂದಿಗಳಿಗೆ ಕಾರಣ ಕೇಳುವ ನೋಟಿಸು ನೀಡಿ ಈಗಾಗಲೇ ಪಾವತಿಸಿದ ಹೆಚ್ಚುವರಿ ವೇತನ ಮೊತ್ತವನ್ನು ಅವರಿಗೆ ಮುಂದೆ ನೀಡುವ ವೇತನದಲ್ಲಿ ಹೊಂದಾಣಿಕೆ ಮಾಡಿಕೊಂಡು ವಸೂಲಾತಿ ಮಾಡಿಕೊಳ್ಳಲು ತೀರ್ಮಾನಿಸಿದೆ. ಸದರ ನಿರ್ದೇಶನದನ್ವಯ ಸಂಬಂಧಿಸಿದ ಸಿಬ್ಬಂದಿಗಳ ವೇತನವನ್ನು ಪುನರ ಪರಿಶೀಲಿಸಿ, ಅವರು ಬಡ್ತಿ ಪಡೆದ ಹುದ್ದೆಗೆ ಹಾಜರಾದ ದಿನದಿಂದ ಸದರ ಹುದ್ದೆಯ ವೇತನ ಶ್ರೇಣಿಯಲ್ಲಿ ವೇತನ ಹಂತವನ್ನು ನಿಗದಿಪಡಿಸಿ ಹೆಚ್ಚುವರಿಯಾಗಿ ಪಾವತಿಸಿದ ಮೊತ್ತದ ವಸೂಲಾತಿ ಕುರಿತು ಕುಲಸಚಿವರು ಕೃಷಿ ವಿಶ್ವವಿದ್ಯಾಲಯ ಧಾರವಾಡ ಇವರಿಂದ ಈ ವರೆಗೂ ಯಾವುದೇ ಕ್ರಮ ಕೈಗೊಳ್ಳದಿರುವುದು ಅನಿಯಮಿತ. ಕಾರಣ ಸದರ ನೌಕರರ ವೇತನವನ್ನು ವಾಸ್ತವಿಕವಾಗಿ ಅವರು ಹುದ್ದೆ, ಧಾರಣ ಮಾಡಿದ ದಿನದಿಂದ ನಿಗದಿಗೊಳಿಸಿ, ವರದಿಯ ಅವಧಿಯವರೆಗೆ ಹೆಚ್ಚಿಗೆ ಸಂದಾಯವಾದ ವೇತನ ಹಾಗೂ ಭತ್ತೆಯನ್ನು ಲೆಕ್ಕ ಹಾಕಿ ಕೂಡಲೇ ವಸೂಲ ಮಾಡಲು ಸೂಚಿಸಿದೆ.	14 ಕೃಷಿ ವಿಶ್ವವಿದ್ಯಾಲಯ, ಧಾರವಾಡವು 1986 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದರೂ 1995 ರವರೆಗೆ ತನ್ನದೇ ಆದ ಹುದ್ದೆ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿಕೊಂಡಿರುವುದಿಲ್ಲ. ತನ್ನದೇ ಆದ ಹುದ್ದೆ ಮತ್ತು ನೇಮಕಾತಿ ನಿಯಮಾವಳಿಗಳನ್ನು ರೂಪಿಸಿಕೊಳ್ಳುವವರೆಗೆ ಕೃವಿವಿ ಬೆಂಗಳೂರು ನಲ್ಲಿ ಅಸ್ತಿತ್ವದಲ್ಲಿರುವ ನಿಯಮಾವಳಿಗಳನ್ನೇ ಕೃವಿವಿ ಕಾಯಿದೆ 1986 ರಲ್ಲಿ ತಿಳಿಸಿದಂತೆ ಕೃವಿವಿ, ಧಾರವಾಡಕ್ಕೂ ಅನುಸರಿಸಿಕೊಂಡು ಬಂದಿರುತ್ತದೆ. ಪ್ರಸ್ತುತ ಮುಂಬಡ್ತಿಗಳು ಮಾತೃ ಸಂಸ್ಥೆಯಾದ ಕೃವಿವಿ ಬೆಂಗಳೂರಿನ ಸಿಬ್ಬಂದಿಗಳಿಗೆ ನೀಡಲ್ಪಟ್ಟಿರುವುದನ್ನು ಪರಿಗಣಿಸಿ ವಿಭಜಿತ ಪೂರ್ವ ವಿಶ್ವವಿದ್ಯಾಲಯದ ಶಿಕ್ಷಕೇತರ ಸಿಬ್ಬಂಧಿಗಳು ತಮಗೂ ಕೂಡಾ ಮುಂಬಡ್ತಿಗಳನ್ನು ನೀಡಲು ಆರ್.ಪಿ.ಪಿ.ಪಿ ಕಾಯ್ದೆ (**Regularisation of Promotion Pay and pension Act)** ಯ

	ಉದಾಹರಣೆಗಾಗಿ ಬೋಧಕೇತರ ಸಿಬ್ಬಂದಿ ಶ್ರೀ. ಎಂ.ಜಿ.ಸವಣೂರ ಇವರಿಗೆ ವಿವರ ನಮೂದಿಸದೆ ಎರಡು ಮುಂಗಡ ವೇತನ ಬಡ್ತಿಗಳನ್ನು ನೀಡಿದ ಕುರಿತು ವಿವರ ಈ ಕೆಳಗಿನಂತಿವೆ.(ಮುಂದುವರೆದ ಪ್ಯಾರಾ) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆದೇಶ ಸಂಖ್ಯೆ : 3262-B/88-89/8/9/1988ರ ಮೇರೆಗೆ ಶ್ರೀ. ಎಂ.ಜಿ. ಸವಣೂರ ಇವರು ಮೆಸೆಂಜರ್ (ಸುದ್ದಿವಾಹಕ) ಎಂದು ವೇತನ ಶ್ರೇಣಿ 780-1040ರಲ್ಲಿ ಎ.ಆರ್.ಎಸ್. ಧಾರವಾಡ ಇಲ್ಲಿ ದಿನಾಂಕ: 11.08.1988ರಂದು ಕರ್ತವ್ಯಕ್ಕೆ ಹಾಜರಾಗಿದ್ದಾರೆ. 1. ಸದರಿಯವರಿಗೆ ದಿನಾಂಕ 01.07.1993ರ ಪರಿಷ್ಕೃತ ವೇತನ ಶ್ರೇಣಿ 840-1340ಯಲ್ಲಿ ದಿನಾಂಕ 01.08.1993ಕ್ಕೆ ವೇತನ ರೂ. 940.00ಕ್ಕೆ ನಿಗದಿಗೊಳಿಸಿದ್ದು ಕಂಡುಬರುತ್ತದೆ. 2. ಮುಖ್ಯಸ್ಥರು, ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ ಇವರ ಆದೇಶ ಸಂಖ್ಯೆ. ಸಿ.ಶಾ.ಬಸ್ತಿ-94 ದಿನಾಂಕ 15.10.1994ರ ಆದೇಶಾನುಸಾರ ಸದರಿಯವರಿಗೆ ಸುದ್ದಿವಾಹಕ ಹುದ್ದೆಯಿಂದ ಅಟೆಂಡರ್ (ಪರಿಚಾರಕ) ಹುದ್ದೆಗೆ ವೇತನ ಶ್ರೇಣಿ 1040-1900ಯಲ್ಲಿ ಬಡ್ತಿ ನೀಡಿದ್ದು, ಸದರಿಯವರು ಅಡೆಂಡರ್ ಹುದ್ದೆಗೆ ದಿನಾಂಕ 19.10.1994ರಂದು ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿಯಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದಾರೆ. 3. ಮುಂದುವರೆದು ಮುಖ್ಯಸ್ಥರು, ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ ಇವರ ಆದೇಶ ಸಂಖ್ಯೆ : 6289-A/94-95 ಮತ್ತು ಸಹಾಯಕ ಸಂಶೋಧನ ನಿರ್ದೇಶಕರು, ಬಿಜಾಪೂರ ಇವರ ಕಛೇರಿ ಆದೇಶ ಸಂಕ್ಯೆ: 208/95-96 ದಿನಾಂಕ 21.04.1995ರ ಅನುಸಾರ ಸದರಿಯವರ ವೇತನವನ್ನು ಈ ಕೆಳಗಿನಂತೆ ನಿಗದಿಗೊಳಿಸಿ ಸಂದಾಯಿಸಿದ್ದಾರೆ. ದಿನಾಂಕ : 01.08.1993 – 940 ವೇತನ ಶ್ರೇಣಿ (840-1340) ದಿನಾಂಕ : 11.08.1993 – 1040 ವೇತನ ಶ್ರೇಣಿ (1040-1900) ದಿನಾಂಕ : 01.08.1994 – 1060 ವೇತನ ಶ್ರೇಣಿ (1040-1900) 4. ಆದರೆ ಸವಣೂರ ಅವರು ಬಡ್ತಿ ಹೊಂದಿದ ಅಡೆಂಡರ್ ಹುದ್ದೆಯ ಕರ್ತವ್ಯಕ್ಕೆ ದಿನಾಂಕ 19.10.1994ರಂದು ಹಾಜರಾಗಿದ್ದು, ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಬಡ್ತಿ ಹೊಂದಿದ ಹುದ್ದೆಯ ವೇತನ ಶ್ರೇಣಿ ಮತ್ತು ವೇತನ ನಿಗದಿಪಡಿಸಿ ಸಂದಾಯಿಸುವದು ನಿಯಮಬದ್ಧವಾಗಿದೆಯೆ ಹೊರತು, ಸದರಿಯವರು ಮೆಸೆಂಜರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ಮುಂದೆ ಬಡ್ತಿ ನೀಡುವ ಅಟೆಂಡರ್ ಹುದ್ದೆಯ ವೇತನ ಶ್ರೇಣಿ ನಿಗದಿಪಡಿಸಿ ವೇತನ ನೀಡಿದ್ದು ಆಕ್ಷೇಪಾರ್ಹವಾಗಿದೆ. 5. ಈ ಮೇಲೆ ತಿಳಿಸಿದಂತೆ ಸದರಿಯವರ ವೇತನವನ್ನು ತಪ್ಪಾಗಿ ನಿಗದಿಪಡಿಸಿದ್ದೂ ಅಲ್ಲದೆ ಅದೇ ಆಧಾರದ ಮೇಲೆ ಸದರಿಯವರಿಗೆ ವಾರ್ಷಿಕ ವೇತನ ಬಡ್ತಿಗಳನ್ನು, 1.4.1998, 1.7.2005 ಮತ್ತು 1.4.2012ರ ಪರಿಷ್ಕೃತ ಶ್ರೇಣಿಗಳನ್ನೂ ಹಾಗೂ ದಿನಾಂಕ 19.10.2004 ರಂದು ಆಯ್ಕೆಕಾಲಿಕ ವೇತನ ಶ್ರೇಣಿ ಮತ್ತು ಸ್ವಯಂ ಚಾಲಿತ ಬಡ್ತಿ ಯೋಜನೆ ಅಡಿಯಲ್ಲಿ ದಿನಾಂಕ 19.10.2009ಕ್ಕೆ ಹಿರಿಯ ವೇತನ ಶ್ರೇಣಿ ನೀಡಿ ದಿನಾಂಕ 1.8.2014ಕ್ಕೆ ಇವರ ಮೂಲ ವೇತನ ರೂ. 18550.00 ನೀಡಿದ್ದು ಸಮಂಜಸವಾಗಿರುವುದಿಲ್ಲ ಈ ಹಿನ್ನೆಲೆಯಲ್ಲಿ ಮೇಲೆ ತಿಳಿಸಿದ ಹೆಚ್ಚುವರಿ ವೇತನ ಬಡ್ತಿಗಳನ್ನು ಅನಿಯಮಿತವಾಗಿ ಪ್ರಸ್ತುತ ಸಾಲಿನವರೆಗೆ ಸಂದಾಯಿಸಿದ್ದಕ್ಕೆ ಸೂಕ್ತ ಕಾರಣ / ಉತ್ತರ ನೀಡುವದು, ತಪ್ಪಾಗಿ ವಾರ್ಷಿಕ ವೇತನ ಬಡ್ತಿಗಳನ್ನು ನೀಡಿರುವ ಸಂದರ್ಭದಲ್ಲಿ ದಿ. 1.8.1993 ರಿಂದ ಪ್ರಸ್ತುತ ಸಾಲಿನವರೆಗೆ ಹೆಚ್ಚುವರಿಯಾಗಿ ಪಾವತಿಸಿರುವ ವೇತನವನ್ನು ಲೆಕ್ಕ ಹಾಕಿ ವಸೂಲಿಸಿ ಲೆಕ್ಕ ಪರಿಶೋಧನೆಗೆ ವರದಿ ನೀಡುವಂತೆ 2015-2016 ನೇ ಸಾಲಿನ ಲೆಕ್ಕ ಪರಿಶೋಧನಾ	ಅವಕಾಶವನ್ನು ವಿಸ್ತರಿಸಲು ವತ್ತಾಯಿಸಿದ್ದನ್ನು ಗಣನೆಗೆ ತೆಗೆದುಕೊಂಡು ಕೃ ವಿ ವಿ ಆಡಳಿತ ಮಂಡಳಿಯು ದಿನಾಂಕ 21.06.1993 ರಂದು ನಡೆದ ತನ್ನ 29 ನೇಯ ಸಭೆಯಲ್ಲಿ ಅಂಗೀಕರಿಸಿದಂತೆ ಕೃವಿವಿ, ಬೆಂಗಳೂರು ಹುದ್ದೆ ಮತ್ತು ನೇಮಕಾತಿ ನಿಯಮ ಆಧರಿಸಿ ಖಾಲಿ ಇರುವ ಹುದ್ದೆ ಮತ್ತು ಅರ್ಹತೆ ಮುಂತಾದವುಗಳನ್ನು ಪರಿಶೀಲಿಸಿ ಪದೋನ್ನತಿ ನೀಡಲು ವಿಳಂಬವಾಗಿರುವ ಅಂಶವನ್ನು ಪರಿಗಣನೆಗೆ ತೆಗೆದುಕೊಂಡು ಆರ್.ಪಿ.ಪಿ.ಪಿ ಕಾಯ್ದೆ ಅವಕಾಶದಂತೆ ಉಹಾತ್ಮಕ ಪದೋನ್ನತಿಯನ್ನು ನೀಡಿದ್ದು ಅರ್ಹತಾ ದಿನಾಂಕದಿಂದ ಅನ್ವವಾಗುವಂತೆ ಪೂರ್ವಾನ್ವಯವಾಗಿ ವೇತನ ನಿಗದಿಪಡಿಸಿ ಅದರಹಣಕಾಸಿನ ಲಾಭವನ್ನು ಸದರಿಯವರು ಸೇವೆಗೆ ಹಾಜರಾದ ದಿನಾಂಕದಿಂದ ಮಾತ್ರ ನೀಡಲಾಗಿದೆ.

ವರದಿಯಲ್ಲಿ ತಿಳಿಸಲಾಗಿತ್ತು.

ವಿಶ್ವವಿದ್ಯಾಲಯದ ಮೊದಲನೆಯ ಅನುಶಾಸನ **1987** ಕಂಡಿಕೆ **31**(ii)ರ ಪ್ರಕಾರ Appointment to such of the categories of posts to be done on promotion and the procedure to be adopted should be as determined by the Board and Published as Regulation ಅಂದರೆ ಹುದ್ದೆ ಪದೋನ್ನತಿ ಆಯ್ಕೆಗೆ ಹಾಗೂ ಸದರ ಪದೋನ್ನತೆಗೆ ಅನುಸರಿಸಬೇಕಾದ ಪದ್ದತಿಯನ್ನು ವಿಶ್ವವಿದ್ಯಾಲಯದ ಬೋರ್ಡ್ ನಿರ್ಧರಿಸಬೇಕು. ಮತ್ತು ಸದರ ನಿರ್ಣಯಗಳನ್ನು ವಿಶ್ವವಿದ್ಯಾಲಯದ ರೆಗ್ಯೂಲೇಶನ್ ಮೂಲಕ ಹೊರಡಿಸಬೇಕು ಎಂದು ಮಾತ್ರ ತಿಳಿಸಿದ್ದು.

ಆದರೆ ಸದರ ಅನುಶಾಸನದ ಪ್ರಕಾರ ಪದೋನ್ನತಿ ನೀಡುವ ಸಂದರ್ಭದಲ್ಲಿ Notional Promotion (ಕಾಲ್ಪನಿಕ ಬಡ್ತಿ) ಮೂಲಕ ವೇತನವನ್ನು ನಿಗದಿಪಡಿಸಿ ಸ್ಥಿರೀಕರಿಸುವ ಬಗ್ಗೆ ತಿಳಿಸಿರುವದಿಲ್ಲ.

ಶ್ರೀ. ಎಂ.ಜಿ. ಸವಣೂರ : ಮೆಸೆಂಜರ

D.O.J : 11.08.1988

Paid			To be paid		
11.08.1988	**780[780–1040]**				
11.08.1989	**795**				
11.08.1990	**810**				
11.08.1991	**825**				
11.08.1992	**840**				
01.07.1993	**920[840–1340]**	RPS 1993			
01.08.1993	**940**		**01.08.1993**	**940[840–1340]**	Messanger
11.08.1993	**1040 [1040–1900]**		**01.08.1994**	**960**	
01.08.1994	**1060**				
19.10.1994	**1060**	Prom Attender	**19.10.1994**	**1040 [1040–1090]**	Prom Attende
01.08.1995	**1080**		**01.10.1995**	**1060**	
01.08.1996	**1100**		**01.10.1996**	**1080**	
01.08.1997	**1130**		**01.10.1997**	**1100**	
01.04.1998	**3075[3000–5450]**	RPS 1998	**01.04.1998**	**3000[3000–5450]**	RPS 1998
01.08.1998	**3150**		**01.10.1998**	**3075**	

01.08.1999	**3225**		**01.10.1999**	**3150**	
01.08.2000	**3300**		**01.10.2000**	**3225**	
01.08.2001	**3375**		**01.10.2001**	**3300**	
01.08.2002	**3450**		**01.10.2002**	**3375**	
01.08.2003	**3550**		**01.10.2003**	**3450**	
01.08.2004	**3650**		**19.10.2004**	**3550**	
19.10.2004	**3750[3300–6300]**	TBT 10 years	**19.10.2004**	Not given	
01.07.2005	**7100 [6250–12000]**	RPS 2005	**01.07.2005**	**6800[5800–10500]**	
01.08.2005	**7275**		**01.10.2005**	**6950**	
01.08.2006	**7450**		**01.10.2006**	**7100**	
01.08.2007	**7625**		**01.10.2007**	**7275**	
01.08.2008	**7800**		**01.10.2008**	**7450**	
01.08.2009	**8000**		**01.10.2009**	**7625**	
19.10.2009	**8200[6800–13000]**	15 year	**19.10.2009**	Not given	
01.08.2010	**8400**		**01.10.2010**	**7800**	
01.08.2011	**8600**		**01.10.2011**	**8000**	
01.04.2012	**17200[13600–26000]**	RPS 2012	**01.04.2012**	**16000[11600–21000]**	RPS 2012
01.08.2013	**18100**		**01.10.2012**	**16400**	
–	**–**	**–**	**01.10.2013**	**16800**	
01.08.2014	**18550**		**01.10.2014**	**17200**	
01.08.2015	**19000**		**01.10.2015**	**17650**	
01.08.2016	**19500**	**–**	**01.10.2016**	**18550**	
01.08.2017	**20000**		**01.10.2017**	**19000**	

ಕ್ರ. ಸಂ	ಹೆಸರು ಹುದ್ದೆ	ಸಂದಾಯ ಮಾಡಿದ ಮೂಲ ವೇತನ	ಸಂದಾಯ ಮಾಡಬೇಕಾದ ಮೂಲ ವೇತನ	ವ್ಯತ್ಯಾಸ			ಒಟ್ಟು (5+6+7=8	ಅವಧಿ	ತಿಂಗಳು	ವ್ಯತ್ಯಾಸ ಮೊತ್ರ (8×10=11)	ಒಟ್ಟು
				ವೇತನ (3–4=5)	ತುಟ್ಟಿ ಭತ್ಯೆ	ಮ.ಬ ಭತ್ಯೆ					
1	2	3	4	5	6	7	8	9	10	11	
1	ಶ್ರೀ ಎಂ ಜಿ. ಸವಣೂರ (ಸಿಪಾಯಿ)	19500	18550	950	411	190	1551	3–6/2016	4	6204	2016–2017 ರವರೆಗಿನ ಬಾಕಿ 58510
		19500	18550	950	430	190	1570	7/2016	1	1570	
		20000	18550	1450	656	290	2396	8–9/2016	2	4792	
		20000	19000	1000	453	200	1653	10–12/2016	3	4959	
		20000	19000	1000	18	200	1218	1–2/2017	2	2436	
										19961	78471

ಸದರಿಯವರಿಗೆ 2017–18 ನೆ ಸಾಲಿನಲ್ಲಿ ಅನಿಯಮಿತವಗಿ ಸಂದಾಯಿಸಿರುವ ಮೊತ್ತ ರೂ. 19,961/– ಗಳನ್ನು ವಸೂಲಿಸಿ ಲೆಕ್ಕ ಪರಿಶೋಧನೆಗೆ ಅನುಸರಣೆ ನೀಡಲು ಸೂಚಿಸಿದೆ. ಹಿಂದಿನ ಸಾಲುಗಳಲ್ಲಿ ಹೆಚ್ಚುವರಿಯಗಿ ಪಾವತಿಸಿರುವ ವೇತನ + ಭತ್ಯಗಳನ್ನು ವಿಶ್ವವಿದ್ಯಾಲಯವೇ ಲೆಕ್ಕ ಹಾಕಿ ವಸೂಲಿಸಿ ಅನುಸರಣೆ ನೀಡುವುದು. ಸದರಿಯವರ ಪ್ರಕರಣವು ಉದಾಹರಣೆ ಮಾತ್ರ ಆಗಿದ್ದು ಇಂತಹ ಇನ್ನುಳಿದ ಎಲ್ಲ ಪ್ರಕರಣಗಳಲ್ಲಿಯೂ ಮೇಲಿನಂತೆ ಕ್ರಮ ಕೈಗೊಳ್ಳುವುದು. ಮೊತ್ತ ರೂ 19,961=00 ಗಳನ್ನು ವಸೂಲಾತಿಯಲ್ಲಿಡಲಾಗಿದೆ. ಇಂತಹ ಇನ್ನಿತರ ಪ್ರಕರಣಗಳ ವಿವರ ಈ ಕೆಳಗಿನಂತಿವೆ.

ಕ್ರ ಸಂ	ಘಟಕದ ಹೆಸರು ಹಾಗೂ ಲೆ.ಪ.ವರದಿ ಪ.ಪು.ಸಂ.	ಸಿಬ್ಬಂದಿ ಹೆಸರು	ಬಡ್ತಿ ಪೂರ್ವದ			ಕಾಲ್ಪನಿಕ ಬಡ್ತಿ ನೀಡಿದ ನಂತರ			ದಿನಾಂಕ	ಬಡ್ತಿ ಹುದ್ದೆಗೆ ವಾಸ್ತವಿಕ ಹಾಜರಿ ದಿನಾಂಕ
			ಹುದ್ದೆ	ವೇತನ ಹಂತ	ವೇತನ	ಹುದ್ದೆ	ವೇತನ ಶ್ರೇಣಿ	ವೇತನ		
1	ಕೃ.ಸಂ.ಕೇಂ. ಹೆಬ್ಬಳ್ಳಿ	ಶಿವಳ್ಳಿ ಬಿ.ಎನ್. ಹಿ.ಕ್ಷೇತ ಸ.	ಕ್ಷೇತ್ರ ಸಹಾಯಕ	840–1400	940	ಹಿರಿಯ ಕ್ಷೇತ್ರ ಸಹಾಯಕ	1040–1400	1040	13.1.94	29.6.95
		ಆರ.ಕೆ.ಮುಪ್ಪನಮಠ, ಹಿ.ಬೆರಚ್ಚುಗಾರರು	ಬೆರಳಚ್ಚುಗಾರ	1520–2900	2100	ಹಿರಿಯ ಬೆರಳಚ್ಚುಗಾರ	1720–3300	2150	26.2.96	8.10.96
2	ಕೃ.ಸಂ.ಕೇಂ. ಹನುಮನಮಟ್ಟಿ (26)	ಎನ.ಜಿ.ಲಮಾಣಿ ಅಟೆಂಡರ	ಸುದ್ದಿವಾಹಕ	780–1040	870	ಅಟೆಂಡರ	960–1760	960	23.4.92	9.10.93
		ಜಿ.ಎಂ. ಹಳಗೇರಿ, ಹಿ.ಕೃ.ಕಾರ್ಮಿಕ	ಹಿ.ಕೃ.ಕಾಮಿರ್ಕ	940–1680	1480	ಹಿ.ಕೃ.ಕಾರ್ಮಿಕ	1040–1900	1520	13.1.94	20.6.95
		ಎಸ್.ಎಂ.ತಳವಾರ ಹಿ.ಕಾವಲುಗಾರ	ಕಾವಲುಗಾರ	840–1340	920	ಹಿ.ಕಾವಲುಗಾರ	1040–1900	1040	13.1.94	20.6.95
		ಶಿವಪ್ಪ ಹಿ.ಜನೇಟರ	ಜಾನಿಟರ	870–1520	1040	ಹಿ. ಜಾನಿಟರ	1040–1900	1060	13.1.94	14.7.95
3	ಕೃ.ಸಂ.ಕೇಂ. ಅರಭಾವಿ	ತಿರ್ಲಾಪೂರ ಎಂ.ಬಿ. ಹಿ.ಆನಿಮಲ ಅಟೆಂಡರ್	ಅನಿಮಲ ಅಟೆಂಡರ	1040–1680	1220	ಹಿ. ಅನಿಮಲ ಅಟೆಂಡರ	1040–1900	1250	13.1.94	17.6.95

ಈ ಮೇಲೆ ತಿಳಿಸಿದ ಸಿಬ್ಬಂಧಿಗಳ ವೇತನ ವ್ಯತ್ಯಾಸವನ್ನು ಲೆಕ್ಕ ಹಾಕಿ ವಸೂಲು ಮಾಡಿ ಲೆಕ್ಕಪರಿಶೋಧನೆಗೆ ಅನುಸರಣೆಯನ್ನು ನೀಡಲು ಸೂಚಿಸಿದೆ.

	ಗುತ್ತಿಗೆ ಆಧಾರದ ಬಿಲ್ಲುಗಳು	
15	**ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾದ ಕೃಷಿ ಕಾರ್ಮಿಕರ/ಸಿಬ್ಬಂದಿಗಳ ಶಾಸನಬದ್ಧ ವಂತಿಕೆಗಳನ್ನು EPF ಮತ್ತು ESIC ಖಾತೆಗಳಿಗೆ (ಆಯಾ ನೌಕರರ) ಜಮೆ ಮಾಡಿರುವ ಮಾಹಿತಿಯನ್ನು ಒದಗಿಸದೇ ಇರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.53)** Megha Service pvt ltd ಮತ್ತು B.K.R.Swamy Security Serivceಇವರು **2017–18** ನೇ ಸಾಲಿನಲ್ಲಿ ಪ್ರತಿ ತಿಂಗಳ ಕೃಷಿ ಕಾರ್ಮಿಕರ /ಸಿಬ್ಬಂದಿಗಳ ವೇತನದಲ್ಲಿ ಕಡಿತ ಮಾಡಲಾದ ಶಾಸನಬದ್ಧ ವಂತಿಕೆಗಳಾದEPF &ESIಗಳನ್ನು ಸಂಬಂದಿಸಿದವರ ಖಾತೆಗಳಿಗೆ ಜಮೆ ಮಾಡಿರುವ ಬಗ್ಗೆECR (Electronic Challan Cum return)ಹಾಗೂESIC online Challanಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಲಾಗಿತ್ತು ಆದರೆ ಲೆಕ್ಕಪರಿಶೋಧನೆ ಮುಕ್ತಾಯವರೆಗೂ ಯಾವುದೇ ಮಾಹಿತಿಗಳನ್ನು ನೀಡಿರುವುದಿಲ್ಲ. **2017–18** ನೇ ಸಾಲಿನಲ್ಲಿ ಲೆಕ್ಕಪರಿಶೋಧನೆಗೆ ಒದಗಿಸಲಾದ ಟೆಂಡರ್ ಕಡತಗಳನ್ನು ಪರಿಶೀಲಿಸಿದಾಗ Megha Service PVt Ltdಇವರಿಗೆ ಹೊರಗುತ್ತಿಗೆ ಕೃಷಿ ಕಾರ್ಮಿಕರ ವೇತನಕ್ಕಾಗಿ ಪ್ರತಿ ತಿಂಗಳು ರೂ.**64.14** ಲಕ್ಷಗಳಿಗೆ, ಸೇವಾ ಶುಲ್ಕ ರೂ.**612/–** ರಂತೆ ಟೆಂಡರ್ ಬಿಡ್ ಮಾಡಿದ್ದು ಸದರಿಯವರಿಗೆ ಗುತ್ತಿಗೆ ಲಭಿಸಿರುತ್ತದೆ **2017–18** ರಲ್ಲಿ ಏಪ್ರೀಲ್ **2017** ರಿಂದ ಜನೇವರಿ–**2018** ರ ಅವಧಿಗೆ ಒಟ್ಟು **10** ತಿಂಗಳಿಗೆ ಅಂದಾಜು ರೂ.**641.4** ಲಕ್ಷಗಳ ಪಾವತಿಗೆ ಒಪ್ಪಂದದಂತೆ ಒಪ್ಪಲಾಗಿದ್ದು ಕಂಡು ಬಂದಿರುತ್ತದೆ. ಅದೇ ರೀತಿB.K.R.swamy Security Serivce ಇವರಿಂದ2017-18 ರಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳ ಸೇವಗೆ ಟೆಂಡರ್ ನೀಡಲಾಗಿದ್ದು ಸಿಬ್ಬಂದಿಗಳ ವೇತನಕ್ಕಾಗಿ ಪ್ರತಿ ತಿಂಗಳು ಪ್ರತಿ ಹೊರಗುತ್ತಿಗೆ ಸಿಬ್ಬಂದಿಗೆ ಸೇವಾ ಶುಲ್ಕ ರೂ.**99/–** ರಂತೆ ಟೆಂಡರ್ ಲಭಿಸಿದ್ದು ಕಂಡುಬಂದಿರುತ್ತದೆ **2017–18** ರಲ್ಲಿ ಒಟ್ಟು **300** ಹೊರಗುತ್ತಿಗೆ ಸಿಬ್ಬಂದಿಗಳ ಪೈಕಿ **201** ಗ್ರೂಪ್ ಸಿ ಮತ್ತು **99** ಗ್ರೂಪ್ ಡಿ ನೌಕರರಿಗೆ ಕನಿಷ್ಟ ಕೂಲಿ ಕಾಯ್ದೆ **1948**ರ ಕಾಯ್ದೆಯನ್ವಯ **2017–18** ನೇ ಸಾಲಿನಲ್ಲಿ ನಿಗದಿಪಡಿಸಿದಂತೆ ಗ್ರೂಪ್– ಸಿ ನೌಕರರಿಗೆ ಪ್ರತಿ ತಿಂಗಳು ರೂ.**8921/–** ಹಾಗೂ ಗ್ರೂಪ್ ಡಿ ನೌಕರರಿಗೆ ಪ್ರತಿ ತಿಂಗಳು	**15** Megha Service pvt ltd ಮತ್ತು B.K.R.Swamy Security Serivceಇವರು **2017–18** ನೇ ಸಾಲಿನಲ್ಲಿ ಪ್ರತಿ ತಿಂಗಳ ಕೃಷಿ ಕಾರ್ಮಿಕರ /ಸಿಬ್ಬಂದಿಗಳ ವೇತನದಲ್ಲಿ ಕಡಿತ ಮಾಡಲಾದ ಶಾಸನಬದ್ಧ ವಂತಿಕೆಗಳಾದ EPF & ESIಗಳನ್ನು ಸಂಬಂದಿಸಿದವರ ಖಾತೆಗಳಿಗೆ ಜಮೆ ಮಾಡಿರುವ ಬಗ್ಗೆ ECR (Electronic Challan Cum return) ಹಾಗೂ ESIC online Challan ಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಮುಂದಿನ ಲೆಕ್ಕ ತನಿಖೆಯಲ್ಲಿ ಹಾಜರು ಪಡಿಸಲಾಗುವುದು.

	ರೂ.**7621**/– ರಂತೆ ಲೆಕ್ಕಾಚಾರ ಮಾಡಿ ಇದರೊಂದಿಗೆEmployer ನ EPFವಂತಿಕೆ ಶೇ.**13.16** ಮತ್ತುESICಶೇ.**4.75** ರಷ್ಟು ವಂತಿಕೆಗಳನ್ನೊಳಗೊಂಡು (ಒಟ್ಟು ಶೇ 17.91) 2017–18 ರಲ್ಲಿ ಒಟ್ಟು ರೂ.**360.44** ಲಕ್ಷಗಳನ್ನುB K R Swamy Security Serviceಇವರಿಗೆ ಪಾವತಿಸಿರುವುದು ತಿಳಿದುಬಂದಿರುತ್ತದೆ. 2017–18 ನೇ ಸಾಲಿನ ಹಣಕಾಸು ನಿಯಂತ್ರಣಾಧಿಕಾರಿಗಳ ಕಚೇರಿ, ಧಾರವಾಡ ಘಟಕದ ವಿವಿಧ ಲೆಕ್ಕಶೀರ್ಷಿಕೆಗಳಡಿ ಕೃಷಿ ಕಾರ್ಮಿಕರ/ಸಿಬ್ಬಂದಿ ನೌಕರರ ವೇತನ ಪಾವತಿಯನ್ನು ಶಾಸನಬದ್ದ ವಂತಿಕೆ ಮೊತ್ತ ಸೇರಿಸಿ ಸದರಿ ಏಜೆನ್ಸಿಗಳಿಗೆ ಪಾವತಿಸಲಾಗಿರುತ್ತದೆ. ಆದರೆ ಶಾಸನಬದ್ದ ವಂತಿಕೆಗಳನ್ನು ಆಯಾ ನೌಕರರPF & ESICಖಾತೆಗಳಿಗೆ ಜಮೆ ಮಾಡಿರುವ ಬಗ್ಗೆ ECR & ESIC online challan ಪ್ರತಿಗಳನ್ನು ಬಿಲ್ಲಿನೊಂದಿಗೆ/ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ ಪ್ರತಿ ತಿಂಗಳು ಹೊರಗುತ್ತಿಗೆ ನೌಕರರ ವೇತನ ಬಿಲ್ಲುಗಳನ್ನು ಏಜೆನ್ಸಿಗಳಿಗೆ ಪಾವತಿ ಮಾಡುವ ಪೂರ್ವದಲ್ಲಿ ಹಿಂದಿನ ತಿಂಗಳ **PF& ESIC** ವಂತಿಕೆಗಳನ್ನು ಆಯಾ ನೌಕರರ **EPF&ESI** ಖಾತೆಗಳಿಗೆ ಜಮೆ ಮಾಡಲಾಗಿದೆಯೇ ಎಂಬುದನ್ನು ಪರಿಶೀಲಿಸಿ ಆಯಾ ತಿಂಗಳ ವೇತನ ಪಾವತಿ ಮಾಡಬೇಕಾಗಿರುತ್ತದೆ. ಕಾರಣ ಈ ಕುರಿತು ವಿಚಾರಣಾ ಪತ್ರ ಸಂಖ್ಯೆ:**114**, ದಿ:**28.01.2020** ರನ್ನು ನೀಡಲಾಗಿತ್ತು ಆದರೆ ಲೆಕ್ಕಪರಿಶೋಧನೆಗೆ **ECR & ESIC** ಚಲನ್ ಪ್ರತಿಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಈ ಕುರಿತು ಸ್ವೀಕರಿಸಲಾದ ಅನುಸರಣೆಯಲ್ಲಿ (ವಿಚಾರಣಾ ಪ.ಸಂ.**14**, ದಿ:**11.01.2020**) ಸದರಿ ಮಾಹಿತಿಯನ್ನು ಪೂರೈಸಲಾಗಿದೆ ಎಂದು ತಿಳಿಸಿದ್ದು ಕೊನೆಯವರೆಗೂ ಯಾವುದೇ ಚಲನ್ ಪ್ರತಿಗಳನ್ನು ಹಾಜರುಪಡಿಸಿರುವುದಿಲ್ಲ ಲೆ.ಶಿ **1016 Saalary of supernumerary** post ಎಂದು **8,51,62,005**/ ಮತ್ತು ಲೆ.ಶಿ **1030** ರಡಿ Employess under kowew act 2012 eMdu 48687700 ಗಳನ್ನು ಪಾವತಿಸಲಾಗಿರುತ್ತದೆ ವಿಶ್ವವಿದ್ಯಾಲಯದಲ್ಲಿ ಯಾವುದೇ ಹುದ್ದೆ ಭರ್ತಿ ಮಾಡಬೇಕಿದ್ದರೂ ತಮ್ಮಲ್ಲಿ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಖಾಲಿ ಇರುವ ಹುದ್ದೆಗಳಿಗೆ ಮಾತ್ರ ಭರ್ತಿ ಮಾಡಕೊಳ್ಳಬಹುದಾಗಿದ್ದು, ಸದರಿ ಹೊರಗುತ್ತಿಗೆ ಸಿಬ್ಬಂದಿಗಳನ್ನು ಮಂಜೂರಾದ ಖಾಲಿ ಹುದೆಗಳಿಗೆ ಎದುರಾಗಿ ನೇಮಕ ಮಾಡಿಕೊಂಡ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲಕಾರಣ ಒಟ್ಟು ರೂ.**10,01,84,000**/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	

<table>
<tr><td></td><td>KTPP ಉಲ್ಲಂಘಣೆ ಟೆಂಡರ್</td><td></td></tr>
<tr><td>16</td><td>

E-TDS Data conversion ಗಾಗಿ ಟೆಂಡರ್ ಕರೆಯದೇ ಕೇವಲ ಕೊಟೇಶನ್ ಕರೆದು ಪಾವತಿ ಮಾಡಿರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.24)

ಲೆಕ್ಕ ಶೀರ್ಷಿಕೆ **1004/310** ಅಡಿಯಲ್ಲಿ ವೋಚರ್‌ಗಳನ್ನು ಪರಿಶೀಲಿಸಲಾಗಿ E-TDS Data conversion ಗಾಗಿ ಕೋಟೆಷನ್ ಕರೆದು ಕಡಿಮೆ ದರ ನಮೂದಿಸಿದವರಿಗೆ Data conversion ಕೆಲಸವನ್ನು ನೀಡಲಾಗಿದೆ ಆದರೆ ವರ್ಷಪೂರ್ತಿ ಎಲ್ಲ ಬಿಲ್ಲುಗಳನ್ನು ಸೇರಿಸಿದಲ್ಲಿ **1** ಲಕ್ಷ ಮೇಲ್ಪಟ್ಟು ಈ ಕೆಲಸಕ್ಕಾಗಿ ಪಾವತಿಯಾಗಿದ್ದು KTPP 4(e) ಪ್ರಕಾರ ಟೆಂಡರ್ ಪ್ರಕ್ರಿಯೆ ಕೈಗೊಳ್ಳಬೇಕಿದ್ದು ಈ ನಿಯಮದ ಉಲ್ಲಂಘನೆಯಾಗಿರುತ್ತದೆ.

ವಿವರ ಈ ಕೆಳಗಿನಂತಿವೆ.

<table>
<tr><td>ಕ್ರ.ಸಂ</td><td>ವಿವರ</td><td>Invoice.No.</td><td>ಮೊತ್ತ</td></tr>
<tr><td>1</td><td>Subhas patil & Co.</td><td>011/18.08.2017</td><td>40437</td></tr>
<tr><td>2</td><td>Sri accounting services DWD</td><td>050/15.02.2018</td><td>50718</td></tr>
<tr><td>3</td><td>Subhas patil & Co.</td><td>039/03.11.2017</td><td>52834</td></tr>
<tr><td>4</td><td>Sri accounting services DWD</td><td>228/09.06.2017</td><td>77060</td></tr>
<tr><td></td><td></td><td>ಒಟ್ಟು</td><td>221049</td></tr>
</table>

ಮೇಲೆ ತೋರಿಸಿದಂತೆ 2,21,049=00 ಗಳಷ್ಟು ಖರ್ಚಾಗಿದ್ದು ಒಟ್ಟಾರೆ ಟೆಂಡರ್ ಕರೆಯದೇ ಇರುವುದರ ಕುರಿತು ಸೂಕ್ತ ವಿವರಣೆ ನೀಡಲು ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರಸಂಖ್ಯೆ:04 ದಿನಾಂಕ:07.01.2020 ನ್ನು ನೀಡಿದ್ದು ದಿನಾಂಕ:20.01.2020 ರಂದು ವಿಭಾಗದವರು ನೀಡಿದ ಅನುಸರಣೆಯಲ್ಲಿ ದಿನಾಂಕ 26.09.2003ರ ಅಧಿಸೂಚನೆ ಪ್ರಕಾರ ಕಡಿಮೆ ದರದ consultancy service **ಎಂದು ಪರಿಗಣಿಸಿ ಸದರಿ ಸೇವೆಯನ್ನು ಪಡೆಯಲಾಗಿದೆ ಎಂದು ತಿಳಿಸಿದ್ದು ಸದರಿ ಅನುಸೂಚನೆ ಪ್ರತಿಯನ್ನು ಲಗತ್ತಿಸಿರುವುದಿಲ್ಲ** ಕಾರಣ ರೂ.**2,21,049/–** ನ್ನು ಆಕ್ಷೇಪಣೆಯಲ್ಲಿರಿಸಿದೆ.

</td><td>

16 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ರ ನಿಯಮ 2 e & 28 E ರನುಸಾರ Consultant ಎಂದು ಪರಿಗಣಿಸಿ ಸೇವೆಯನ್ನು ಪಡೆಯಲಾಗಿದೆ

</td></tr>
</table>

17	ಕಂಪ್ಯೂಟರ್‌ಗಳಿಗೆ ಸಂಬಂಧಿಸಿದಂತೆ **Repair work, stationary antivirus** ಇತ್ಯಾದಿಗಳ ಪೊರೈಕೆಗೆ ಒಟ್ಟಾರೆ ಟೆಂಡರ್ ಕರೆದು **Rate contract** ಮಾಡಿಕೊಳ್ಳದೆ ಬಿಲ್ಲುಗಳನ್ನು ವಿಂಗಡಿಸಿ ಖರೀದಿಸಿರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.27) ಲೆಕ್ಕಶೀರ್ಷಿಕೆ 1004/300 ಅಡಿಯಲ್ಲಿ ವೋಚರ್‌ಗಳನ್ನು ಪರಿಶೀಲಿಸಲಾಗಿ ಒಟ್ಟಾರೆ 17 ವೋಚರಗಳಿಂದ ರೂ 1,59,455=00 ಮೊತ್ತದ ಕಂಪ್ಯೂಟರ್ **Toner Cartridge, repair articles** ಇತ್ಯಾದಿಗಳನ್ನು ಖರೀದಿಸಲಾಗಿದೆ. ಇದು ಕೇವಲ ಲೆಕ್ಕ ಶೀರ್ಷಿಕೆ 1004/300 ಅಡಿಯಲ್ಲಿ ಖರೀದಿಸಿದ್ದಾಗಿದ್ದು ಒಟ್ಟಾರೆ ಕೃವಿವಿಯ ಎಲ್ಲ ಕಂಪ್ಯೂಟರ್‌ಗಳಿಗೆ ಸಂಬಂಧಿಸಿದಂತೆ ಇನ್ನು ಹೆಚ್ಚಿನ ಮೊತ್ತ ಖರ್ಚಾಗಿರುತ್ತದೆ. ವಾರ್ಷಿಕ ನಿರ್ವಹಣೆ/ಖರೀದಿ ಎಂದು **KTPP 4(e)** ಪ್ರಕಾರ ಟೆಂಡರ್ ಪ್ರಕ್ರಿಯೆ ಮೂಲಕ ವಿವಿಧ ಸಾಮಗ್ರಿ/ಸೇವೆಗಳಿಗೆ ಕಂಪ್ಯೂಟರ್‌ಗೆ ಸಂಬಂಧಿಸಿದಂತೆ ಟೆಂಡರ್ ಮೂಲಕ ದರ ಆಹ್ವಾನಿಸಿ ತುಲನಾತ್ಮಕ ಪಟ್ಟಿ ತಯಾರಿಸಿ ಕಡಿಮೆ ದರ ನಿಗದಿಪಡಿಸಿದ ಫರ್ಮ್‌ಗಳಿಗೆ ಖರೀದಿ ಆದೇಶ ನೀಡಬಹುದಾಗಿತ್ತು ಈ ರೀತಿ ಮಾಡದೆ ರೂ 5000/– ಒಳಗಿನ ಸಾಮಗ್ರಿಗಳನ್ನು ನೇರವಾಗಿ ಖರೀದಿಸಿದ್ದು ವರ್ಷಪೂರ್ತಿ ಇಂಥ ಪಾವತಿ 1 ಲಕ್ಷ ಮೇಲ್ಪಟ್ಟದ್ದಾಗಿರುವ ಕುರಿತು ಸೂಕ್ತ ಅನುಸರಣೆ ನೀಡಲು ಕೋರಿ. ಲೆಕ್ಕಪರಿಶೋಧನಾ ವಿಚಾರಣಾ ಪತ್ರಸಂಖ್ಯೆ:26 ದಿನಾಂಕ: 14.01.2020 ನ್ನು ನೀಡಿದ್ದು ಈ ನಿಟ್ಟಿನಲ್ಲಿ ದಿನಾಂಕ:14.02.2020 ರಂದು ಸಲ್ಲಿಸಿರುವ ಅನುಸರಣೆಯಲ್ಲಿ ಅವಶ್ಯಕತೆ ಅನುಗುಣವಾಗಿ ರಿಪೇರಿ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದು, ಇನ್ನು ಮುಂದೆ ಟೆಂಡರ್ ಕರೆದು **Rate contract** ಮುಖಾಂತರ ಖರೀದಿ ಪ್ರಕ್ರಿಯೆ ಜರುಗುಸಲು ಸೂಚಿಸಿದೆ.	17	ಕಂಡಿಕೆಯಲ್ಲಿ ಆಕ್ಷೇಪಿಸಿದರನುಸಾರ ಕ್ರಮ ಜರುಗಿಸಲಾಗುವುದು.
38	**ಟೆಂಡರ್ ಆಹ್ವಾನಿಸದೆ ದರಪಟ್ಟಿ ಮೂಲಕವಾಗಿ NOVEL TECH INC Bangalore ಇವರಿಗೆ ವೆಚ್ಚ ಪಾವತಿ ಕುರಿತು. (ಕೃಷಿ ಮಹಾವಿದ್ಯಾಲಯ ವಿಜಯಪುರ ಕಂ.ಸಂ.27)** 2017–18 ನೇ ಸಾಲಿನ ಕೃಷಿ ಮಾಹಾವಿದ್ಯಾಲಯ ವಿಜಯಪುರ ಇಲ್ಲಿನ ಲೆಕ್ಕ ಪರಿಶೋಧನಾ ಅವಧಿಯಲ್ಲಿ ಲೆ.ಶಿ–3814/700 ರಡಿ ಪಿಡಿಸಿ ಬಿಲ್ಲು ಸಂ 194/17–18/05.01.2018 & 196/17–18/05.01.2018 ಬಿಲ್ಲುಗಳನ್ನು ಪರಿಶೀಲಿಸಲಾಗಿ ಕ್ರಮವಾಗಿ ರೂ 86730/– & ರೂ 56050/– ನ್ನು **NOVEL TECH INC Bangalore** ಇವರಿಗೆ ಪಾವತಿಸಲಾಗಿದೆ. ಸದರಿ ಖರೀದಿಯು ಪ್ರಾಣಿ ವಿಜ್ಞಾನ (**Animal science)** ವಿಭಾಗಕ್ಕೆ ಮಾಡಿದ್ದು ನ್ಯೂನ್ಯತೆಗಳು ಈ ಕೆಳಗಿನಂತಿವೆ 1) **trinocular microscope-01** ಹಾಗೂ 2)**magnus magcam scientific camera 5 MP**[01] ಗಳನ್ನು ದರಪಟ್ಟಿ ಮೂಲಕ ಕರೆಯಲಾಗಿದೆ ಹಾಗೂ ಈ ಉಪಕರಣಗಳನ್ನು ಒಂದೇ ದಿನದ ವ್ಯತ್ಯಾಸದಲ್ಲಿ ಸರಬರಾಜು ಆದೇಶವನ್ನು ಏಜನ್ಸಿಗಳಿಗೆ ದರಪಟ್ಟಿ ಮೂಲಕ ಆದೇಶಿಸಲಾಗಿದೆ/ಕರೆಯಲಾಗಿದೆ. ರೂ 1 ಲಕ್ಷಕ್ಕೂ ಹೆಚ್ಚಿನ ಮೊತ್ತದ ಖರೀದಿ ಸಂದರ್ಭದಲ್ಲಿ ಟೆಂಡರ್ ಮೂಲಕ ಖರೀದಿ ಮಾಡಿ ಪಾರದರ್ಶಕತೆಯನ್ನು ತರಬಹುದಾಗಿತ್ತು ಹಾಗೂ ಸ್ಪರ್ಧಾತ್ಮಕ ಬಿಡ್ಡಿಂಗ್ ಮೂಲಕ ಆರ್ಥಿಕ ಮಿತವ್ಯಯವನ್ನು ಸಾಧಿಸಬಹುದಾಗಿತ್ತು ಆದರೆ **NOVEL TECH INC Dry** ಇವರಿಗೆ ರೂ.56,050 & ರೂ.86,730 ಹೀಗೆ ಒಟ್ಟು ರೂ 1,42,780/– ಗಳನ್ನು ಪಾವತಿಸಿರುವುದು ಕೆಟಿಪಿಪಿ ಕಾಯ್ದೆ 1999 ನಿಯಮಗಳು 2000ದ ಕಂಡಿಕೆ 4(ಇ) (ii)ಉಲ್ಲಂಘನೆಯಾಗಿದ್ದು ಬಿಲ್ಲುಗಳನ್ನು ವಿಭಜಿಸಿ ದರಪಟ್ಟಿ ಮೂಲಕ ವೆಚ್ಚ ಪಾವತಿಸಿರುವುದು ಕರ್ತವ್ಯಲೋಪ ಆಗಿರುತ್ತದೆ. ಕಾರಣ ಈ ಕುರಿತು ಸೂಕ್ತ ಸ್ಪಷ್ಟೀಕರಣವನ್ನು ನೀಡುವಂತೆ ಕೋರಿ ಲೆಕ್ಕ ವಿಚಾರಣಾ ಪತ್ರ ಸಂ 10 ದಿನಾಂಕ 03.10.2019 ನೀಡಿದ ಅನುಸರಣೆಯಲ್ಲಿ ಮುಂದೆ ಈ ರೀತಿಯ ಲೋಪವಾಗದಂತೆ ಕ್ರಮ ಕೈಗೊಳ್ಳುತ್ತೇವೆ ಎಂದು ತಿಳಿಸಿದ್ದು ಸೂಕ್ತ ಕ್ರಮ ವಹಿಸಲು ಸೂಚಿಸಿದೆ.	38 ಆಕ್ಷೇಪಣೆಯಂತೆ 2017–18ನೇ ಸಾಲಿನಲ್ಲಿ ಈ ಎರಡು ಉಪಕರಣಗಳಾದ ಓಲಂಪಸ್ ಟ್ರ್ಯಾನಾಕ್ಯುಲರ್ ಮೈಕ್ರೋ ಸ್ಕೋಪ್ ಹಾಗೂ ಮಗ್ಗಕ್ಯಾಮ್ ಸೈಂಟಿಫಿಕ್ ಕ್ಯಾಮರಾ ಬೇರೆ ಬೇರೆ ಉಪಕರಣಗಳಾಗಿದ್ದು, ಒಂದನೇ ಉಪಕರಣ ಖರೀದಿಸಿದ ನಂತರ ಹಣಕಾಸಿನ ಸೌಲಭ್ಯವನ್ನು ನೋಡಿಕೊಂಡು ಅವಶ್ಯಕತೆಗೆ ಅನುಗುಣವಾಗಿ ಎರಡನೇ ಉಪಕರಣವನ್ನು ಖರೀದಿಸಲು ಬೇರೆ ದಿನಾಂಕದಂದು ಸರಬರಾಜಿನ ಆದೇಶವನ್ನು ನೀಡಲಾಗಿದೆ. ಹಣಕಾಸಿನ ಸೌಲಭ್ಯಗಳಿಗೆ ಅನುಗುಣವಾಗಿ ಈ ಎರಡು ಪ್ರತ್ತೇಕ ಉಪಕರಣಗಳಿಗೆ ಹಣಕಾಸಿನ ಮಂಜೂರಾತಿಯನ್ನು ವಿವಿಧ ದಿನಾಂಕಗಳಂದು ಪಡೆದ ನಂತರ ಸರಬರಾಜಿನ ಆದೇಶವೂ ಸಹ ಬೇರೆ ದಿನಾಂಕ ಇರುತ್ತವೆ. ಆದ್ದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

39 **Tender ಕರೆಯದೇQuoatation ಆಧಾರದ ಮೇಲೆ Labour Service ಪಡೆದಿರುವ ಕುರಿತು. (ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ ವಿಜಯಪುರ ಕಂ.ಸಂ.19)**

ಫೆಬ್ರುವರಿ 2018 ಮತ್ತು ಮಾರ್ಚ 2018 ರ ಮಾಹೆಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಕೆಲಸಗಾರರ ಸೇವೆಯನ್ನು ಪಡೆಯಲಾಗಿದ್ದು ಒಟ್ಟು ಮೊತ್ತ 4,18,962ಗಳಷ್ಟು ಪಾವತಿಯಾಗಿರುತ್ತದೆ. 1 ಲಕ್ಷ ಮೇಲ್ಪಟ್ಟು ಸರಕು ಸೇವೆಯನ್ನು KTPP Act ಪ್ರಕಾರ ಟೆಂಡರ್ ಕರೆಯುವುದು ಕಡ್ಡಾಯವಾಗಿದ್ದು ಇಲ್ಲಿ ನಿಯಮದ ಉಲ್ಲಂಘನೆಯಾಗಿದೆ .ವಿವರಗಳು ಈ ಕೆಳಗಿನಂತಿವೆ.

SL NO	PDC BILL	LABOUR WORK	Ab A/C NO	DAC NO	AMOUNT	
1	359/17-18, 31.03.2018	01.02.2018 to 31.03.2018	3421	604	32118	Sr. Fs
2	360/17-18, 31.03.2018	01.02.2018 to 31.03.2018	3421	300	44202	
3	361/17-18, 31.03.2018	01.02.2018 to 31.03.2018	7173	300	14951	Dr.Venkatesh
4	367/17-18, 31.03.2018	01.03.2018 to 31.03.2018	7172	300	47850	Dr.M.S.Shirahatti
5	368/17-18, 31.03.2018	01.02.2018 to 28.02.2018	7172	300	45075	
6	369/17-18, 31.03.2018	01.02.2018 to 31.03.2018	7174	300	15900	
7	370/17-18, 31.03.2018	01.02.2018 to 31.03.2018	3819	300	24168	Dr.Sadhana Babari
8	372/17-18, 31.03.2018	01.02.2018 to 28.02.2018	7081	300	36570	Dr.Sajjanar
9	373/17-18, 31.03.2018	01.02.2018 to 28.02.2018	8159	300	7314	Dr.Karabhantamal
10	374/17-18, 31.03.2018	01.02.2018 to 28.02.2018	3801	300	7314	Dr.Sajjanar
11	375/17-18, 31.03.2018	01.03.2018 to 31.03.2018	7081	300	47700	
12	379/17-18, 31.03.2018	01.03.2018 to 31.03.2018	5557	300	46800	Dr.VIjayakumar A.G.
13	380/17-18, 31.03.2018	01.02.2018 to 28.02.2018	5557	300	46800	
					4,18,962	

ಈ ಕುರಿತು ಸೂಕ್ತ ವಿವರಣೆ ನೀಡಲು ಕೋರಿ ವಿಚಾರಣಾ ಪತ್ರ ಸಂಖ್ಯೆ 04 ದಿನಾಂಕ: 05.10.2019 ರಂದು ನೀಡಲಾಗಿ ನೀಡಿದ ಅನುಸರಣೆಯಲ್ಲಿ ಕೃಷಿ ಕಾರ್ಮಿಕರನ್ನು ಪೊರೈಸಲು ಕರೆದ ಟೆಂಡರ್ ಅವಧಿ ಮುಕ್ತಾಯವಾದ ಕಾರಣ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಬೆಳೆ ಒಕ್ಕಣೆ ಹಾಗೂ ಇತರೆ ಕೃಷಿ ಕಾರ್ಯಗಳು ಸುರಳಿತವಾಗಿ ನಡೆಯಲು ಕೊಟೇಶನ್ ಆಧಾರದ ಮೇಲೆ ಪಡೆಯಲಾಯಿತು ಎಂದು ತಿಳಿಸಿದ್ದು ಇನ್ನು ಮುಂದೆ ನಿಯಮಾನುಸಾರ ಕ್ರಮ ಜರುಗಿಸಲು ಸೂಚಿಸಿದೆ.

39 ಕೃಷಿ ಸಂಶೋಧನಾ ಕೇಂದ್ರಗಳಿಗೆ ಕೃಷಿ ಕಾರ್ಮಿಕರನ್ನು ಪೂರೈಸಲು ವಿಶ್ವವಿದ್ಯಾಲಯ ಮೆ॥ ಮೇಘಾ ಸರ್ವಿಸಸ್, ಧಾರವಾಡ ಇವರಿಗೆ ಏಪ್ರೀಲ್ 2017 ರಿಂದ ಜನೇವರಿ 2018 ರವರೆಗೆ ವಹಿಸಿತ್ತು. ಟೆಂಡರ್ ಅವಧಿ ಮುಗಿದ ಕಾರಣ, ಫೆಬ್ರವರಿ ಮತ್ತು ಮಾರ್ಚನಲ್ಲಿ ಒಕ್ಕಣೆ, ಬೆಳೆ ಕಟಾವು / ಇತರ ಕೃಷಿ ಕಾರ್ಯಗಳು ಸುರಳೀತವಾಗಿ ನಡೆಯಲು ಸಂಶೋಧನಾ ನಿರ್ದೇಶಕರ ಕಚೇರಿ ಆದೇಶ ಸಂಖ್ಯೆ. ಸಂ.ನಿ./ 352/2017–18, ದಿ: 28.03.2018 ಪ್ರಕಾರ ಕೋಟೇಶನ್ ಆಧಾರದ ಮೇಲೆ ಲೇಬರ್ ಸರ್ವಿಸ್‌ನ್ನು ಪಡೆಯಲು ತಿಳಿಸಿದರು.

ಆದ್ದರಿಂದ ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.

40 ಟೆಂಡರ್ ಕರೆಯದೆ ಕೊಟೇಶನ್ ಆಧಾರದ ಮೇಲೆ ಸಮೀಕ್ಷೆ ಕಾರ್ಯದ ಸೇವೆ ಪಡೆದಿರುವ ಕುರಿತು.(ಅರಣ್ಯ ಪದವಿ ಮಹಾವಿದ್ಯಾಲಯ ಶಿರಸಿ ಕಂ.ಸಂ.20)

ಕೃಷಿ ವಿಶ್ವ ವಿದ್ಯಾಲಯ ಅಧೀನ ಅರಣ್ಯ ಮಹಾವಿದ್ಯಾಲಯದ 2017–18 ನೆ ಸಾಲಿನ ಲೆಕ್ಕ ಪರಿಶೋಧನೆ ವೇಳೆ ಪರಿಶೀಲಿಸಲಾಗಿ **Aerial Survey with drone for takings high resolution pictures and videos** ಯೋಜನೆಗೆ ರೂ 194999.00 ರಷ್ಟು ಮೊತ್ತದ ಸಮಿಕ್ಷೆ ಕಾರ್ಯಕ್ಕೆ ವಿಭಜಿಸಿ **(Split)** ಕೋಟೆಶನ್ ಆಧಾರದ ಮೇಲೆ **Aerial Survey with drone for taking high resolution Pictures & videos** ಯೋಜನೆಗೆ **TREC Spook electricals** ವತಿಯಿಂದಸೇವೆಯನ್ನು ಪಡೆಯಲಾಗಿದೆ. ವಿವರ ಈ ಕೆಳಗಿನಂತಿದೆ.

Sl.No.	Particulars	Date	Amount
01	TREC	19/17-18 23.03.18	97499.00
02	Spark Electricals	Spark/17-18 GST517 19.03.18	97500.00
		Total	194999.00

ಆದರೆ ಕೆಟಿಪಿಪಿ ಕಾಯ್ದೆ 1999 ನಿಯಮ 2000 ರ 4 (ಇ) ಪ್ರಕಾರ ರೂ 100000/– ಮೀರಿದ ಸೇವೆಗೆ ಟೆಂಡರ್ ಕರೆಯುವುದು ಕಡ್ಡಾಯವಾಗಿದ್ದು ಈ ಕುರಿತು ಸೂಕ್ತ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ ಸಂ–10 ದಿನಾಂಕ 11.12.2019 ರಂದು ನೀಡಲಾಗಿ ಸಲ್ಲಿಸಿದ ಅನುಸರಣೆಂತೆ ಎರಡೂ ಕಾರ್ಯಗಳು ಬೇರೆ ಬೇರೆ ತರಹದಾಗಿದ್ದು ಎರಡೂ ಕೆಲಸಗಳನ್ನು ಬೇರೆ ಬೇರೆ ಉದ್ದೇಶಗಳಿಗೆ ದರಪಟ್ಟಿ ಆಧಾರದ ಮೇಲೆ ಪಡೆಯಲಾಗಿದೆ ಎಂದು ತಿಳಿಸಿದ್ದು ಇನ್ನು ಮುಂದೆ ನಿಯಮಾನುಸಾರ ಕ್ರಮ ಕೈಗೊಳ್ಳಲು ಸೂಚಿಸಿದೆ.

40 ಈ ಮೇಲೆ ತಿಳಿಸಿದ ಸಂರಕ್ಷಣಾ ಮೀಸಲು ಯೋಜನೆ ಅಡಿಯಲ್ಲಿ ಕೈಗೊಂಡ ಎರಡು ಕೆಲಸಗಳು ಬೇರೆ ಬೇರೆ ಉದ್ದೇಶಗಳ ಅಡಿಯಲ್ಲಿ ಕೈಗೊಳ್ಳಲಾಗಿದೆ.

ಮೊದಲನೇಯದು ವೈಮಾನಿಕ (ಏರಿಯಲ್) ಸರ್ವೆ ಆಗಿದ್ದು ಅತ್ಯುತ್ತಮ ಚಿತ್ರಗಳನ್ನು ಡ್ರೋನ್ ಕ್ಯಾಮೆರಾ ಮೂಲಕ ತೆಗೆಯಬೇಕಾಗುತ್ತದೆ. ಈ ಕೆಲಸವನ್ನು ಮಾಡಿಕೊಟ್ಟವರು ಆಧುನಿಕ ಸೌಲಭ್ಯ ಉಳ್ಳ ಡ್ರೋನ್ ಕ್ಯಾಮೆರಾ ಹೊಂದಿರುತ್ತಾರೆ.ಅಲ್ಲದೆ ನಮಗೆ ಬೇಕಾದ ಚಿತ್ರಗಳನ್ನು ಕಠಿಣ ಅರಣ್ಯಪ್ರದೇಶದಲ್ಲಿ, ಕೆಲಸ ಮಾಡುವ ವಿಶೇಷತೆ ಹೊಂದಿರುತ್ತಾರೆ.ಆದರೆ ನಿಖರವಾದ ನಕ್ಷೆ ಸಿದ್ಧತೆ ಮಾಡಿಕೊಡುವ ಸಾಮರ್ಥ್ಯಹೊಂದಿರುವುದಿಲ್ಲ.

ಎರಡನೇಯ ಕೆಲಸವು ವಿಶೇಷವಾಗಿ ನಿಖರವಾದ ನಕ್ಷೆ ಸಿದ್ಧತೆಗೆ ಡ್ರೋನ್ ಕ್ಯಾಮೆರಾ ಮೂಲಕ ದತ್ತಾಂಶ ಬೇಕಾಗುತ್ತದೆ. ಇದುಕಂಪ್ಯೂಟರ್ ಪರಿಣಿತರ ಕೆಲಸವಾಗಿದ್ದು ಇದಕ್ಕಾಗಿ ಸಸ್ಯಗಳವರ್ಗಿಕರಣ, ಗಡಿ ಗುರುತಿಸುವುದು, ವಿವಿಧ ನಕ್ಷೆಯ ತಯಾರಿ ಮಾಡಲು ವಿಶೇಷ ಸೋಫ್ಟವೇರ್‌ನ ಅವಶ್ಯಕವಿರುತ್ತದೆ. ಇದುಸಂರಕ್ಷಣಾ ಮೀಸಲು ಯೋಜನೆಯ ಉದ್ದೇಶಗಳಲ್ಲಿ ಒಂದಾಗಿದೆ.ಡ್ರೋನ್ ಕ್ಯಾಮೆರಾ ಮೂಲಕ ಚಿತ್ರ ತೆಗೆಯುವವರಿಗೆ ಈ ವಿಶೇಷಕಸಬುಗಾರಿಕೆ ಇರುವುದಿಲ್ಲ.

ಈ ಮೇಲೆ ತಿಳಿಸಿದ ಎರಡು ಕೆಲಸಗಳು ಒಟ್ಟಿಗೆ ಮಾಡಲುಆಗುವುದಿಲ್ಲ. ಮೊದಲು ಆಧುನಿಕ ಡ್ರೋನ್ ಕ್ಯಾಮೆರಾ ಮೂಲಕಚಿತ್ರಗಳನ್ನು ಪಡೆದು ನಂತರ, ಪ್ರಾಯೋಜನೆಗೆಬೇಕಾಗುವ ಕಾಡಿನ ಬೇರೆ ಬೇರೆ ಅಂಶಗಳನ್ನು, ಗಡಿಗಳನ್ನುಗುರುತಿಸಿ ನಂತರ ನಿಖರ ನಕಾಶೆ ತಯಾರಿಸಬೇಕಾಗುತ್ತದೆ.ಆದುದರಿಂದ ಈ ಮೇಲಿನ ಕೆಲಸದಲ್ಲಿ ಕೆಲಸಗಳನ್ನುಪ್ರತ್ಯೇಕಿಸುವ ಪ್ರಶ್ನೆ ಬರುವುದಿಲ್ಲ.

ಎರಡು ಕೆಲಸಗಳನ್ನುಒಂದಾದ ನಂತರ ಇನ್ನೊಂದು ಕೈಗೊಳ್ಳಬೇಕಾಗುತ್ತದೆ. ಈಎರಡು ಕೆಲಸಗಳಿಗೆ ಬೇರೆ ಬೇರೆ ನೈಪುಣ್ಯತೆ ಹೊಂದಿರಬೇಕಾಗುತ್ತದೆ.ಸಂರಕ್ಷಣಾ ಮೀಸಲು ಯೋಜನೆಯಡಿಯಲ್ಲಿ ಈ ಮೇಲಿನ ಎರಡುಕೆಲಸಗಳನ್ನು ವಿಶ್ವವಿದ್ಯಾಲಯದ ನಿಯಮಗಳ ಅನುಸಾರಬೇರೆ ಬೇರೆಯವರಿಗೆ ವಹಿಸಿರುತ್ತೇವೆ.

ಈ ಮೂಲಕ ಈ ಎರಡುಕೆಲಸವನ್ನು ಪ್ರತ್ಯೇಕವಾಗಿ ನಿರ್ವಹಿಸಿರುವ ಹಿಂದಿನ ವೈಜ್ಞಾನಿಕ ಉದ್ದೇಶವನ್ನು ತಾವು ಪರಿಗಣಿಸಬೇಕು ಮತ್ತು ಎರಡುಕಾರ್ಯಗಳನ್ನು ಒಂದೇ ಎಂದು ಪರಿಗಣಿಸಬಾರದು.

ಆದುದರಿಂದ ಈ ಮೇಲಿನ ಆಕ್ಷೇಣೆಯನ್ನು ಕೈಬಿಡಲು ಕೋರಲಾಗಿದೆ

41 **ಟೆಂಡರ್ ಕರೆಯದೇ ದರಪಟ್ಟಿ ಆಧಾರದ ಮೇಲೆ ಗುತ್ತಿಗೆ ಕೆಲಸಗಾರರ ಸೇವೆಯನ್ನು ಪಡೆದಿರುವ ಕುರಿತು.(ಕೃಷಿ ಸಂಶೋಧನಾ ಕೇಂದ್ರ ಕೊಣ್ಣೂರು ಕಂ.ಸಂ.16)**

ಕೃಷಿ ಸಂಶೋಧನಾ ಕೇಂದ್ರ ಕೊಣ್ಣೂರು ಘಟಕದ 2017–18 ನೆ ಸಾಲಿನ ಲೆಕ್ಕಪರಿಶೋಧನೆ ವೇಳೆ ಪರಿಶೀಲಿಸಲಾಗಿ ಕೆ.ಟಿ.ಪಿ.ಪಿ ಕಾಯ್ದೆ 1999 ಮತ್ತು ನಿಯಮ 2000 ರ 4(e) ಪ್ರಕಾರ ರೂ 1,00,000 ಮೀರಿದ ಸರಕು/ಸೇವೆಗಳನ್ನು ಪಡೆಯಬೇಕಾದಲ್ಲಿ ಟೆಂಡರ್ ಕರೆಯಬೇಕೆಂಬ ನಿಯಮವಿದ್ದು ಆದರೆ ಘಟಕದವರು ರೂ 240150 ರೂ ಗಳ ಗುತ್ತಿಗೆ ಕಾರ್ಮಿಕರ ಸೇವೆಯನ್ನು ಪಡೆದಿದ್ದು ವಿವರ ಈ ಕೆಳಗಿನಂತಿದೆ.

Sl no.	PDC bill No.	ಲೆಕ್ಕ ಶಿರ್ಷಿಕೆ	Amount
1	24	3812/541-31.03.18	7700
2	25	3812/541-31.03.18	7700
3	27	3812/541-31.03.18	29900
4	26	3812/541-31.03.18	7700
5	28	3812/541-31.03.18	27600
6	39	3812/541-31.03.18	12500
7	38	3812/541-31.03.18	11700
8	29	3812/541-31.03.18	23000
9	32	3812/541-31.03.18	11500
10	30	3812/541-31.03.18	27300
11	31	3812/541-31.03.18	17500
12	33	3812/541-31.03.18	15000
13	34	3812/541-31.03.18	16150
14	35	3812/541-31.03.18	8300
15	37	3812/541-31.03.18	8300
16	36	3812/541-31.03.18	8300
			240150

ಈ ಕುರಿತು ಸೂಕ್ತ ದಾಖಲೆಗಳನ್ನು ಹಾಜರುಪಡಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ 4 ದಿನಾಂಕ 26.10.2019 ನೀಡಲಾಗಿ ಸಲ್ಲಿಸಿದ ಅನುಸರಣೆಯಲ್ಲಿ ಕೆಲಸಕ್ಕನುಗುಣವಾಗಿ ದರಪಟ್ಟಿ ಆಧಾರದ ಮೇಲೆ ಗುತ್ತಿಗೆ ಕಾರ್ಮಿಕರ ಸೇವೆಯನ್ನು ಪಡೆಯಲಾಗಿದೆ ಎಂದು ತಿಳಿಸಿದ್ದು. ದಿನಾಂಕ 27.08.2020 ರ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಪುನರ್ ಪರಿಶೀಲನೆಯಲ್ಲಿ ಸೂಕ್ತ ವಿವರಣೆ ನೀಡಿದ್ದು ಇನ್ನು ಮುಂದೆ

41 2017–18ರಲ್ಲಿ ಕೃವಿವಿ, ಧಾರವಾಡ ಗುತ್ತಿಗೆ ಕೆಲಸಕ್ಕೆ ಹೊರ ಗುತ್ತಿಗೆ ಟೆಂಡರ್ ಕರೆದು ಅದರಲ್ಲಿ ಮೆಗಾಸರ್ವಿಸ್ ಹೊರ ಗುತ್ತಿಗೆಯಿಂದ ಮಾರ್ಚ–2017 ನಿಂದ ಜನೆವರಿ–2018ವರಗೂ ಗುತ್ತಿಗೆ ಕೆಲಸಗಾರರ ಸೇವೆಯನ್ನು ಪಡೆದಿರುತ್ತದೆ. ನಂತರ ಫೆಬ್ರುವರಿ–2018 ಮತ್ತು ಮಾರ್ಚ–2018ರಲ್ಲಿ ಮೆಗಾಸರ್ವಿಸ್ ಹೊರ ಗುತ್ತಿಗೆ ಮುಕ್ತಾಯಗೋಂಡ ನಂತರ ಕೃವಿವಿ, ಧಾರವಾಡ ಗುತ್ತಿಗೆ ಕೆಲಸಕ್ಕೆ ಹೊರ ಗುತ್ತಿಗೆ ಟೆಂಡರ್ ಕರೆಯದೇ ದರಪಟ್ಟಿ ಆಧಾರದ ಮೇಲೆ ಗುತ್ತಿಗೆ ಕೆಲಸಗಾರರ ಸೇವೆಯನ್ನು ಪಡೆಯುವ ನಿರ್ಧೇಶನ ನೀಡಿತ್ತು ಅದರಪ್ರಕಾರ ಗುತ್ತಿಗೆ ಕೆಲಸಗಾರರ ಸೇವೆಯನ್ನು ಪಡೆದಿರುತ್ತದೆ.

ಕೃಷಿ ಸಂಶೋಧನಾ ಕೇಂದ್ರ, ಕೊಣ್ಣೂರ ಒಟ್ಟು 96 ಎಕರೆ ಪ್ರದೇಶ ಇದ್ದು ಅದರಲ್ಲಿ ಸದ್ಯ 75 ಎಕರೆ ಪ್ರದೇಶದಲ್ಲಿ ವಿವಿಧ ಬೆಳೆಗಳ ವಿವಿಧ ಪ್ರಕಾರದ ಬೀಜೋತ್ಪಾದನಾ ಸಂಬಂಧಿತ ವಿವಿಧ ಕಾರ್ಯಗಳನ್ನು ಕೈಗೊಂಡಿದ್ದು ಆಯಾ ಕಾರ್ಯಗಳಿಗೆ ತಕ್ಕಂತೆ ಗುತ್ತಿಗೆ ಕೆಲಸಗಾರರನ್ನು ವಿವಿಧ ಸಮಯದಲ್ಲಿ ವಿವಿಧ ಕೆಲಸಗಳಿಗೆ ತೆಗೆದುಕೊಂಡಿರುತ್ತದೆ ಕೆಲಸದ ವಿವರ ಹಾಗೂ ಸಮಯ ಬೇರೆ ಬೇರೆಯಾಗಿರುವುದರಿಂದ ಅದರ ಮೊತ್ತವು ಬೇರೆ ಬೇರೆಯಾಗಿರುತ್ತದೆ.

ಕೇಂದ್ರದಲ್ಲಿ ಖಾಯಂ ಕಾರ್ಮಿಕರ ಸಂಖ್ಯೆ ಕಡಿಮೆ ಇರುವುದರಿಂದ ಬುಲಕ್‌ಮಾನ್, ಡೇರಿ ಘಡಕದ ಕೆಲಸ ಮತ್ತು ರಾತ್ರಿ ಕಾವುಲಗಾರನ್ನು ಗುತ್ತಿಗೆ ಆದಾರದ ಮೇಲೆ ನಿರ್ವಹಿಸಲಾಗುತ್ತಿದೆ. (ಕೆಲಸದ ವಿವರ ಹಾಗು ಗುತ್ತಿಗೆದಾರರ ಹೆಸರುಗಳ ವಿವರವನ್ನು ಲಗತ್ತಿಸಿದೆ) ಆದಕಾರಣ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.

	ನಿಯಮಾನುಸಾರ ಖರೀದಿ ಪ್ರಕ್ರಿಯೆ ಕೈಗೊಳ್ಳಲು ಸೂಚಿಸಿದೆ.	

42 **ಟೆಂಡರ್ ಕರೆಯದೇ ದರಪಟ್ಟಿ ಆಧಾರದ ಮೇಲೆ ಕಾರ್ಮಿಕ ಸೇವೆಯನ್ನು ಪಡೆದ ಕುರಿತು.**

(ಕೃಷಿ ಸಂಶೋಧನಾ ಕೇಂದ್ರ ಸೌಂದಲಗಾ ಕಂ.ಸಂ.11)

ಕೃಷಿ ವಿಶ್ವವಿದ್ಯಾಲಯ ಧಾರವಾಡ , ARS ಸೌಂದಲಗಾ 2017–18 ನೇ ಸಾಲಿನ ಲೆಕ್ಕಪರಿಶೋಧನೆ ವೇಳೆ ಪರಿಶೀಲಿಸಲಾಗಿ ,KTPP –ಕಾಯ್ದೆ –1999 ನಿಯಮ 2000ರ 4 (e) ಯ ಪ್ರಕಾರ 1,00,000/– ಮೀರಿದ ಸೇವೆಯನ್ನು ಪಡೆಯಬೇಕಾದಲ್ಲಿ ಟೆಂಡರ್ ಮಾಡಬೇಕೆಂಬ ನಿಯಮವಿದ್ದು ಆದರೆ ರೂ. 124194/– ಗಳ ಗುತ್ತಿಗೆ ಕಾರ್ಮಿಕರ ಸೇವೆಯನ್ನು ದರಪಟ್ಟಿ ಆಧಾರದ ಮೇಲೆ ಪಡೆದಿರುತ್ತಾರೆ. ವಿವರ ಈ ಕೆಳಗಿನಂತಿದೆ.

Bill .no	Date	Particulars	Budget head	Amount of the bill	Passed amount
22	31.03.2018	Balasaheb Patil	3837	8268	8268
23	31.03.2018	Bhuvaneshwari S sutar	3837	34400	34400
24	31.03.2018	Jotiba P Patil	3837	12320	12320
25	31.03.2018	Pramod B Hatkar	3837	15400	15400
26	31.03.2018	Balasaheb Patil	3837	8268	8268
27	31.03.2018	Manish V Kumbar	3837	12320	12320
28	31.03.2018	Suman A sutar	3837	8268	8268
29	31.03.2018	Jotiba P Patil	3837	19000	19000
30	31.03.2018	Mr Maruti M Kumbar	3837	5950	5950
				ಒಟ್ಟು	124194

ಈ ಕುರಿತು ಸೂಕ್ತ ದಾಖಲೆಗಳನ್ನು ಹಾಜರು ಪಡೆಸಲು ಕೋರಿ ಲೆಕ್ಕ ವಿಚಾರಣಾ ಪತ್ರ 2 ವಿಚಾರಿಸಲಾಗಿ ಅನುಸರಣೆಯಲ್ಲಿ ಅವಶ್ಯಕತೆಗೆ ಅನುಗುಣವಾಗಿ ಗುತ್ತಿಗೆ ಆಧಾರದ ಮೇಲೆ ದರಪಟ್ಟಿ ಕರೆದು ಕಾರ್ಮಿಕರಿಂದ ಕೆಲಸ ಪೊರೈಸಲಾಗಿದೆ ಎಂದು ತಿಳಿಸಿದ್ದು ಇನ್ನು ಮುಂದೆ ನಿಯಮಾನುಸಾರ ಕ್ರಮ ಕೈಗೊಳ್ಳಲು ಸೂಚಿಸಿದೆ.

42 **ಕೃಷಿ ವಿಶ್ವವಿದ್ಯಾಲಯದಲ್ಲಿ ಕೃಷಿ ಕಾರ್ಯಗಳನ್ನು ಹೊಗುತ್ತಿಗೆ ಆದಾರದ ಮೇಲೆ ಕೈಗೊಳ್ಳಲು ಗುತ್ತಿಗೆದಾರರಾದ ಮೇಘಾ ಸರ್ವಿಸಸ್. ವಿಜಯಪುರ ಇವರ ಗುತ್ತಿಗೆಯ ಅವಧಿಯು ಜನೇವರಿ 2018 ರಲ್ಲಿ ಕೊನೆಗೊಂಡಿರುತ್ತದೆ. ಆದ ಕಾರಣ ದೈನಂದಿನ ಮತ್ತು ಹಂಗಾಮಿನಲ್ಲಿ ಕೈಗೊಳ್ಳಬೇಕಾದ ವಿವಿಧ ಕೃಷಿ ಕಾರ್ಯಗಳನ್ನು ನಿರ್ಧಿಷ್ಟ ಅವಧಿಯಲ್ಲಿ ಕೈಗೊಳ್ಳ ಬೇಕಾದ ಕಾರಣ ಮಾನ್ಯ ಸಂಶೋಧನಾ ನಿರ್ದೇಶಕರು, ಕೃ.ವಿ.ವಿ, ಧಾರವಾಡ ಇವರ ಆದೇಶ ಸಂಖ್ಯೆ. ಸಂ.ನಿ/ 352/2017–18 ದಿನಾಂಕ 28–03–2018 (ಪ್ರತಿ ಲಗತ್ತಿಸಿದೆ) ಪ್ರಕಾರ ಕೃಷಿ ಕಾರ್ಮಿಕರ ವೇತನವನ್ನು ಪಾವತಿಸಲು ದರಪಟ್ಟಿ ಆಧಾರದ ಮೇಲೆ ಗುತ್ತಿಗೆ ಕೆಲಸ ನಿರ್ವಹಿಸಿದ್ದು ಇರುತ್ತದೆ ಮತ್ತು ವೇತನವನ್ನು ಪಾವತಿಸಲಾಗಿದೆ. ಕಾರಣ ಸದರಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.**

43	**2015–16ನೇ ಸಾಲಿನ ಮುದ್ರಣ ಕಾರ್ಯಕ್ಕಾಗಿ ಕರೆದ ಟೆಂಡರ್ ಪ್ರಕ್ರಿಯೆಯಲ್ಲಿ ಕಂಡುಬಂದ ನ್ಯೂನ್ಯತೆಗಳು. (ಪ್ರಕಟಣಾ ವಿಭಾಗ ಕಂ.ಸಂ.4)** ಕೃಷಿ ವಿಶ್ವವಿದ್ಯಾಲಯ ಪ್ರಕಟಣಾ ಕೇಂದ್ರದಲ್ಲಿ 2015–16ನೇ ಸಾಲಿನ ಮುದ್ರಣ ಕಾರ್ಯಕ್ಕಾಗಿ ಟೆಂಡರ್ ಕರೆಯಲಾಗಿದ್ದು, ಕಡತ ಪರಿಶೀಲನೆಯಲ್ಲಿ ಈ ಕೆಳಕಂಡ ನ್ಯೂನ್ಯತೆಗಳು ಕಂಡುಬಂದಿವೆ. 1) ದಿನಾಂಕ:31.03.2015ರ ದಿನ ಪತ್ರಿಕೆಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದು, ಟೆಂಡರ್ ಕೊನೆಯ ದಿನಾಂಕ:7.04.2015 ಇರುತ್ತದೆ. ದಿನಾಂಕ:30.03.2015 ರಂದು ಕುಲಪತಿಗಳು ಅಲ್ಪಾವಧಿ ಟೆಂಡರ್ ಕರೆಯಲು ಒಪ್ಪಿಗೆ ಸೂಚಿಸಿದ್ದು, ಯಾವುದೇ ಲಿಖಿತ ಕಾರಣಗಳನ್ನು ದಾಖಲು ಮಾಡಿರುವುದಿಲ್ಲ. ಕೆ.ಟಿ.ಪಿ.ಪಿ ಆಕ್ಟ್ 2000ರ ನಿಯಮ 17(2)(1)ರಲ್ಲಿ ಟೆಂಡರ್ ಕರೆಯುವ ಅಧಿಕಾರಿಯ ಮೇಲಾಧಿಕಾರಿಗಳು ಲಿಖಿತ ರೂಪದಲ್ಲಿ ಕಾರಣಗಳನ್ನು ದಾಖಲಿಸುವುದು ಕಡ್ಡಾಯವಾಗಿದೆ. 2) ಕೆ.ಟಿ.ಪಿ.ಪಿ ಆಕ್ಟ್ 2000 ಜಾರಿಗೆಯಾದ ನಂತರ ಇ–ಪ್ರೊಕ್ಯುರ್‌ಮೆಂಟ್‌ಪ್ರಕ್ರಿಯೆ ಕೈಗೊಳ್ಳುವುದು ಅವಶ್ಯವಿದ್ದು, ಸದರ ವಿಭಾಗದಲ್ಲಿ Manual ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿದೆ. 3) ಟೆಂಡರ್ ಪ್ರಕ್ರಿಯೆ ನಂತರ ಯಶಸ್ವಿ ಬಿಡ್‌ದಾರರ ಜೊತೆ ಒಪ್ಪಂದ ಪತ್ರ ಮಾಡಿಕೊಂಡಿದ್ದಲ್ಲಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿದೆ. 4) ಬಿಡ್‌ದಾರರ ಕೊಟೆಶನ್‌ಗಳನ್ನು ಪರಿಶೀಲಿಸಲಾಗಿ ಅನೇಕ ವಿಧದ ಮುದ್ರಣಗಳಿಗೆ ಕೇವಲ ಒಬ್ಬರು ಅಥವಾ ಇಬ್ಬರು ಬಿಡ್‌ದಾರರು ದರಗಳನ್ನು ಕೋಟ್ ಮಾಡಿದ್ದಾರೆ. ಆದರೆ ಕನಿಷ್ಟ ಮೂವರು ಬಿಡ್‌ದಾರರ ದರಪಟ್ಟಿ ತುಲನಾತ್ಮಕವಾಗಿ ಪರಿಶೀಲಿಸುವುದು ಅವಶ್ಯವಾಗಿರುತ್ತದೆ. 5) ವಿಶ್ವ ವಿದ್ಯಾಲಯದ ಪರವಾಗಿ ಆಸ್ತಿ ಅಧಿಕಾರಿಗಳು ಟೆಂಡರ್ ಕರೆಯುವ ಅಧಿಕಾರವಿದ್ದು ಸದರಿ ಸಂಪಾದಕರಿಗೆ ವಿಶ್ವವಿದ್ಯಾಲಯದ ಪರವಾಗಿ ಟೆಂಡರ್ ಆಹ್ವಾನಿಸುವ ಪ್ರತ್ಯಾಧಿಕಾರ ಇದ್ದಲ್ಲಿ ದಾಖಲೆ ಒದಗಿಸುವುದು.	**43** ಈ ಕಂಡಿಕೆಗೆ ಸಂಬಂಧಿಸಿದಂತೆ 2015–16 ರಲ್ಲಿ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ. ವೈ. ಆರ್. ಆಲದಕಟ್ಟಿ ಇವರೊಂದಿಗೆ ಕೂಲಂಕುಷವಾಗಿ ಚರ್ಚಿಸಿದ ನಂತರ ಈ ಕೆಳಗಿನಂತೆ ಅನುಸರಣಾ ವಿವರವನ್ನು ಸಲ್ಲಿಸಿದೆ. 1. ಪ್ರಕಟಣಾ ಕೇಂದ್ರದಿಂದ ಪ್ರಕಟವಾಗುವ ನಿಯತಕಾಲಿಕೆಗಳು, ಪುಸ್ತಕಗಳು, ಮಾಸಿಕ ಹಾಗೂ ತ್ರೈಮಾಸಿಕ ಪತ್ರಿಕೆಗಳ ಮುದ್ರಣಕ್ಕೆ ಪ್ರತಿವರ್ಷ ಟೆಂಡರ್ ಪ್ರಕ್ರಿಯೆ ಅನುಸರಿಸಲಾಗುತ್ತ ಬರಲಾಗಿದೆ. ಅದೇ ರೀತಿ ಹಿಂದಿನ ವರ್ಷಗಳಲ್ಲಿ ಅನುಸರಿಸಿದ ಪದ್ಧತಿಯಲ್ಲಿಯೇ ಈ ಸಾಲಿನಲ್ಲಿ ಪುಸ್ತಕಗಳ ಮುದ್ರಣಕ್ಕೆ ಟೆಂಡರ್ ಕರೆದು, ಈ ಪ್ರಕ್ರಿಯೆಯನ್ನು ವಿಶ್ವವಿದ್ಯಾಲಯವು ನೇಮಕ ಮಾಡಿದ ಕಮೀಟಿಯ ಸಮ್ಮುಖದಲ್ಲಿ ಆಖೈರು ಮಾಡಲಾಗಿದೆ. ಹಿಂದಿನ ವರ್ಷ ಅನುಮೋದನೆಗೊಂಡ ಟೆಂಡರ್ ಮಾರ್ಚ್ ಅಂತ್ಯಕ್ಕೆ ಕೊನೆಗೊಳ್ಳುವುದರಿಂದ ಹಾಗೂ ಏಪ್ರಿಲ್ ತಿಂಗಳಲ್ಲಿ ಹೊಸ ಟೆಂಡರ್ ದರ ಅವಶ್ಯವಿರುವುದರಿಂದ ಪ್ರತಿ ವರ್ಷದಂತೆ ಮಾರ್ಚ್ ಕೊನೆಯ ವಾರದಲ್ಲಿ 'ಅಲ್ಪಾವಧಿ' ಟೆಂಡರ್ ಕರೆಯಲು ಮಾನ್ಯ ಕುಲಪತಿಗಳ ಒಪ್ಪಿಗೆ ಪಡೆದು ಟೆಂಡರ್ ಪ್ರಕ್ರಿಯೆ ಮುಂದುವರೆಸಿದೆ. ಇನ್ನು ಮುಂದೆ ಇಂತಹ ಸಂದರ್ಭಗಳಲ್ಲಿ ಸಕಾರಣಗಳೊಂದಿಗೆ ಮೇಲಾಧಿಕಾರಿಗಳ ಒಪ್ಪಿಗೆ ಪಡೆಯಲಾಗುವುದು. 2. ಕಳೆದ ಹಲವಾರು ವರ್ಷಗಳಿಂದ ಟೆಂಡರ್ ನಿಯಮಾನುಸಾರ ಮೇಲಾಧಿಕಾರಿಗಳ ಒಪ್ಪಿಗೆ ಮೇರೆಗೆ ಹಾಗೂ ವಿಶ್ವವಿದ್ಯಾಲಯ ನೇಮಕ ಮಾಡಿದ ಕಮೀಟಿಯ ಒಪ್ಪಿಗೆ ಮೇರೆಗೆ 'ಮ್ಯಾನ್ಯುವಲ್' ಟೆಂಡರ್ ಮಾಡಲಾಗಿದ್ದು, ಅದನ್ನೇ ಈ ಸಾಲಿನಲ್ಲಿಯೂ ಮುಂದುವರೆಸಲಾಗಿದೆ. ಇ–ಟೆಂಡರ್ ಹೊರತಾಗಿ ಟೆಂಡರ್ ಮಾರ್ಗಸೂಚಿಯಲ್ಲಿನ ಎಲ್ಲ ನಿಯಮಗಳನ್ನು 'ಮ್ಯಾನ್ಯೂವಲ್' ಟೆಂಡರ್‌ದಲ್ಲಿಯೂ ಪಾರದರ್ಶಕವಾಗಿ ಪಾಲಿಸಲಾಗಿದೆ. ಮುಂದೆ 2017–18ರ ಸಾಲಿನಿಂದ ಇ–ಟೆಂಡರ್ ಕೆಟಿಟಿಪಿ ಆ್ಯಕ್ಟ್ ನಿಯಮಾವಳಿಗಳನ್ನು ಚಾಚು ತಪ್ಪದೇ ಅನುಸರಿಸಲಾಗಿದೆ. 3. ಮ್ಯಾನ್ಯುವಲ್ ಟೆಂಡರ್ ವಿವರವನ್ನು ಟೆಂಡರ್ ಕಮೀಟಿಯ ಸಮ್ಮುಖದಲ್ಲಿ ಮಂಡಿಸಿ, ತುಲನಾತ್ಮಕ ಪಟ್ಟಿಗೆ ಒಪ್ಪಿಗೆ ಪಡೆಯಲಾಗಿದೆ. ನಂತರ ಆಯಾ ಮುದ್ರಣ ಕಾರ್ಯಕ್ಕೆ ಟೆಂಡರ್‌ದಲ್ಲಿ ಭಾಗವಹಿಸಿದ ಎಲ್ಲ ಮುದ್ರಕರಿಂದಲೂ ಒಪ್ಪಂದ ಪತ್ರ ಪಡೆಯಲಾಗಿದೆ. 4. ಈ ಕೇಂದ್ರಕ್ಕೆ ಮುದ್ರಣಕ್ಕೆ ಬರಬಹುದಾದ ಎಲ್ಲ ರೀತಿಯ ಎಲ್ಲ ಸೈಜಿನ, ಎಲ್ಲ ನಮೂನೆಯ ಹಾಗೂ ವಿವಿಧ ಸಂಖ್ಯೆಗಳ ಮುದ್ರಣಕ್ಕೆ ಟೆಂಡರ್ ದರ ಆಹ್ವಾನಿಸಲಾಗಿರುತ್ತದೆ. ಹಾಗಾಗಿ ಕೋಟ್ ಮಾಡಿದ ಎಲ್ಲ ದರಗಳನ್ನು ತುಲನಾತ್ಮಕ ಪಟ್ಟಿಯಲ್ಲಿ ನಮೂದಿಸಲಾಗುವುದು. ಕೆಲವು ಮುದ್ರಕರು ಕೋಟ್

	ಈ ಮೇಲಿನ ನ್ಯೂನ್ಯತೆಗಳ ಕುರಿತು ಸೂಕ್ತ ವಿವರಣೆ ನೀಡಲು ಕೋರಿ ಲೆ.ವಿ.ಪ.ಸಂ. 1 ದಿನಾಂಕ 13.12.2019 ರಂದು ನೀಡಲಾಗಿ ವಿಭಾಗದವರು ನೀಡಿದ ಅನುಸರಣೆಯಲ್ಲಿ. ತಿಳಿಸಿದಂತೆ 2017–18 ನೇ ಸಾಲಿನಿಂದ ಮೇಲೆ ತಿಳಿಸಿದ ಎಲ್ಲ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದು ಇಂತಹ ಉತ್ತರಗಳನ್ನು ಲೆಕ್ಕ ಪರಿಶೋಧನೆ ಒಪ್ಪಲಾಗುವುದಿಲ್ಲ. ಕಾರಣ ರೂ. **13,69,845/-** ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ – "10" ರಲ್ಲಿ ವಿವರಿಸಿದೆ.	ಮಾಡಿರುವುದಿಲ್ಲ, ಅದನ್ನು (–) ಎಂದು ನಮೂದಿಸಲಾಗಿದೆ. ಈ ಸಾಲಿನಲ್ಲಿ ಕೃಷಿಮುನ್ನಡೆ, ಜೆಎಫ್‌ಎಸ್ ಹಾಗೂ ವಾರ್ತಾ ಪತ್ರಗಳನ್ನು ಮುದ್ರಿಸಲಾಗಿದೆ, ಅವುಗಳ ಸಂಖ್ಯೆಯನ್ನು ಅನುಬಂಧದಲ್ಲಿ ಲಗತ್ತಿಸಿದೆ. ಈ ಸಂಖ್ಯೆಯ ಮುದ್ರಣಕ್ಕೆ 3 ಬಿಡ್‌ದಾರರು ದರ ನಮೂದಿಸಿದ್ದಾರೆ. ಅದರನ್ವಯ ತುಲನಾತ್ಮಕ ಮಾಡಿ ಕಡಿಮೆ ಬಿಡ್ ದಾರರಿಗೆ ಮುದ್ರಣ ಕೆಲಸ ಒಪ್ಪಿಸಿದೆ. 5. ಕಳೆದ ಎಲ್ಲಾ ವರ್ಷಗಳಲ್ಲಿ ವಿಶ್ವವಿದ್ಯಾಲಯದಿಂದ ಟೆಂಡರ್ ಕಮೀಟಿ ನೇಮಕಮಾಡಿ, ಸಂಪಾದಕರನ್ನು ಸಂಚಾಲಕ ಸದಸ್ಯರಾಗಿ ನೇಮಕ ಮಾಡುವ ಪ್ರಕ್ರಿಯೆಯಂತೆ ಈ ಸಾಲಿನಲ್ಲಿಯೂ ಅನುಸರಿಸಲಾಗಿದೆ. ಸಂಚಾಲಕ ಸದಸ್ಯರಾಗಿ ಕೇಂದ್ರದ ಸಂಪಾದಕರು ಈ ಪ್ರಕ್ರಿಯೆ ಮುಂದುವರೆಸಿದ್ದು ಇದೆ. ಇದಕ್ಕೆ ಪ್ರತ್ಯೇಕವಾದ ಪ್ರತ್ಯಾಧಿಕಾರದ ದಾಖಲೆ ಇರುವುದಿಲ್ಲ. ಸಧ್ಯ 2017–18 ನೇ ಸಾಲಿನಿಂದ ಕೆಟಿಟಿಪಿ, ಆ್ಯಕ್ಟ್ ಪ್ರಕಾರ ಇ–ಟೆಂಡರ್ ನಿಯಮಗಳನ್ನೆ ಅಳವಡಿಸಿಕೊಳ್ಳಲಾಗಿದೆ. ಈ ಮೇಲಿನ ಸಕಾರಣಗಳಿಂದಾಗಿ ಈ ಕಂಡಿಕೆಯಲ್ಲಿನ ನ್ಯೂನತೆಗಳನ್ನು ಮನ್ನಿಸಿ ಕೈಬಿಡಲು ಕೋರಿದೆ.
44	**ಪ್ರಕಟಣಾ ವಿಭಾಗದಲ್ಲಿ 2016–17ನೇ ಸಾಲಿನಲ್ಲಿ ಮುದ್ರಣಾ ಕಾರ್ಯಕ್ಕಾಗಿ ಕರೆದ ಟೆಂಡರ್ ಪ್ರಕ್ರಿಯೆಯಲ್ಲಿ ಕಂಡು ಬಂದ ನ್ಯೂನ್ಯತೆ.(ಪ್ರಕಟಣಾ ವಿಭಾಗ ಕಂ.ಸಂ.5)** ಪ್ರಕಟಣಾ ವಿಭಾಗದಲ್ಲಿ 2016–17ನೇ ಸಾಲಿನ ಮುದ್ರಣ ಕಾರ್ಯಕ್ಕಾಗಿ ಟೆಂಡರ್ ಕರೆಯಲಾಗಿದ್ದು ಕಡತದ ಪರಿಶೀಲನೆಯಲ್ಲಿ ಈ ಕೆಳಕಂಡ ನ್ಯೂನ್ಯತೆಗಳು ಕಂಡು ಬಂದಿರುತ್ತದೆ. 1) ದಿನಾಂಕ: 03.03.2016ರ ದಿನಪತ್ರಿಕೆಯಲ್ಲಿ ಅಲ್ಪಾವಧಿ ಟೆಂಡರ್ ಕೊನೆಯ ದಿನಾಂಕ:19.03.2016 ಇರುತ್ತದೆ. ದಿನಾಂಕ:29.02.2016 ರಂದು ಶಿಕ್ಷಣ ನಿರ್ದೇಶಕರು ಅಲ್ಪಾವಧಿ ಟೆಂಡರ್ ಕರೆಯಲು ಒಪ್ಪಿಗೆ ಸೂಚಿಸಿದ್ದು ಯಾವುದೇ ಅಲ್ಪಾವಧಿ ಟೆಂಡರ್ ಕರೆಯಲು ಯಾವುದೇ ಲಿಖಿತ ಕಾರಣಗಳು ದಾಖಲಾಗಿರುವುದಿಲ್ಲ. KTPP Act 2000ರ ನಿಮಯ17(2)(1) ರಲ್ಲಿ ಟೆಂಡರ ಕರೆಯುವ ಅಧಿಕಾರಿಯ ಮೇಲಾಧಿಕಾರಿಗಳು ಲಿಖಿತ ರೂಪದಲ್ಲಿ ಕಾರಣಗಳನ್ನು ದಾಖಲಿಸುವುದು ಕಡ್ಡಾಯವಾಗಿದೆ. 2) KTPP Act 2000 ಜಾರಿಗೆಯಾದ ನಂತರ ಇ–ಪ್ರೊಕ್ಯುರ್‌ಮೆಂಟ್ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದು ಅವಶ್ಯವಿದ್ದು ಸದರ ವಿಭಾಗದಲ್ಲಿ ಮ್ಯಾನುವಲ್ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿದೆ. 3) ವಿಶ್ವ ವಿದ್ಯಾಲಯದ ಪರವಾಗಿ ಆಸ್ತಿ ಅಧಿಕಾರಿಗಳು ಟೆಂಡರ್ ಕರೆಯುವ ಅಧಿಕಾರವಿದ್ದು ಸದರಿ ಸಂಪಾದಕರಿಗೆ ವಿಶ್ವವಿದ್ಯಾಲಯದ ಪರವಾಗಿ ಟೆಂಡರ್ ಆಹ್ವಾನಿಸುವ ಪ್ರತ್ಯಾಧಿಕಾರ	**44** ಈ ಕಂಡಿಕೆಗೆ ಸಂಬಂಧಿಸಿದಂತೆ 2016–17 ರಲ್ಲಿ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ. ವೈ. ಆರ್. ಆಲದಕಟ್ಟಿ ಇವರೊಂದಿಗೆ ಕೂಲಂಕುಷವಾಗಿ ಚರ್ಚಿಸಿದ ನಂತರ ಈ ಕೆಳಗಿನಂತೆ ಅನುಸರಣಾ ವಿವರವನ್ನು ಸಲ್ಲಿಸಿದೆ. 1. ಪ್ರಕಟಣಾ ಕೇಂದ್ರದಿಂದ ಪ್ರಕಟವಾಗುವ ನಿಯತಕಾಲಿಕೆಗಳು, ಪುಸ್ತಕಗಳು, ಮಾಸಿಕ ಹಾಗೂ ತ್ರೈಮಾಸಿಕ ಪತ್ರಿಕೆಗಳ ಮುದ್ರಣಕ್ಕೆ ಪ್ರತಿವರ್ಷ ಟೆಂಡರ್ ಪ್ರಕ್ರಿಯೆ ಅನುಸರಿಸಲಾಗುತ್ತ ಬರಲಾಗಿದೆ. ಅದೇ ರೀತಿ ಹಿಂದಿನ ವರ್ಷಗಳಲ್ಲಿ ಅನುಸರಿಸಿದ ಪದ್ಧತಿಯಲ್ಲಿಯೇ ಈ ಸಾಲಿನಲ್ಲಿ ಪುಸ್ತಕಗಳ ಮುದ್ರಣಕ್ಕೆ ಟೆಂಡರ್ ಕರೆದು, ಈ ಪ್ರಕ್ರಿಯೆಯನ್ನು ವಿಶ್ವವಿದ್ಯಾಲಯವು ನೇಮಕ ಮಾಡಿದ ಕಮೀಟಿಯ ಸಮ್ಮುಖದಲ್ಲಿ ಆಖೈರು ಮಾಡಲಾಗಿದೆ. ಹಿಂದಿನ ವರ್ಷ ಅನುಮೋದನೆಗೊಂಡ ಟೆಂಡರ್ ಮಾರ್ಚ್ ಅಂತ್ಯಕ್ಕೆ ಕೊನೆಗೊಳ್ಳುವುದರಿಂದ ಹಾಗೂ ಏಪ್ರಿಲ್ ತಿಂಗಳಲ್ಲಿ ಹೊಸ ಟೆಂಡರ್ ದರ ಅವಶ್ಯವಿರುವುದರಿಂದ ಪ್ರತಿ ವರ್ಷದಂತೆ ಮಾರ್ಚ್ ಕೊನೆಯ ವಾರದಲ್ಲಿ 'ಅಲ್ಪಾವಧಿ' ಟೆಂಡರ್ ಕರೆಯಲು ಮಾನ್ಯ ಕುಲಪತಿಗಳ ಒಪ್ಪಿಗೆ ಪಡೆದು ಟೆಂಡರ್ ಪ್ರಕ್ರಿಯೆ ಮುಂದುವರೆಸಿದೆ. ಇನ್ನು ಮುಂದೆ ಇಂತಹ ಸಂದರ್ಭಗಳಲ್ಲಿ ಸಕಾರಣಗಳೊಂದಿಗೆ ಮೇಲಾಧಿಕಾರಿಗಳ ಒಪ್ಪಿಗೆ ಪಡೆಯಲಾಗುವುದು. 2. ಕಳೆದ ಹಲವಾರು ವರ್ಷಗಳಿಂದ ಟೆಂಡರ್ ನಿಯಮಾನುಸಾರ ಮೇಲಾಧಿಕಾರಿಗಳ ಒಪ್ಪಿಗೆ ಮೇರೆಗೆ ಹಾಗೂ ವಿಶ್ವವಿದ್ಯಾಲಯ ನೇಮಕ

	ಇದ್ದಲ್ಲಿ ದಾಖಲೆ ಒದಗಿಸುವುದು. 4) ಟೆಂಡರ ಪ್ರಕ್ರಿಯೇ ನಂತರ ಯಶಸ್ವಿ ಬಿಡದಾರರ ಜೊತೆ ಒಪ್ಪಂದ ಮಾಡಿಕೊಂಡಲ್ಲಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕೋರಿದೆ. ಈ ಮೇಲಿನ ಎಲ್ಲ ಅಂಶಗಳ ಕುರಿತು ಸೂಕ್ತ ದಾಖಲೆಗಳೊಂದಿಗೆ ಅನುಸರಣೆ ಸಲ್ಲಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ 15 ದಿನಾಂಕ 17.12.2019 ನೀಡಿದ್ದು ಸಲ್ಲಿಸಿದ ಅನುಸರಣೆಯಲ್ಲಿ ತಿಳಿಸಿದಂತೆ 2017–18 ನೇ ಸಾಲಿನಿಂದ ಲೆಕ್ಕ ಪರಿಶೋಧನೆಯಲ್ಲಿ ತಿಳಿಸಿದ ಎಲ್ಲ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದು ಲೆಕ್ಕ ಪರಿಶೋಧನೆ ಒಪ್ಪಲಾಗುವುದಿಲ್ಲ. ಕಾರಣ 26,31,397/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ – "11" ರಲ್ಲಿ ವಿವರಿಸಿದೆ.	ಮಾಡಿದ ಕಮೀಟಿಯ ಒಪ್ಪಿಗೆ ಮೇರೆಗೆ 'ಮ್ಯಾನ್ಯುವಲ್' ಟೆಂಡರ್ ಮಾಡಲಾಗಿದ್ದು, ಅದನ್ನೇ ಈ ಸಾಲಿನಲ್ಲಿಯೂ ಮುಂದುವರೆಸಲಾಗಿದೆ. ಇ–ಟೆಂಡರ್ ಹೊರತಾಗಿ ಟೆಂಡರ್ ಮಾರ್ಗಸೂಚಿಯಲ್ಲಿನ ಎಲ್ಲ ನಿಯಮಗಳನ್ನು 'ಮ್ಯಾನ್ಯೂವಲ್' ಟೆಂಡರ್‌ದಲ್ಲಿಯೂ ಪಾರದರ್ಶಕವಾಗಿ ಪಾಲಿಸಲಾಗಿದೆ. ಮುಂದೆ 2017–18ರ ಸಾಲಿನಿಂದ ಇ–ಟೆಂಡರ್ ಕೆಟಿಟಿಪಿ ಆ್ಯಕ್ಟ್ ನಿಯಮಾವಳಿಗಳನ್ನು ಚಾಚು ತಪ್ಪದೇ ಅನುಸರಿಸಲಾಗಿದೆ. 3. ಮ್ಯಾನ್ಯುವಲ್ ಟೆಂಡರ್ ವಿವರವನ್ನು ಟೆಂಡರ್ ಕಮೀಟಿಯ ಸಮ್ಮುಖದಲ್ಲಿ ಮಂಡಿಸಿ, ತುಲನಾತ್ಮಕ ಪಟ್ಟಿಗೆ ಒಪ್ಪಿಗೆ ಪಡೆಯಲಾಗಿದೆ. ನಂತರ ಆಯಾ ಮುದ್ರಣ ಕಾರ್ಯಕ್ಕೆ ಟೆಂಡರ್‌ದಲ್ಲಿ ಭಾಗವಹಿಸಿದ ಎಲ್ಲ ಮುದ್ರಕರಿಂದಲೂ ಒಪ್ಪಂದ ಪತ್ರ ಪಡೆಯಲಾಗಿದೆ. 4. ಈ ಕೇಂದ್ರಕ್ಕೆ ಮುದ್ರಣಕ್ಕೆ ಬರಬಹುದಾದ ಎಲ್ಲ ರೀತಿಯ ಎಲ್ಲ ಸೈಜಿನ, ಎಲ್ಲ ನಮೂನೆಯ ಹಾಗೂ ವಿವಿಧ ಸಂಖ್ಯೆಗಳ ಮುದ್ರಣಕ್ಕೆ ಟೆಂಡರ್ ದರ ಆಹ್ವಾನಿಸಲಾಗಿರುತ್ತದೆ. ಹಾಗಾಗಿ ಕೋಟ್ ಮಾಡಿದ ಎಲ್ಲ ದರಗಳನ್ನು ತುಲನಾತ್ಮಕ ಪಟ್ಟಿಯಲ್ಲಿ ನಮೂದಿಸಲಾಗುವುದು. ಕೆಲವು ಮುದ್ರಕರು ಕೋಟ್ ಮಾಡಿರುವುದಿಲ್ಲ, ಅದನ್ನು (–) ಎಂದು ನಮೂದಿಸಲಾಗಿದೆ. ಈ ಸಾಲಿನಲ್ಲಿ ಕೃಷಿಮುನ್ನಡೆ, ಜೆಎಫ್‌ಎಸ್ ಹಾಗೂ ವಾರ್ತಾ ಪತ್ರಗಳನ್ನು ಮುದ್ರಿಸಲಾಗಿದೆ, ಅವುಗಳ ಸಂಖ್ಯೆಯನ್ನು ಅನುಬಂಧದಲ್ಲಿ ಲಗತ್ತಿಸಿದೆ. ಈ ಸಂಖ್ಯೆಯ ಮುದ್ರಣಕ್ಕೆ 3 ಬಿಡ್‌ದಾರರು ದರ ನಮೂದಿಸಿದ್ದಾರೆ. ಅದರನ್ವಯ ತುಲನಾತ್ಮಕ ಮಾಡಿ ಕಡಿಮೆ ಬಿಡ್ ದಾರರಿಗೆ ಮುದ್ರಣ ಕೆಲಸ ಒಪ್ಪಿಸಿದೆ. 5. ಕಳೆದ ಎಲ್ಲಾ ವರ್ಷಗಳಲ್ಲಿ ವಿಶ್ವವಿದ್ಯಾಲಯದಿಂದ ಟೆಂಡರ್ ಕಮೀಟಿ ನೇಮಕಮಾಡಿ, ಸಂಪಾದಕರನ್ನು ಸಂಚಾಲಕ ಸದಸ್ಯರಾಗಿ ನೇಮಕ ಮಾಡುವ ಪ್ರಕ್ರಿಯೆಯಂತೆ ಈ ಸಾಲಿನಲ್ಲಿಯೂ ಅನುಸರಿಸಲಾಗಿದೆ. ಸಂಚಾಲಕ ಸದಸ್ಯರಾಗಿ ಕೇಂದ್ರದ ಸಂಪಾದಕರು ಈ ಪ್ರಕ್ರಿಯೆ ಮುಂದುವರೆಸಿದ್ದು ಇದೆ. ಇದಕ್ಕೆ ಪ್ರತ್ಯೇಕವಾದ ಪ್ರತ್ಯಾಧಿಕಾರದ ದಾಖಲೆ ಇರುವುದಿಲ್ಲ. ಸಧ್ಯ 2017–18 ನೇ ಸಾಲಿನಿಂದ ಕೆಟಿಟಿಪಿ, ಆ್ಯಕ್ಟ್ ಪ್ರಕಾರ ಇ–ಟೆಂಡರ್ ನಿಯಮಗಳನ್ನೆ ಅಳವಡಿಸಿಕೊಳ್ಳಲಾಗಿದೆ. ಈ ಮೇಲಿನ ಸಕಾರಣಗಳಿಂದಾಗಿ ಈ ಕಂಡಿಕೆಯಲ್ಲಿನ ನ್ಯೂನ್ಯೆತೆಗಳನ್ನು ಮನ್ನಿಸಿ ಕೈಬಿಡಲು ಕೋರಿದೆ.

	ಕೆಟಿಪಿಪಿ ಕೊಟೇಶನ್	
45	**ಸ್ಪರ್ಧಾತ್ಮಕ ದರಪಟ್ಟಿ ಮೂಲಕ ಖರೀದಿಸಿದ/ಪಡೆದ ಸರಕು/ಸೇವೆಗಳ ಸಂಗ್ರಹಣಾ ಪ್ರಕ್ರಿಯೆಯಲ್ಲಿ ಕಂಡು ಬಂದ ನ್ಯೂನ್ಯತೆಗಳು.** **2017–18** ನೇ ಸಾಲಿನಲ್ಲಿ ಕೃಷಿ ವಿಶ್ವವಿದ್ಯಾಲಯದ ವಿವಿಧ ಘಟಕಗಳಲ್ಲಿ ದರಪಟ್ಟಿಗಳ ಮೂಲಕ ವಿವಿಧ ಸರಕು/ಸೇವೆಗಳ ಖರೀದಿ ಪ್ರಕ್ರಿಯೆಯನ್ನು ಸಾದಿಲ್ವಾರು ವೆಚ್ಚ ಕೈಪಿಡಿ **1958** ನಿಯಮಗಳ ನಿಯಮ **55(49)**(ಎ) ಸರ್ಕಾರದ ಆದೇಶ ಸಂ.ಆಇ **01** ಟಿಸಿಇ **2012** ಬೆಂಗಳೂರು ದಿನಾಂಕ **21.06.2012** ಹಾಗೂ ಸರ್ಕಾರದಿಂದ ಈ ಕುರಿತು ಕಾಲಕಾಲಕ್ಕೆ ಹೊರಡಿಸಿದ ಸುತ್ತೊಲೆಗಳಲ್ಲಿನ ನಿರ್ದೇಶಗಳನ್ವಯ ನಿರ್ವಹಿಸದೇ ಇದ್ದು ಇಂತಹ ಅನಿಯಮಿತ ಖರೀದಿ/ಸಂಗ್ರಹ ಪ್ರಕ್ರಿಯೆ ಮೂಲಕ ಸಂಗ್ರಿಹಿಸಿದ ಸರಕು/ಸೇವೆಗಳನ್ನು ಪಡೆದಿದ್ದು ವಿವರ ಈ ಕೆಳಗಿನಂತಿವೆ. ದರಪಟ್ಟಿ ವಿಚಾರಣಾ ಪತ್ರದಲ್ಲಿ ಬೇಕಾಗಿರುವ ಸರಕು/ಸೇವೆಯ ಪ್ರಮಾಣ, ಪರಿಮಾಣ ನಿಯಮ & ಷರತ್ತುಗಳು, ದರಪಟ್ಟಿ ಸಲ್ಲಿಸುವ ಕೊನೆಯ ದಿನಾಂಕ, ಜಾವಕ ಸಂಖ್ಯೆ ದಿನಾಂಕಗಳನ್ನು ನಮೂದಿಸಿರಬೇಕು. **1)** ದರಪಟ್ಟಿ ವಿಚಾರಣಾ ಪತ್ರವನ್ನು ಹೆಚ್ಚು ಪ್ರಚಾರವಾಗುವಂತೆ ವಿ.ವಿ.ಯ ಮುಖ್ಯ ಸೂಚನಾ ಫಲಕ, ಸೂಚನಾ ಫಲಕಗಳಲ್ಲಿ ಲಗತ್ತಿಸುವುದು. (ಸ್ವೀಕೃತಿ ಪಡೆದಿರಬೇಕು) **2)** ದರಪಟ್ಟಿ ವಿಚಾರಣಾ ಪತ್ರವನ್ನು ಕನಿಷ್ಠ **3** ಅಥವಾ ಅದಕ್ಕಿಂತ ಹೆಚ್ಚಿನ ಫರ್ಮಗಳಿಗೆ ಪ್ರತ್ಯೇಕವಾಗಿ ಕಳುಹಿಸುವುದು. **3)** ನೇರವಾಗಿ/ಅಂಚೆ ಮೂಲಕ ಬಂದ ದರಪಟ್ಟಿಗಳನ್ನು ಕಚೇರಿ/ವಿಭಾಗದ ಆವಕವಹಿ ಯಲ್ಲಿ (Inward Register) ನಮೂದಿಸಿ ಸಂಖ್ಯೆ ಹಾಕುವುದು. **4)** ದರಪಟ್ಟಿ ಸಲ್ಲಿಕೆಯ ಕೊನೆಯ ದಿನದಂದು ಮುಚ್ಚಿದ ಲಕೋಟೆಯಲ್ಲಿ ಸ್ವೀಕರಿಸಿದ ದರಪಟ್ಟಿಗಳನ್ನು ಸಕ್ಷಮ ಅಧಿಕಾರಿಯು ತೆರೆದು ಲಕೋಟೆ ಮೇಲೆ ತೆರೆದ ದಿನಾಂಕ ನಮೂದಿಸಿ ದೃಢೀಕರಿಸುವುದು. ಅದೇ ದಿನದಂದು ತುಲನಾತ್ಮಕ ದರಪಟ್ಟಿ (Comparative Statement) ತಯಾರಿಸುವುದು. **5)** ಕನಿಷ್ಟ ದರ ನಮೂದಿಸಿದ ಫರ್ಮ/ಸಂಸ್ಥೆ/ವ್ಯಕ್ತಿ/ಎಜೆನ್ಸಿಗೆ ಪೂರೈಕೆ ಆದೇಶ ನೀಡುವುದು. **6)** ಸರಕು/ಸೇವೆ ಪೂರೈಸಿದ ಸಂಸ್ಥೆ/ಎಜೆನ್ಸಿಯ/ಫರ್ಮನ Invoce/Credit Bill ನ್ನು ಸಹಿತ ಆವಕ ವಹಿಯಲ್ಲೇ ಸ್ವೀಕೃತಿ ಪಡೆಯುವುದು. **7)** ದರಪಟ್ಟಿಯು ಕಡ್ಡಾಯವಾಗಿ ಫರ್ಮ/ವ್ಯಕ್ತಿ/ಸಂಸ್ಥೆ/ಎಜೆನ್ಸಿಯ ಸಹಿ/ಮೊಹರು ಇರುವಂತೆ ದರಪಟ್ಟಿ ವಿಚಾರಣಾ ಪತ್ರದನಿಯಮ & ಷರತ್ತಿನಲ್ಲಿ ತಿಳಿಸುವುದು.	**45** ಕಂಡಿಕೆಯಲ್ಲಿ ವಿವರಿಸಿದಂತೆ ಸರಕು ಖರೀದಿಯನ್ನು ನಿಯಮಾನುಸಾರವೇ ದರಪಟ್ಟಿ ಆಹ್ವಾನಿಸಿ ಕಡಿಮೆ ದರ ನೀಡಿದ ಪೂರೈಕೆದಾರರಿಗೆ ಪೂರೈಕೆ ಆದೇಶ ನೀಡಲಾಗಿದೆ. ಇದರಲ್ಲಿ ನಿಯಮ ಪಾಲಿಸದ ಯಾವುದೇ ಪ್ರಕ್ರಿಯೆಯನ್ನು ಕೈಗೊಂಡಿರುವುದಿಲ್ಲ

ಸ್ಪರ್ಧಾತ್ಮಕ ದರಪಟ್ಟಿ ಮೂಲಕ ಖರೀದಿ ಪ್ರಕ್ರಿಯೆಯಲ್ಲಿ ಮೇಲೆ ತಿಳಿಸಿದ ಹಂತಗಳನ್ನು ಪಾಲಿಸಿರುವುದಿಲ್ಲ ಇದಲ್ಲದೆ ಅನೇಕ ಖರೀದಿ ಪ್ರಕಿಯೆಗಳಲ್ಲಿ ಈ ಕೆಳಗೆ ಕಾಣಿಸಿದ ನ್ಯೂನ್ಯತೆಗಳು ಕಂಡುಬಂದಿರುತ್ತವೆ.

1) ರೂ 5000/– ಮೇಲ್ಪಟ್ಟ ಖರೀದಿ ಪ್ರಕ್ರಿಯೆಯಲ್ಲಿ ಕೊಟೇಶನ್‌ಕರೆಯದೇ ನೇರವಾಗಿ ಖರೀದಿಸಿರುವುದು.
2) ಖಿಂಕಒಅ ಮತ್ತು ಪ್ರಾದೇಶಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ಕೆಟಿಪಿಪಿ ನಿಯಮ 2000 ರ 4ಜಿ ವಿನಾಯಿತಿ ಪಡೆದಿರುವುದಿಲ್ಲ. ಕಾರಣ ಸದರಿ ಸಂಸ್ಥೆಗಳಿಂದ ಕೊಟೇಶನ್ ಕರೆಯದೆ ನೇರವಾಗಿ ಖರೀದಿಸಲು ಅವಕಾಶವಿರುವುದಿಲ್ಲ.
3) ಒಂದೇ ಕೊಟೇಶನ್ ಆಧಾರದ ಮೇಲೆ ಎರಡು ಅಥವಾ ಎರಡಕ್ಕಿಂತ ಮೇಲ್ಪಟ್ಟ ಖರೀದಿ ಮಾಡಲು ಅವಕಾಶವಿರುವುದಿಲ್ಲ.
4) ಅನೇಕ ಪ್ರಕರಣಗಳಲ್ಲಿ ಕೊಟೇಶನ್ ಪ್ರಕ್ರಿಯೆ ತಪ್ಪಿಸಲು ಬಿಲ್ಲುಗಳನ್ನು ವಿಭಜಿಸಿ ಖರೀದಿಸಿದ್ದು ನಿಯಮಗಳಲ್ಲಿ ಅವಕಾಶವಿರುವುದಿಲ್ಲ
5) ದರಪಟ್ಟಿ ಅವಧಿ 90 ದಿನಗಳ ಕಾಲಮಾತ್ರ ಊರ್ಜಿತವಾಗಿರುತ್ತದೆ.

ಕ್ರ.ಸಂ.	ವಿವರ	ಮೊತ್ತ
1 (64)	ಕೋಟೆಶನ್ ಅವಧಿ ಮುಗಿದ ನಂತರ ಸರಕು/ಸೇವೆ ಪಡೆದಿರುವ ಬಗ್ಗೆ. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ. 40)	67630
2	ಸ್ಪರ್ಧಾತ್ಮಕ ದರಪಟ್ಟಿ ಮೂಲಕ ಖರೀದಿಸಿದ/ಪಡೆದ ಸರಕು/ಸೇವೆಗಳ ಸಂಗ್ರಹಣಾ ಪ್ರಕ್ರಿಯೆಯಲ್ಲಿ ಕಂಡು ಬಂದ ನ್ಯೂನತೆಗಳ ಕುರಿತು. (ಕೃಷಿ ಮಹಾವಿದ್ಯಾಲಯ ಧಾರವಾಡ ಕಂ.ಸಂ.25)	95845
3	ದರಪಟ್ಟಿಯನ್ನು ಕರೆಯದೇ ಸರಕುಗಳನ್ನು ಖರೀದಿಸಿರುವ ಕುರಿತು. (ಮುಖ್ಯ ಸಂಶೋಧನಾ ಕೇಂದ್ರಕಂ.ಸಂ. 24)	327014
4	ಕೋಟೆಶನ್ ಕರೆಯದೇ ನೇರವಾಗಿ ಖರೀದಿಸಿರುವ ಕುರಿತು. (ಪ್ರಾದೇಶಿಕ ಸಂಶೋಧನಾ ಕೇಂದ್ರ ವಿಜಯಪುರ ಕಂ.ಸಂ. 21)	275840
	ಒಟ್ಟು	766329

ಮೇಲೆ ತಿಳಿಸಿದಂತೆ ಆಯಾ ಘಟಕಗಳಲ್ಲಿ ವಿಚಾರಣಾ ಪತ್ರ ನೀಡಿದ್ದು ಇನ್ನು ಮುಂದೆ ನಿಯಮಾನುಸಾರ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ ಕಾರಣ ರೂ 7,66,329=00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

46 **ಕೊಟೇಶನ್ (ದರಪಟ್ಟಿ) ಕರೆಯದೇ ನೇರವಾಗಿ ಸರಕುಗಳನ್ನು ಖರೀದಿಸಿರುವ ಕುರಿತು.**

(ಬಿ.ಎಸ್.ಪಿ/ಎನ್.ಎಸ್.ಪಿ ಕಂ.ಸಂ.30)

ಕೃ.ವಿ.ವಿ. ಧಾರವಾಡದ ಬಿಎಸ್‌ಪಿ/ಎನ್‌ಎಸ್‌ಪಿ ಘಟಕದ 2017–18ನೇ ಸಾಲಿನ ಲೆಕ್ಕಪರಿಶೋಧನೆ ವೇಳೆ ಪರಿಶೀಲಿಸಲಾಗಿ, ಕರ್ನಾಟಕ ಸಾದಿಲ್ವಾರು ವೆಚ್ಚ ಕೈಪಿಡಿ 1958 ನಿಯಮ 55(49)(ಎ) ಹಾಗೂ ಸರ್ಕಾರದ ಆದೇಶ ಸಂಖ್ಯೆ: ಆಇ 01 ಟಿಸಿಇ 2012, ಬೆಂಗಳೂರು ದಿನಾಂಕ: 21–6–2012 ರ ಪ್ರಕಾರ ರೂ.5000/– ಕ್ಕಿಂತ ಹೆಚ್ಚಿನ ಮೊತ್ತದ ಸರಕು/ಸೇವೆಗಳನ್ನು ಸ್ಪರ್ಧಾತ್ಮಕ ದರಪಟ್ಟಿಗಳ ಮೂಲಕ ಖರೀದಿ/ಪಡೆಯಬೇಕೆಂದು ತಿಳಿಸಲಾಗಿದೆ. ಆದರೆ, ರೂ.17,270/– ಮೊತ್ತದ ವಿವಿಧ ಸರಕುಗಳನ್ನು ಆಧುನಿಕ ತೋಟಗಾರಿಕೆ(ಬಿ.ಎಸ್.ಪಿ–ಎನ್.ಎಸ್.ಪಿ) ಘಟಕದಲ್ಲಿ ನೇರವಾಗಿ ಖರೀದಿಸಿದ್ದು, ವಿವರ ಈ ಕೆಳಗಿನಂತಿವೆ.

Sl. No.	Chq.No./Date	Amount	Bill/Firm Details	Procured goods/Service	AbAc
1	2	3	4	5	6
1	710093/21.07.2017	17,270/-	TAPCMS Dharwad Credit Bill No.1980	DAP 50kg 08 bags MOP 02 bags SSP 03 bags Urea 02 bags	3820/502
	Total	17,270			

ಈ ಕುರಿತು ಲೆಕ್ಕಪರಿಶೋಧನೆಗೆ ಸೂಕ್ತ ವಿವರಣೆ ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ 37 ದಿನಾಂಕ 25.09.2019 ನೀಡಲಾಗಿ ಸಲ್ಲಿಸಿದ ಅನುಸರಣೆಯಲ್ಲಿ TAPCMS Dharwad ಸರ್ಕಾರಿ ಅಂಗ ಸಂಸ್ಥೆಯಾಗಿದ್ದು ಎಂದು ಭಾವಿಸಿ, ನೇರವಾಗಿ ಖರೀದಿಸಲಾಗಿದೆ ಎಂದು ತಿಳಿಸಿದ್ದು ಇನ್ನು ಮುಂದೆ ದರಪಟ್ಟಿ ಮೂಲಕ ಖರೀದಿ ಪ್ರಕ್ರಿಯೆ ನಿರ್ವಹಿಸಲು ಸೂಚಿಸಿದೆ.

46 ಈಗಾಗಲೇ ಮೇಲಿನ ಕಂಡಿಕೆಗಳು 26 ಮತ್ತು 30 ರಲ್ಲಿ ವಿವರಿಸಿದ ಕಾರಣಗಳು ಮತ್ತು (ಅ) ತಾಒಹುಮಾಸ ಸಂಘಗಳು ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯ ಅಂಗಸಂಸ್ಥೆಗಳಾದ್ದರಿಂದ (ಬ) (ಅನುಬಂಧ–1) ರಲ್ಲಿ ಕೃಷಿ ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು ಇವರು ತಾಒಹುಮಾಸ ಸಂಘಗಳನ್ನು ಕೃಷಿ ಪರಿಕರಗಳು, ಗೊಬ್ಬರ ಇತ್ಯಾದಿ ಖರೀದಿಗೆ Rate Contract ಒಪ್ಪಂದವನ್ನು ಖಾಸಗಿಯವರು ಮಾಡಿಕೊಳ್ಳಲು ತಾಕೃಒಹುಮಾ ಸಂಘಗಳನ್ನು ಅಧಿಕೃತಗೊಳಿಸಿದ ಕಾರಣ (ಕ) ಸದರಿ ಸಂಘಗಳು ಲಾಭಾಂಶದ ಗುರಿ ಹೊಂದದೇ ರೈತರಿಗೆ ಮತ್ತ ಇತರ ಖರೀದಿದಾರರಿಗೆ ಕೃಷಿ ಪರಿಕರಗಳು/ಗೊಬ್ಬರ ಇತ್ಯಾದಿ ಮಾರಾಟ ಮಾಡುವುದುನ್ನು (ಡ) ತಾಒಹುಮಾಸ ಸಂಘಗಳಲ್ಲಿ ದರಪಟ್ಟಿ ನೀಡುವ ವಾಡಿಕೆ ಇಲ್ಲದಿರುವುದು ಖಾಸಗಿ ಗೊಬ್ಬರ ವ್ಯಾಪಾರಸ್ಥರಿಗಿಂತ ಎಲ್ಲಾ ಸಂದರ್ಭದಲ್ಲಿ ಸಹಕಾರಿ ಸಂಘಗಳಲ್ಲಿ ಕೃಷಿ ಪರಿಕರಗಳು / ಗೊಬ್ಬರ ಇತ್ಯಾದಿ ದರವರು ಕಡಿಮೆ ಇರುವುದನ್ನು ಪರಿಗಣನೆಗೆ ತೆಗೆದುಕೊಂಡು ರೂ.17,270/– ರ ಮೊತ್ತದ ರಾಸಾಯನಿಕ/ಗೊಬ್ಬರವನ್ನು ತಾಒಹುಮಾ ಸಂಘ, ನಿಯಮಿತ ಇವರಿಂದ ಖರೀದಿಸಿರುವ ಕುರಿತಾದ ಆಕ್ಷೇಪಿತ ಮೊತ್ತವನ್ನು ಕೈಬಿಡುವಂತೆ ಕೋರಿದೆ

47	ಕೋಟೇಶನ್ ಕರೆಯದೇ ನೇರವಾಗಿ ಸರಕು ಖರೀದಿಸಿದ ಕುರಿತು. (ಕೃಷಿ ಸಂಶೋಧನಾ ಕೇಂದ್ರ ಪ್ರಭುನಗರ ಕಂ.ಸಂ.13) ಲೆಕ್ಕಶೀರ್ಷಿಕೆ 3583/501 ರಡಿ ಎಲ್.ಡಿ.ಪಿ.ಇ 5"*8" ಪಾಲಿಥಿನ್ ಚೀಲಗಳನ್ನು ಮತ್ತು ಬ್ಲಾಕ್ ಸೀಟಗಳನ್ನು ಮೆ: ಪ್ರಗತಿ ಇಂಡಸ್ಟ್ರಿಜ್, ದಾವಣಗೆರೆ ಇವರಿಂದ ಬಿಲ್ಲ ಸಂ. 142 / 17.01.2018 ರಅನ್ವಯ ಮೊತ್ತ ರೂ. 84609.00 ಗಳಷ್ಟು ಕೋಟೇಶನ್ ಕರೆಯದೇ ನೇರವಾಗಿ ಖರೀದಿಸಿದ್ದು ಇದು, ಸಾದಿಲ್ವಾರು ವೆಚ್ಚ ಕೈಪಿಡಿ 1958ರ ನಿಯಮ 55(49)ರ ಪ್ರಕಾರ ಹಾಗೂ ಸರಕಾರದ ಆದೇಶ ದಿ: 21.06.2012 ರ ಪ್ರಕಾರ ರೂ 5000.00 ಹಾಗೂ ಮೇಲ್ಪಟ್ಟ ಸರಕುಗಳ ಖರೀದಯನ್ನು ದರಪಟ್ಟಿ ಕರೆದು ಖರೀದಿಸುವುದು ಕಡ್ಡಾಯವಾಗಿರುತ್ತದೆ. ಕಾರಣ ಈ ಕುರಿತು ಸೂಕ್ತ ದಾಖಲೆಗಳೊಂದಿಗೆ ಅನುಸರಣೆ ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ 03 ದಿನಾಂಕ 24.09.2019 ನೀಡಿದ್ದು ಸಲ್ಲಿಸಿದ ಅನುಸರಣೆಯಲ್ಲಿ 2016–17 ರಲ್ಲಿ ಈ ಕಚೇರಿಯಿಂದ ಕೋಟೆಶನ್ ಮೂಲಕವೇ ಸದರಿ ಪಾಲಿಥನ್ ಚೀಲಗಳನ್ನು ಖರೀದಿಸಲಾಗುತಿತ್ತು, ಕೃವಿವಿ ಆಂತರಿಕ ಲೆಕ್ಕ ಪರೀಶೋಧನಾ ವಿಭಾಗ ಮೌಖಿಕ ಸಲಹೆ ಮೇರೆಗೆ ಅರಣ್ಯ ಇಲಾಖೆ, ಧಾರವಾಡ ವಲಯ, ಧಾರವಾಡ ಇವರ ಅಧಿಕೃತ ಜ್ಞಾಪನಾ ಪತ್ರದನ್ವಯ ಖರೀದಿಸುವುದು ಇನ್ನು ಸೂಕ್ತ ಎಂದು ತಿಳಿಸಿದ ಹಿನ್ನಲೆಯಲ್ಲಿ ಸದರಿ ಎಲ್.ಡಿ.ಪಿ.ಇ 5"*8" ಪಾಲಿಥಿನ್ ಚೀಲಗಳನ್ನು ಮತ್ತು ಬ್ಲಾಕ್ ಸೀಟಗಳನ್ನು ಮೆ: ಪ್ರಗತಿ ಇಂಡಸ್ಟ್ರಿಜ್, ದಾವಣಗೇರೆ ಇವರಿಂದ ಬಿಲ್ಲ ಸಂ. 142 / 17.01.2018 ರಅನ್ವಯ ಮೋತ್ತ ರೂ. 84609.00 ಗಳಷ್ಟು ಸರಕಗಳನ್ನು, ಕರ್ನಾಟಕ ಸರಕಾರದ. ಅರಣ್ಯ ಇಲಾಖೆ, ಧಾರವಾಡ ವಲಯ, ಧಾರವಾಡ ಇವರದ ಅಧಿಕೃತ ಜ್ಞಾಪನಾ ಪತ್ರ ಸಂ. ಎ2/ ಬಿಜಿಟಿ/ ಪಿಬಿಎಸ್–ಟೆಂಡರ್/ ಸಿಆರ್–20/ 2017–18/ 822, ದಿ: 19.06.2017ರನ್ವಯ ಖರೀದಿಸಲಾಗಿದೆ ಹೊರತು ಸಾದಿಲ್ವಾರು ವೆಚ್ಚ ಕೈಪಿಡಿ 1958ರ ನಿಯಮ 55(49)ರ ಪ್ರಕಾರ ಹಾಗೂ ಸರಕಾರದ ಆದೇಶ ದಿ: 21.06.2012ನ್ನು ಉಲ್ಲಂಘಿಸುವ ಪ್ರಯತ್ನವನ್ನು ಮಾಡಲಾಗಿಲ್ಲ. ಅದ್ಯಾಗೂ ಸದರಿ ಅಧಿಕೃತ ಜ್ಞಾಪನಾ ಪತ್ರದನ್ವಯ ಖರೀದಿಸುವುದು ಆಕ್ಷೇಪಣೆಗೆ ಕಾರಣವಾಗುವುದರಿಂದ, ಭವಿಷ್ಯದಲ್ಲಿ ಕೋಟೇಶನ್ ಮುಖಾಂತರವೇ ಸದರಿ ಸರಕು ಖರೀದಿಸಲಾಗುವುದು. ಎಂದು ತಿಳಿಸಿದ್ದು ಇನ್ನು ಮುಂದೆ ದರಪಟ್ಟಿ ಮೂಲಕ ಖರೀದಿ ಪ್ರಕ್ರಿಯೆ ನಿರ್ವಹಿಸಲು ಸೂಚಿಸಿದೆ.	47 ತಮ್ಮ ವಿಚಾರಣಾ ಪತ್ರ ಸಂ. 3, ದಿ: 24.09.2019 ರ ಆಕ್ಷೇಪಣೆಯನ್ನು ಪರಿಶೀಲಸಲಾಗಿ, ಸನ್ 2016–17 ರಲ್ಲಿ ಈ ಕಚೇರಿಯಿಂದ ಕೋಟೆಶನ್ ಮೂಲಕವೇ ಸದರಿ ಪಾಲಿಥನ್ ಚೀಲಗಳನ್ನು ಖರೀದಿಸಲಾಗುತಿತ್ತು, ಕೃವಿವಿ ಆಂತರಿಕ ಲೆಕ್ಕ ಪರೀಶೋಧನಾ ವಿಭಾಗ ಮೌಖಿಕ ಸಲಹೆ ಮೇರೆಗೆ ಅರಣ್ಯ ಇಲಾಖೆ, ಧಾರವಾಡ ವಲಯ, ಧಾರವಾಡ ಇವರ ಅಧಿಕೃತ ಜ್ಞಾಪನಾ ಪತ್ರದನ್ವಯ ಖರೀದಿಸುವುದು ಇನ್ನು ಸೂಕ್ತ ಎಂದು ತಿಳಿಸಿದ ಹಿನ್ನಲೆಯಲ್ಲಿ ಸದರಿ ಎಲ್.ಡಿ.ಪಿ.ಇ 5"*8" ಪಾಲಿಥಿನ್ ಚೀಲಗಳನ್ನು ಮತ್ತು ಬ್ಲಾಕ್ ಸೀಟಗಳನ್ನು ಮೆ: ಪ್ರಗತಿ ಇಂಡಸ್ಟ್ರಿಜ್, ದಾವಣಗೇರೆ ಇವರಿಂದ ಬಿಲ್ಲ ಸಂ. 142 / 17.01.2018 ರಅನ್ವಯ ಮೋತ್ತ ರೂ. 84609.00 ಗಳಷ್ಟು ಸರಕಗಳನ್ನು, ಕರ್ನಾಟಕ ಸರಕಾರದ. ಅರಣ್ಯ ಇಲಾಖೆ, ಧಾರವಾಡ ವಲಯ, ಧಾರವಾಡ ಇವರದ ಅಧಿಕೃತ ಜ್ಞಾಪನಾ ಪತ್ರ ಸಂ. ಎ2/ ಬಿಜಿಟಿ/ ಪಿಬಿಎಸ್–ಟೆಂಡರ್/ ಸಿಆರ್–20/ 2017–18/ 822, ದಿ: 19.06.2017ರನ್ವಯ ಖರೀದಿಸಲಾಗಿದೆ ಹೊರತು ಸಾದಿಲ್ವಾರು ವೆಚ್ಚ ಕೈಪಿಡಿ 1958ರ ನಿಯಮ 55(49)ರ ಪ್ರಕಾರ ಹಾಗೂ ಸರಕಾರದ ಆದೇಶ ದಿ: 21.06.2012ನ್ನು ಉಲ್ಲಂಘಿಸುವ ಪ್ರಯತ್ನವನ್ನು ಮಾಡಲಾಗಿಲ್ಲ. ಅದ್ಯಾಗೂ ಸದರಿ ಅಧಿಕೃತ ಜ್ಞಾಪನಾ ಪತ್ರದನ್ವಯ ಖರೀದಿಸುವುದು ಆಕ್ಷೇಪಣೆಗೆ ಕಾರಣವಾಗುವುದರಿಂದ, ಭವಿಷ್ಯದಲ್ಲಿ ಕೋಟೇಶನ್ ಮುಖಾಂತರವೇ ಸದರಿ ಸರಕು ಖರೀದಿಸಲಾಗುವುದು. ಕಂಡಿಕೆಯಲ್ಲಿ ನೀಡಲಾದ ಸೂಚನೆಗಳನ್ನು ಮುಂದಿನ

		ದಿನಗಳಲ್ಲಿ ಅನುಸರಿಸಲಾಗುವುದು.

48

Konark enterprises ಅವರಿಂದ ಕೊಟೇಶನ್ ಆಧಾರದ ಮೇಲೆ ಖರೀದಿ ಕುರಿತು.(ಕೃಷಿ ಸಂಶೋಧನಾ ಕೇಂದ್ರ ಹೆಬ್ಬಳ್ಳಿ ಕಂ.ಸಂ.21)

2017–18 ನೇ ಲೆಕ್ಕ ಪರಿಶೋಧನೆ ವೇಳೆ ಪರಿಶೀಲಿಸಲಾಗಿ ಕೊಟೇಶನ್ ಆಧಾರದ ಮೇಲೆ konark enterprises ಅವರಿಂದ ಒಟ್ಟು **858354** ರೂಗಳ ಕೆಮಿಕಲ್ ಕಿಟ್‌ಗಳನ್ನು ಖರೀದಿ ಮಾಡಿರುವುದು ಕಂಡುಬರುತ್ತದೆ. ಖರೀದಿಯ ಕೊಟೇಶನ್‌ಗಳನ್ನು ಪರಿಶೀಲಿಸಲಾಗಿ ಎಲ್ಲ ಖರೀದಿಯ ಕೊಟೇಶನ್‌ಳು **1)** Konark enterprise 2)Bhavani enterprises 3)medsoft system ಅವರಿಂದ ಇರುತ್ತವೆ. ಕೊಟೇಶನ್ ಕರೆಯುವಾಗಲೂ **3** ಕೊಟೇಶನ್‌ದಾರರಿಗೆ ಆಹ್ವಾನ ನೀಡಿರುವುದು ಕಂಡುಬರುತ್ತದೆ. ಮೇಲ್ನೋಟಕ್ಕೆ ಕೊಟೇಶನ್‌ಗಳನ್ನು ಪರಿಶೀಲಿಸಲಾಗಿ Konark enterprises ಅವರಿಂದ ಖರೀದಿಸಲೆಂದೇ ಕೊಟೇಶನ್‌ಗಳನ್ನು ಕರೆದಿರುವುದು ಕಂಡುಬರುತ್ತದೆ. ಅದರಂತೆ ಒಂದು ವರ್ಷಕ್ಕೆ ಬೇಕಾಗುವ KIT ಗಳನ್ನು ಅಂದಾಜು ಮಾಡಿ KTPP ACT 1999 & RULE 2000 ಪ್ರಕಾರ ಟೆಂಡರ್ ಕರೆಯುವುದು ಕಡ್ಡಾಯವಾಗಿರುತ್ತದೆ. ಆದರೆ ಟೆಂಡರ್ ಕರೆಯದೆ ಕೊಟೇಶನ್ ಆಧಾರದ ಮೇಲೆ ಒಟ್ಟು **858354=00** ರೂಗಳ ಕಿಟ್‌ಗಳನ್ನು ಖರೀದಿಸಿರುವುದು ಕಂಡುಬರುತ್ತದೆ. ವಿವರ ಈ ಕೆಳಗಿನಂತಿವೆ.

Item	Amount	Quantity
DGH030DESIGNE NQL 96 ELIS KIT CRY AC/AB		30
DGH070DESIGNE NQL 96 ELIS KIT CRY AC/AB		40
DGH070DESIGNE NQL 96 ELIS KIT CRY AC/AB	19992	3
DGH070DESIGNE NQL 96 ELIS KIT CRY AC/AB	18547	3
DGH070DESIGNE NQL 96 ELIS KIT CRY AC/AB	13709	2
DGH070DESIGNE NQL 96 ELIS KIT CRY AC/AB	12365	2

48 ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಸನ್ **2017–18** ರಲ್ಲಿ ಕೋಟೇಶನ್ ಆಧಾರದ ಮೇಲೆ ಕೋನಾರ್ಕ ಎಂಟರ್‌ಪ್ರೈಜಸ್ ಇವರಿಂದ ಒಟ್ಟು ರೂ **8,58,354/–** ಗಳ ಕೆಮಿಕಲ್ ಕಿಟ್‌ಗಳನ್ನು ಖರೀದಿಸಲಾಗಿದೆ.

- ದರಲ್ಲಿ ಕ್ರಮ ಸಂ: **1** ರಿಂದ **6,** ಕ್ರಸಂ: **8** ರಿಂದ **17** ಹಾಗೂ ಕ್ರಸಂ: **21** ರಿಂದ **23** ರವರೆಗೆ Desigen kit ಗಳನ್ನು Konark enterprise ಇವರ ಮುಖಾಂತರ ಖರೀದಿ ಮಾಡಲಾಗಿದ್ದು, ಕೋಟೆಶನ್ ಆಧಾರಿತವಾಗಿ ಅತೀ ಕಡಿಮೆ ದರದಲ್ಲಿ ಪೂರೈಸಿರುತ್ತಾರೆ. ಈ ಕಿಟ್‌ಗಳು ರೇಟ ಕಾಂಟ್ರಾಕಟ್ ಆಧಾರಿತವಾಗಿರುವುದಿಲ್ಲ ಆದ್ದರಿಂದ ಕೋಟೆಶನ್ ಮೂಲಕ ಖರೀದಿಸಲಾಗಿದೆ.
- ಕಿಟ್‌ಗಳನ್ನು ಅತೀ ತಣ್ಣನೆಯ ವಾತಾವರಣದಲ್ಲಿ ಸಾಗಿಸುವುದು ಹಾಗೂ ಶೇಖರಿಸಬೇಕಾಗಿದ್ದು ಇವುಗಳ ಉಪಯೋಗವು ಕೂಡ ಕಡಿಮೆ ಸಮಯದಲ್ಲಿ ಮಾಡಬೇಕಾಗಿರುತ್ತದೆ.
- ವುಗಳ ಖರೀದಿಯನ್ನು ವಿವಿಧ ಬೆಳೆ ಹಂತದಲ್ಲಿ ಮಾಡಬೇಕಾಗಿದ್ದು ಸಂಖ್ಯೆಯನ್ನು ಮೋದಲೆ ತಿಳಿಯುವುದು ಸಾಧ್ಯವಾಗುವುದಿಲ್ಲ ಆದ್ದರಿಂದ

DGH070DESIGNE NQL 96 ELIS KIT CRY AC/AB	82208	5
DGH070DESIGNE NQL 96 ELIS KIT CRY AC/AB		40
OLIGO	14335	556
OLIGO	74704	5
OLIGO		40
OLIGO	18547	3
OLIGO	19992	3
OLIGO	82992	15
OLIGO	92064	15
OLIGO	30912	5
OLIGO	33320	5
OLIGO	38539	3
OLIGO		3
OLIGO	36456	31
OLIGO	39984	6
OLIGO		2
OLIGO		1
OLIGO		1
OLIGO		1
DRY ICE	33889	1
DRY ICE	10778	10
DRY ICE	3363	9
DRY ICE	22176	9
DRY ICE	37094	6
	39928	31
	858354	

ಈ ಕುರಿತು ದಾಖಲೆ ಒದಗಿಸಲು ಲೆಕ್ಕ ವಿಚಾರಣಾ ಪತ್ರ 9 (ಅ)ದಿನಾಂಕ 30.07.2019 ವಿಚಾರಿಸಲಾಗಿ ನೀಡಿದ ಅನುಸರಣೆಯಲ್ಲಿ ವಿಭಾಗದವರು ಅಗತ್ಯಕ್ಕೆ ಅನುಸಾರವಾಗಿ ಕೊಟೇಶನ್ ಆಧಾರದ ಮೇಲೆ ಖರೀದಿಸಲಾಗಿದೆ ಎಂದು ತಿಳಿಸಿದ್ದು ಇನ್ನು ಮುಂದೆ ದರಪಟ್ಟಿ ಮೂಲಕ ಖರೀದಿ ಪ್ರಕ್ರಿಯೆ ನಿರ್ವಹಿಸಲು ಸೂಚಿಸಿದೆ.

ಇವುಗಳನ್ನು ಬೇಡಿಕೆ ಆಧಾರದ ಮೇಲೆ ಸೂಕ್ತ ಅಧಿಕಾರಿಗಳಿಂದ ಮಂಜೂರಾತಿ ಪಡೆದ ನಂತರವೆ ಖರೀದಿಸಲಾಗಿದೆ ಇವರ ಬೇಡಿಕೇಯು ಬೇರೆ ಬೇರೆ ವಿಭಾಗಗಳಿಂದ ಇದ್ದು ಹಾಗೂ ಬೇರೆ ಬೇರೆ ಲೆಕ್ಕ ಶೀರ್ಷಿಕೆಯಡಿಯಲ್ಲಿ ಖರೀದಿಸಲಾಗಿದೆ.

- ಸಂ: 7, ಕ್ರಸಂ:18 ರಿಂದ 20 ರ ವರೆಗಿನ ರಸಾಯನಿಕಗಳನ್ನು ರೇಟ್ ಕಾಂಟ್ರಾಕ್ಟ ಮೂಲಕ ಖರೀದಿಸಲಾಗಿದ್ದು ಅದಕ್ಕೆ ಸಂಬಂಧಿಸಿದ ಪ್ರತಿಯನ್ನು ಲಗತ್ತಿಸಲಾಗಿದೆ.

- ೀಲಿನವುಗಳಿಗೆ ಸಂಬಂಧಿಸಿದ ಮಂಜೂರಾತಿ ಆದೇಶಗಳನ್ನು ಸೂಕ್ತ ಅಧಿಕಾರಿಗಳಿಂದ ಪಡೆದ ಪ್ರತಿಯನ್ನ ಲಗತ್ತಿಸಲಾಗಿದೆ.

ಆದ್ದರಿಂದ ಇದಕ್ಕೆ ಸಂಬಂಧಿಸಿದ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.

49 **ಸ್ಪರ್ಧಾತ್ಮಕ ದರಪಟ್ಟಿ ಮೂಲಕ ಖರೀದಿಸಿದ/ಪಡೆದ ಸರಕು/ಸೇವೆಗಳ ಸಂಗ್ರಹಣಾ ಪ್ರಕ್ರಿಯೆಯಲ್ಲಿ ಕಂಡು ಬಂದ ನ್ಯೂನತೆಗಳ ಕುರಿತು.**

(ಕೃಷಿ ಸಂಶೋಧನಾ ಕೇಂದ್ರ ಮುಗದ ಕಂ.ಸಂ.14)

ಕೃಷಿ ಸಂಶೋಧನಾ ಕೇಂದ್ರ ಮುಗದ 2017–18ನೇ ಸಾಲಿನಲ್ಲಿ ದರಪಟ್ಟಿಗಳ ಮೂಲಕ ವಿವಿಧ ಸರಕು/ಸೇವೆಗಳನ್ನು ಸಂಗ್ರಹಿಸಲಾಗಿದ್ದು, ದರಪಟ್ಟಿ ಪ್ರಕ್ರಿಯೆಯನ್ನು ಸಾದಿಲ್ವಾರು ವೆಚ್ಚ ಕೈಪಿಡಿ – 1958 ನಿಯಮಗಳ ನಿಯಮ 55(49)(ಎ), ಸರ್ಕಾರದ ಆದೇಶ ಸಂ:ಆಇ 01 ಟಿಸಿಇ 2012, ಬೆಂಗಳೂರು ದಿನಾಂಕ: 21–6–2012 ಹಾಗೂ ಸರ್ಕಾರದಿಂದ ಈ ಕುರಿತು ಕಾಲಕಾಲಕ್ಕೆ ಹೊರಡಿಸಿದ ಸುತ್ತೋಲೆಗಳಲ್ಲಿನ ನಿರ್ದೇಶನಗಳನ್ವಯ ನಿರ್ವಹಿಸದೇ ಇದ್ದು ಇಂತಹ ಅನಿಯಮಿತ ಖರೀದಿ/ಸಂಗ್ರಹ ಪ್ರಕ್ರಿಯೆ ಮೂಲಕ ಸಂಗ್ರಹಿಸಿದ, ಸರಕು/ಸೇವೆಗಳನ್ನು ಪಡೆದಿದ್ದು ವಿವರ ಈ ಕೆಳಗಿನಂತಿವೆ.

	Firm	Bill no/date	Item	Amount
1	Sangameshwar nursery DWD	2190/28.07.2017 25.07.2017	ಆಪೂಸ ಮಾವು	
2	Sri Mrituynjay seeds DWD	00023/28.07.2017	1) nomine gold 2) 24D 3) Gramaxone 4) Rain drop	
3	Sri Mrituynjay seeds DWD	00068/14.08.2017	1) Rice star 2) 2-4-D	
4	Renuka seeds DWD	54/21.08.17	1) 12 HDP pipe 2) 2 G1 Bend 3) G1 FLB 4) 2 PVC ELB 5) Solenim 6)Sholak 7) 2 PVC FTM	
5	Sri Mrituynjay seeds DWD	00095/12.09.17	1) Round up 5 ltr+1 2)Gramaxone	
6	Nikhil corporation DWD	465/16.01.18	Stationary	
7	ತಾಲ್ಲೂಕು ಹಾಲು ಒಕ್ಕಲುತನ ಹುಟ್ಟುವಳಿ ಧಾರವಾಡ	511/16.01.18	Ground nut cake	
8	Gurunath pawar DWD	28/07.03.2018	Rotter Blade	

49 ಕಂಡಿಕೆಯಲ್ಲಿ ಸೂಚಿಸಿದ ನಿದೇಶನಗಳನ್ನು ಕಟ್ಟು ನಿಟ್ಟಾಗಿ ಪಾಲಿಸಲಾಗುವುದು

ಆದ್ದರಿಂದ ಈ ಮೇಲಿನ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.

	9	ತಾಲ್ಲೂಕು ಹಾಲು ಒಕ್ಕಲುತನ ಹುಟ್ಟುವಳಿ ಧಾರವಾಡ	520/07.03.2018	1)DAP 2)Urea 3)MOP 4)20-20-0-13		14240
	10	Sri Mrituynjay seeds DWD	14/07.03.18	1) BAVSTION 2) TILT 3) MONOCROP PHASE 4) CONFORSOP ER 5) ROUNDUP		10840
	11	Renuka seeds DWD	135/17.03.18	1)2 STANDARD 2)2.5 MMV 3) 3LUSBLATOM TAPE		9288
				TOTAL		135652
	ಮೇಲಿನಂತೆ ರೂ. **135652** /– ಮೊತ್ತದ ಪ್ರಕರಣಗಳನ್ನು ವಿವರಿಸಿದ್ದು ಸದರೀ ನ್ಯೂನತೆಗಳ ಕುರಿತು ಸೂಕ್ತ ಸ್ಪಷ್ಟೀಕರಣ ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ **06** ದಿನಾಂಕ **27.09.2019** ಸಲ್ಲಿಸಿದ ಅನುಸರಣೆಯಲ್ಲಿ ಇನ್ನು ಮುಂದೆ ಹೀಗಾಗದಂತೆ ನೋಡಿಕೊಳ್ಳುವುದಾಗಿ ತಿಳಿಸಿದ್ದು ಇನ್ನು ಮುಂದೆ ದರಪಟ್ಟಿ ಮೂಲಕ ಖರೀದಿ ಪ್ರಕ್ರಿಯೆ ನಿರ್ವಹಿಸಲು ಸೂಚಿಸಿದೆ.						

	ಗೌರವ ಧನ	
50	**ಮೌಲ್ಯಮಾಪನ ಕಾರ್ಯಕ್ಕೆ ಬೋಧಕ ಸಿಬ್ಬಂದಿಗಳಿಗೆ ಸಂಭಾವನೆ ನೀಡಿರುವ ಕುರಿತು.** **(ಸ.ಹ.ನಿ–ವೈಯಕ್ತಿಕ ಖಾತೆ ಕಂ.ಸಂ.8)** Section 28 of Karnataka Education Act 1983 ಪ್ರಕಾರ ಮತ್ತು ಕರ್ನಾಟಕ ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿಗಳ ಪತ್ರ ಸಂಖ್ಯೆ ಇಡಿ/30/ಯು.ಎನ್.ಇ/2000 ದಿನಾಂಕ 11.08.2000 ಪ್ರಕಾರ ಪರೀಕ್ಷೆಗಳ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಸಂಭಾವನೆ ಪಾವತಿಸಲು ಅವಕಾಶವಿರುವುದಿಲ್ಲ ಮತ್ತು KCSR 28(B) ಟಿಪ್ಪಣಿ (1) ರ (A) ನಲ್ಲಿ No honoraria should be paid in request of any work which is fairly be regarded as part of the legitimate duties of the Government servent concerned ಎಂದು ಹೇಳಿದೆ ಇದಲ್ಲದೆ University of Agricultural Sciences Dharwad Act and statutes (as amended upto 31.07.2005 chapter 3 (22) The officers of the University shall not be offered nor shall they accept any remuneration for any work, in the university save such as may be provided for by the statutes or other orders regulating their salaries, allowances and other conditions of services ಎಂದು ಹೇಳಿದೆ. ಆದರೆ ದಾಖಲೆಗಳನ್ನು ಪರಿಶೀಲಿಸಲಾಗಿ ಪರೀಕ್ಷಾ ಸಂಭಾವನೆಯನ್ನು ನೀಡಿರುವುದು ಕಂಡುಬರುತ್ತದೆ ಈ ಕುರಿತು ಸೂಕ್ತ ವಿವರಣೆ ನೀಡಲು ಕೋರಿ ವಿಚಾರಣಾ ಪತ್ರ ಸಂಖ್ಯೆ–8 ದಿನಾಂಕ 11.06.2018 ನೀಡಿದ್ದು ಒದಗಿಸಿದ ಅನುಸರಣೆಯಲ್ಲಿ ಕೃಷಿ ಇಲಾಖೆ ಕರ್ನಾಟಕ ಸರ್ಕಾರ ಬೆಂಗಳೂರು ಇವರಿಗೆ ಅನುಮತಿ ಕೋರಿ ಪತ್ರವನ್ನು ಬರೆಯಲಾಗಿದೆ ಎಂದು ತಿಳಿಸಿದ್ದು ಸರ್ಕಾರದಿಂದ ಅನುಮತಿ ನೀಡಿದ ಪತ್ರ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿಲ್ಲ ಕಾರಣ ಮೇಲೆ ತಿಳಿಸಿದ ನ್ಯೂನ್ಯತೆಯ ಹಿನ್ನೆಲೆಯಲ್ಲಿ ರೂ **12,21,805=00** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.ವಿವರಗಳನ್ನು ಅನುಬಂಧ " 12 " ರಲ್ಲಿ ವಿವರಿಸಿದೆ.	**50** **1. Karnataka Education Act(KEA) 1983** ರಲ್ಲಿ ಕೃಷಿ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲಾದ ಸಂಸ್ಥೆಗಳಿಗೆ **Karnataka Education Act(KEA) 1983** ಅನ್ವಯಿಸುವುದಿಲ್ಲವೆಂದು **CHAPTER-I(iii)** ರಲ್ಲಿ ನಮೂದಿಸಲಾಗಿದೆ. **2** ಕೃಷಿ ವಿಶ್ವವಿದ್ಯಾಲಯ, ಧಾರವಾಡದ **Act & Statutes** ನಲ್ಲಿ **CHAPTER-I(iii) section (22)** ರ ಪ್ರಕಾರ ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಮಾತ್ರ ಸಂಭಾವನೆಯನ್ನು ನೀಡಬಾರದೆಂದು ತಿಳಿಸಲಾಗಿದೆ. ಪ್ರಸ್ತುತ ನೀಡಿರುವ ಮೌಲ್ಯಮಾಪನ ಸಂಭಾವನೆಯನ್ನು ಅಧಿಕಾರಿಗಳನ್ನು ಹೊರತು ಪಡಿಸಿ ಶಿಕ್ಷಕರಿಗೆ ಮಾತ್ರ ನೀಡಲಾಗುತ್ತದೆ. **3** ಕೃಷಿ ವಿಶ್ವವಿದ್ಯಾಲಯದಲ್ಲಿ ತನ್ನದೇ ಆದ **Act & Statutes** ಗಳನ್ನು ಅನುಸರಿಸಲಾಗುತ್ತಿರುವುದರಿಂದ **KCSR** ನಿಯಮಾವಳಿಗಳು ಅನ್ವಯವಾಗುವುದಿಲ್ಲ. ಆದ ಕಾರಣ ಸದರಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.

51 **ಹಾಜರಾತಿಯನ್ನು ದೃಢೀಕರಿಸದೆ ಅರೆಕಾಲಿಕ ಶಿಕ್ಷಕರಿಗೆ ಗೌರವ ಧನ ಪಾವತಿಸಿರುವ ಕುರಿತು.(ಕೃಷಿ ಮಹಾವಿದ್ಯಾಲಯ ವಿಜಯಪುರ ಕಂ.ಸಂ.28)**

2017–18 ನೇ ಸಾಲಿನ ಕೃಷಿ ಮಾಹಾವಿದ್ಯಾಲಯ ವಿಜಯಪುರ ಲೆಕ್ಕ ಪರಿಶೋಧನಾ ಅವಧಿಯಲ್ಲಿ ಲೆ.ಶಿ–**2032/310** ರಡಿ ಪಿಡಿಸಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಬಿಲ್ಲುಗಳಲ್ಲಿ ಅರೆಕಾಲಿಕ ಶಿಕ್ಷಕರಿಗೆ ಪ್ರತಿ ಗಂಟೆಗೆ **1000** ರಂತೆ ಏಕೀಕೃತ ಸಂಭಾವನೆ (consolidated remuneration) ನ್ನು ಪಾವತಿಸಲಾಗಿದೆ.

ಪಿಡಿಸಿ ಬಿಲ್.ಸಂ/ದಿನಾಂಕ	ಲೆಕ್ಕ ಶಿರ್ಷಿಕೆ	ಪಾವತಿಸಲಾದ ಮೊತ್ತ
109/17.11.17	**2032/310**	**47600**
108/17.11.17	**2032/310**	**47600**
222/17.01.18	**2032/310**	**18000**
221/17.01.18	**2032/310**	**37600**
220/17.01.18	**2032/310**	**56600**
219/17.01.18	**2032/310**	**56600**
	ಒಟ್ಟು	**264000**

ಈ ಮೇಲೆ ವಿವರಿಸಿದಂತೆ ಒಟ್ಟು ಮೊತ್ತ ರೂ **264000/–** ಗಳನ್ನು ಸಂಬಂಧಿಸಿದ ಅರೆಕಾಲಿಕ ಶಿಕ್ಷಕರಿಗೆ ಪಾವತಿಸಲಾಗಿತ್ತು. ಪ್ರತಿ ತಿಂಗಳು ಸಂಬಂಧಿಸಿದ ಅರೆಕಾಲಿಕ ಶಿಕ್ಷಕರ ಎಷ್ಟು ಗಂಟೆಗಳ ಭೋದನೆಯನ್ನು ನೀಡಿರುವ ಬಗ್ಗೆ ಯಾವುದೇ ಹಾಜರಾತಿ ದೃಢೀಕರಣ ಪ್ರಮಾಣ ಪತ್ರ ನೀಡಿರುವುದಿಲ್ಲ ಇದರಿಂದಾಗಿ ಶಿಕ್ಷಕರು ಎಷ್ಟು ಗಂಟೆ ಭೋದನೆ ನೀಡಿರುತ್ತಾರೆ ಎಂಬುದಕ್ಕೆ ಪ್ರತಿ ಮಾಹೆಗೆ ದೃಢೀಕರಣ ಇಲ್ಲದ ಹಿನ್ನಲೆಯಲ್ಲಿ ಈ ಕುರಿತು ಸೂಕ್ತ ದಾಖಲೆಗಳೊಂದಿಗೆ ಸ್ಪಷ್ಟೀಕರಣವನ್ನು ನೀಡುವಂತೆ ಕೋರಿ ಲೆಕ್ಕ ವಿಚಾರಣಾ ಪತ್ರ **9** ದಿನಾಂಕ **01.10.2019** ನೀಡಿದ್ದು ನೀಡಿದ ಅನುಸರಣೆಯಲ್ಲಿ ಇನ್ನು ಮುಂದೆ ಅರೆಕಾಲಿಕ ಶಿಕ್ಷಕರು ಪ್ರತಿ ತಿಂಗಳು ಎಷ್ಟು ಘಂಟೆ ಬೋಧನೆಯನ್ನು ನೀಡಿರುವ ಕುರಿತ ದೃಢೀಕರಣ ಪ್ರಮಾಣ ಪತ್ರವನ್ನು ಬಿಲ್ಲುಗಳಲ್ಲಿ ನಮೂದಿಸಲಾಗುವುದು ಎಂದು ತಿಳಿಸಿದ್ದು ಲೆಕ್ಕ ಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ ಕಾರಣ ರೂ **2,64,000/–** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

51 ಆಕ್ಷೇಪಣೆಯಂತೆ ಅರೆಕಾಲಿಕ ಶಿಕ್ಷಕರ ಹಾಜರಾತಿ ವಿವರವನ್ನು ಪ್ರತಿ ತಿಂಗಳು ಘಂಟೆಗಳ ಆದಾರದ ಮೇಲೆ ಭೋದನೆಯನ್ನು ನೀಡಿರುವ ಕುರಿತು ದೃಢೀಕರಣ ಪ್ರಮಾಣ ಪತ್ರವನ್ನು ನಮೂದಿಸಲಾಗಿರುವದು. ಆದ್ದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

	ಪ್ರಯಾಣ ಭತ್ಯೆ	
52	**ಲೆಕ್ಕ ಶೀರ್ಷಿಕೆ 6700/300 ಅಡಿ ಖರ್ಚು ಭರಿಸಿದ ವೋಚರಿನಲ್ಲಿ ಕಂಡುಬಂದ ನ್ಯೂನತೆ. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.46)** ಲೆಕ್ಕ ಶೀರ್ಷಿಕೆ 6700/300 ರಡಿ **Comptroller UAS DWD**ಇವರ**Sanction Order**ದಿ:05.01.2018 ರ ಆದೇಶದಲ್ಲಿ**Towards Payment Of Salary to teachers Of Krishnanagar Prathmik Shale UAS DWDand Transfer Of the said Amount to SB A/C No:10025447015 Of the School**ಇವರಿಗೆ ರೂ. 6,00,000.00 ಗಳಿಗೆ ಆರ್ಥಿಕ ಮಂಜೂರಾತಿ ನೀಡಿದ್ದು ಈ ಆದೇಶದ**REF 1) No.23/2017-18** ದಿ:26.12.2017 **2) Approval Of the HonorableVice Chancelleor UAS DWD**ದಿ: 04.01.2018 ರ ಪ್ರತಿಯನ್ನುಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಮುಂದುವರೆದು**K M Mallikarjunayya, Treasurer, KPS, DWD.** ಇವರು **Secretary to VC UAS Dharwad** ಹುದ್ದೆಯಲ್ಲಿದ್ದು ನೀಡಿದ**PAYEES Receipts** ಹಾಗೂ ಆರ್ಥಿಕ ಮಂಜೂರಾತಿ ನೀಡಿದ ಪ್ರತಿಗಳು ಮಾತ್ರ ಖರ್ಚು ಭರಿಸಿದ ಕಡತದಲ್ಲಿ ಲಭ್ಯವಿರುತ್ತದೆ. ಕಾರಣ ಇದಕ್ಕೆ ಸಂಬಂಧಿಸಿದ ನ್ಯೂನತೆಗಳು ಈ ಕೆಳಗಿನಂತಿವೆ. 1. ಲೆಕ್ಕ ಶೀರ್ಷಿಕೆ **6700 Reaserch Support Activities (Out Of Institutional Charges)** ಇದ್ದು ಪ್ರಾಥಮಿಕ ಶಾಲೆ ವೇತನಕ್ಕೆ ಖರ್ಚು ಭರಿಸಿದ ಬಗ್ಗೆ ವಿವರಣೆ ನೀಡುವುದು. 2. ಸದರಿ ಪ್ರಾಥಮಿಕ ಶಾಲೆಗೆ ಮಂಜೂರಾದ ಹುದ್ದೆಗಳ ದಾಖಲೆ ಒದಗಿಸಿರುವುದಿಲ್ಲ.. 3. ಸದರಿ ಪ್ರಾಥಮಿಕ ಶಾಲೆಯು ಯಾವ ವರ್ಷದಲ್ಲಿ ಪ್ರಾರಂಭವಾಗಿದ್ದು ಮತ್ತು ಸದರಿ ಉಳಿತಾಯ ಖಾತೆಯು ಯಾರದ್ದು ಸದರಿ ಖಾತೆಯು ಯಾವ ವಿಭಾಗದ ವ್ಯಾಪ್ತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿರುತ್ತದೆ. 4. ಸದರಿ ಪ್ರಾಥಮಿಕ ಶಾಲೆಯು ಯಾವ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಹೊಂದಿರುತ್ತದೆ ದಾಖಲೆ ಒದಗಿಸಿರುವುದಿಲ್ಲ. 5. ಸದರಿ ಪ್ರಾಥಮಿಕ ಶಾಲೆಯ ಖರ್ಚಿನ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಇದೂವರೆಗೂ ಒದಗಿಸದೇ ಇರುವುದಕ್ಕೆ ಕಾರಣಗಳನ್ನು ನಿರ್ದಿಷ್ಟ ಸ್ಪಷ್ಟೀಕರಣ ದಾಖಲೆಗಳೊಂದಿಗೆ ಅನುಸರಣೆ ನೀಡಲು ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರಸಂಖ್ಯೆ:27 ದಿನಾಂಕ: 14.01.2020 ನ್ನು ನೀಡಿದ್ದು ಪ್ರಾಥಮಿಕ ಶಾಲೆಯ ಖರ್ಚಿನ ವಿವರಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸಲು ಸೂಚಿಸಿದೆ.	**52** ಮುಂದಿನ ಲೆಕ್ಕ ಪರಿಶೋಧನೆಯ ಸಮಯದಲ್ಲಿ ಹಾಜರುಪಡಿಸಲಾಗುವುದು

	ಕಾಮಗಾರಿ ಬಿಲ್ಲುಗಳಲ್ಲಿ ಕಂಡು ಬಂದ ನ್ಯೂನ್ಯತೆಗಳು.	
53	**ಏಕ ಬಿಡ್ (single bid) ಅನ್ನು ಒಪ್ಪಿಕೊಂಡಿರುವ ಕುರಿತು.** **(ಆಸ್ತಿ ಅಧಿಕಾರಿಗಳ ಕಛೇರಿ ಕಂ.ಸಂ.19)** ಆಸ್ತಿ ಅಧಿಕಾರಿಗಳ ವಿಭಾಗದ **2017–18** ನೇ ಲೆಕ್ಕ ಪರಿಶೋಧನೆ ವೇಳೆ ಪರಿಶೀಲಿಸಲಾಗಿ ಏಕ್ ಬಿಡ್ ಅನ್ನು ಒಪ್ಪಿಕೊಂಡಿರುವುದು ಗಮನಿಸಲಾಗಿರುತ್ತದೆ. ಈ ರೀತಿ ಎರಡು ಟೆಂಡರ್‌ಗಳನ್ನು ಏಕ್ ಬಿಡ್ ಅನ್ನು ಅನುಮೋದಿಸಿ ಮಂಜೂರಾತಿ ನೀಡಿದ್ದು. KTPP ಕಾಯ್ದೆ **1999** ನಿಯಮ **2000** ದ ಮುಂದುವರೆದ ಸುತ್ತೋಲೆ ಸಂಖ್ಯೆ PWD 1359 SO/FC 2001(P-2) DTD 3RD DECEMBER 2002 R 3.1 ರಲ್ಲಿ ತಿಳಿಸಿದಂತೆ ಕಡಿಮೆ ಬೆಲೆ ಪಡೆಯುವ ಉದ್ದೇಶದಿಂದ ಟೆಂಡರ್ ಕರೆಯುತ್ತಿದ್ದು, ಮೂರಕ್ಕಿಂತ ಕಡಿಮೆ ಜನ ಬಾಗವಹಿಸಿದ್ದರೆ ಪುನರ್ ಟೆಂಡರ್ ಕರೆಯುವುದು ಮೊದಲ ಆದ್ಯತೆಯಗಿರಬೇಕು. ಅದರಂತೆ	**53** ಕೃಷಿ ವಿಶ್ವವಿದ್ಯಾಲಯದ ಅನುಮೋದನೆಯೊಂದಿಗೆ **1) Farm development works (pipe line connection and sheep shed work) KVK Hanumanamatti and (2) Repair and renovation works to KVK office building at KVK Hanumanamatti** ಕಾಮಗಾರಿಗಳನ್ನು ಅವಶ್ಯವಿರುವುದರಿಂದ ಟೆಂಡರ್ ಮೂಲಕ ಕೈಗೆತ್ತಿಕೊಳ್ಳಲಾಗಿದ್ದು ಶ್ರೀ ಎನ್.ಅಜ್ಜಪ್ಪ ಗುತ್ತಿಗೆದಾರರು ಗಂಗಾವತಿ ಒಬ್ಬರೇ ಭಾಗವಹಿಸಿದ್ದರು. ಕೃಷಿ ವಿಜ್ಞಾನ ಕೇಂದ್ರದ ಅನುದಾನವನ್ನು ನಿಗದಿತ ಸಮಯದಲ್ಲಿ ವೆಚ್ಚ ಮಾಡಬೇಕಾಗಿದ್ದರಿಂದ ಮತ್ತು ಮತ್ತೊಮ್ಮೆ ಟೆಂಡರು ಕರೆದಲ್ಲಿ ಈಗ ನಮೂದಿಸಿರುವ ದರ ಶೇ.–**16.24** ಮತ್ತು ಶೇ.(–)**16.27** ಸಿಗುವ ಸಂದರ್ಭಗಳು ಇರುವುದಿಲ್ಲಾ. ಕೆಟಿಟಿಪಿ ಕಾಯ್ದೆ **1999** ನಿಯಮ **2000**ರ ಮುಂದುವರಿದ ಸುತ್ತೋಲೆ ಸಂ.**PWD/1359/SO/FC 2001 (P-S) dtd.3.12.2000** ರ **3.1**ರಲ್ಲಿ ತಿಳಿಸಿದಂತೆ ಏಕಬಿಡ್ ನ್ನು ಒಪ್ಪಬೇಕಾದ ಅನಿವಾರ್ಯ ಸಂದರ್ಭಗಳಲ್ಲಿ ಶೇ.5 ಕ್ಕಿಂತ ಹೆಚ್ಚಿನ ಮೊತ್ತಕ್ಕೆ ಬಿಡ್ ಮಾಡಿದ ಕಾಮಗಾರಿಗಳನ್ನು ನೆಗೊಷಿಯೆಷನ್ ಮಾಡಬೇಕೆಂದಿದೆ. ಆದರೆ ಈ ಎರಡು ಕಾಮಗಾರಿಗಳಲ್ಲಿ ಗುತ್ತಿಗೆದಾರರು ಅಂದಾಜು ಪತ್ರಿಕೆ ಮೊತ್ತಕ್ಕಿಂತ ಕ್ರಮವಾಗಿ ಶೇ.–**16.24** ಮತ್ತು ಶೇ.(–)**16.27** ರಷ್ಟು ಕಡಿಮೆ ದರ ನಮೂದಿಸಿರುವುದರಿಂದ ಈ ಗುತ್ತಿಗೆದಾರರ ಟೆಂಡರ್‌ನ್ನು ಕೃಷಿ ವಿಶ್ವವಿದ್ಯಾಲಯದ ಅನುಮೋದನೆಯೊಂದಿಗೆ ಸ್ವೀಕರಿಸಿ ಆಜ್ಞಾಪತ್ರ ನೀಡಲಾಗಿದೆ ಅಲ್ಲದೇ ಕೆಟಿಟಿಪಿಪಿ ಕಾಯ್ದೆಯಲ್ಲಿ ಏಕ್ ಬಿಡ್ ಟೆಂಡರನ್ನು ಸ್ವೀಕರಿಸುವ/ ಸ್ವೀಕರಿಸದೇ ಇರುವ ಕುರಿತು ಯಾವುದೇ ಉಲ್ಲೇಖ ಇರುವುದಿಲ್ಲ. ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

	ಟೆಂಡರ್–1	ಟೆಂಡರ್–2
ಟೆಂಡರುದಾರನ ಹೆಸರು	ಎನ್.ಅಜ್ಜಪ್ಪಾ	ಎನ್.ಅಜ್ಜಪ್ಪಾ
ಕೆಲಸದ ಹೆಸರು	ಫಾರ್ಮ್ ಡೆವಲಪಮೆಂಟ್ ಹನುಮನಮಟ್ಟಿ	ರಪೇರಿ & ರಿನೊವೇಷನ್ ಕೃವಿಕೇಂ ಹನುಮನಮಟ್ಟಿ
ಆಡಳಿತ ಮಂಜೂರಾತಿ ಸಂಖ್ಯೆ	EO/DB/WO/36/17+18	–
ತಾಂತ್ರಿಕ ಮಂಜೂರಾತಿ ಸಂಖ್ಯೆ	ಕೃವಿವಿ/ಆಅಕ/ಕಾಮಗಾರಿ/ತಾಂ.ಮಂ–**2016–17**	–
ಕಾಮಗಾರಿ ಪ್ರಾರಂಭಿಸಲು ನಿಗದಿತ ದಿನಾಂಕ	**16.08.2017**	**16.08.2017**
ಕಾಮಗಾರಿಗೆ ನಿಗದಿಪಡಿಸಿದ ಕಾಲಾವದಿ	**1** ತಿಂಗಳು	**2** ತಿಂಗಳು
ಕಾಮಗಾರಿ ಮುಕ್ತಾಯಗೊಳಿಸಬೇಕಾದ ದಿನಾಂಕ	**08.09.2017**	**15.10.2017**
ಗುತ್ತಿಗೆದಾರ ನಮೂದಿಸಿದ ಶೇಕಡಾವಾರು	(–)**16.24**%	(–)**16.27**%
ಕಾಮಗಾರಿ ಗುತ್ತಿಗೆಯ ಮೊತ್ತ	**169691**	**416329**
ಶಾರ್ಟ್ ಟರ್ಮ್ ಟೆಂಡರ್ ನೋಟಿಪಿಕೇಶನ್ ಹೆಸರು	EO/DB/TN/e-pro/2016-17	EO/DB/TN/e-pro/106/2016-17

ಮೇಲೆ ಸೂಚಿಸಿದ ಕಾಮಗಾರಿಗಳಲ್ಲಿ ಈ ನಿಯಮದ ಉಲ್ಲಂಘನೆಯಾಗಿದ್ದು, ಈ ಕುರಿತು ಸೂಕ್ತ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂ 08 ದಿನಾಂಕ 10.07.2019 ನೀಡಿದ ಅನುಸರಣೆಯಲ್ಲಿ ಸದರ ಕಾಮಗಾರಿಗಳಿಗೆ ಕರೆದ ಟೆಂಡರ್‌ನಲ್ಲಿ ಗುತ್ತಿಗೆದಾರರು ಅಂದಾಜು ಪತ್ರಿಕೆ ಮೊತ್ತಕ್ಕಿಂತ ಕ್ರಮವಾಗಿ ಶೇ –16.24 ಮತ್ತು ಶೇ –16.27 ರಷ್ಟು ಕಡಿಮೆ ದರ ನಮೂದಿಸಿದ್ದು ಮತ್ತೊಮ್ಮೆ ಟೆಂಡರ್ ಕರೆದಲ್ಲಿ ಇಂತಹ ದರಗಳು ಸಿಗುವುದು ಕಷ್ಟ ಎಂದು ತಿಳಿಸಿದ್ದು ಇನ್ನು ಮುಂದೆ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಸೂಚಿಸಿದೆ.

ಖರೀದಿ ಸಂಗ್ರಹ ವಿತರಣೆ

54 **ಲೆಕ್ಕ ಶೀರ್ಷಿಕೆ 1655/300 ಅಡಿಯಲ್ಲಿmaintainance of buildings of UAS ಖರೀದಿಸಿದ ಸಾಮಗ್ರಿ/ರಿಪೇರಿ ಕೆಲಸಕ್ಕಾಗಿ ಯಾವುದೇ ಬೇಡಿಕೆ ಪತ್ರ ಪಡೆಯದಿರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.57)**

ಲೆಕ್ಕಶೀರ್ಷಿಕೆ 1655/300 ಅಡಿಯಲ್ಲಿ ಚಿಕ್ಕ ಪುಟ್ಟ ರಿಪೇರಿ ಕಾರ್ಯಗಳಿಗಾಗಿ ಖರ್ಚು ಭರಿಸಿದ್ದು ಈ ರಿಪೇರಿಗಳಿಗೆ ಸಂಬಂಧಿಸಿದ ಕಟ್ಟಡಗಳ ಉಸ್ತುವಾರಿ ನೋಡಿಕೊಳ್ಳುವ ಸಿಬ್ಬಂದಿಯಿಂದ ಅಥವಾ ಉಸ್ತುವಾರಿ ನೋಡಿಕೊಳ್ಳುವ ಅಭಿಯಂತರರಿಂದ ಸಾಮಗ್ರಿಗಳ ಅವಶ್ಯಕತೆ ಕುರಿತು ಬೇಡಿಕೆ ಪತ್ರಗಳನ್ನು ಪಡೆಯದಿರುವ ಕುರಿತು ಸಂಬಂಧಿಸಿದ ವಿಭಾಗದ ಸಿಬ್ಬಂದಿಯನ್ನು ವಿಚಾರಿಸಲಾಗಿ ಕೇವಲday book of issueನಲ್ಲಿ ಕೆಲಸ ಪೂರ್ಣಗೊಂಡ ತರುವಾಯ ಸಹಿ ಹಾಕಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಯಾವುದೇ ರಿಪೇರಿ ಕಾರ್ಯವಿದ್ದಲ್ಲಿ ಅದಕ್ಕೆ ತಕ್ಕಂತೆ ಒಂದು ಬೇಡಿಕೆ ಪತ್ರದ ಅವಶ್ಯಕತೆ ಇರುತ್ತದೆ ಬೇಡಿಕೆ ಪತ್ರದ ಲಭ್ಯತೆ ಇಲ್ಲದೇ ಕೈಗೊಂಡ ಖರೀದಿ ಪ್ರಕ್ರಿಯೆ ಈ ಕೆಳಗಿನಂತಿವೆ.

ಕ್ರ.ಸಂ	ಬಿ.ಆರ್ ಸಂ	ಏಜನ್ಸಿ ಹೆಸರು	ಮೊತ್ತ
1	30389	Sharp lift system Invoice No 52/22.03.2018	49324
2	30388	Invoice No 53/22.03.2018	33040
3	28128	ಇಲೆಕ್ಟ್ರಿಕ್ ಸಾಮಗ್ರಿಗಳು	14491
4	28129	ಇಲೆಕ್ಟ್ರಿಕ್ ಸಾಮಗ್ರಿಗಳು	15841
5	27305	ಇಲೆಕ್ಟ್ರಿಕ್ ಸಾಮಗ್ರಿಗಳು	24623
6	13135	ಇಲೆಕ್ಟ್ರಿಕ್ ಸಾಮಗ್ರಿಗಳು	6798
7	21605	ಇಲೆಕ್ಟ್ರಿಕ್ ಸಾಮಗ್ರಿಗಳು	39144
8	12392	Vijay Agency Belagavi 21/14.09.2017	89376
9	6835	Pipe line repair manjunath state corporation DWD/ Invoice No-2610/31.01.2017	7784
10	18087	Aditya electricals bill.No 2420/01.11.2017	4403
11	14014	Pipe line ದುರಸ್ತಿ	23789

54 ಕರ್ನಾಟಕ ಸರಕು ಖರೀದಿಯಲ್ಲಿನ ಪಾರದರ್ಶಕತೆ ನಿಯಮಾವಳಿ 1999 & 2000 ರ ಅನುಸಾರ ಟೆಂಡರು ಪ್ರಕ್ರಿಯೆಯಲ್ಲಿ ಕ್ರಮ ಜರುಗಿಸಲಾಗುವುದು

12	30361	Sharp lift system bill No-51/22.03.2018	44840
13	27300	Pipe line ದುರಸ್ತಿ	6356
		ಒಟ್ಟು	359809

ಈ ರೀತಿ ಎರಡು ಟೆಂಡರ್‌ಗಳನ್ನು ಏಕ್ ಬಿಡ್ ಅನ್ನು ಅನುಮೋದಿಸಿ ಮಂಜೂರಾತಿ ನೀಡಿದ್ದು. KTPP ಕಾಯ್ದೆ **1999** ನಿಯಮ **2000** ದ ಮುಂದುವರೆದ ಸುತ್ತೋಲೆ ಸಂಖ್ಯೆ PWD 1359 SO/FC 2001(P-2) DTD 3RD DECEMBER 2002 R 3.1 ರಲ್ಲಿ ತಿಳಿಸಿದಂತೆ ಕಡಿಮೆ ಬೆಲೆ ಪಡೆಯುವ ಉದ್ದೇಶದಿಂದ ಟೆಂಡರ್ ಕರೆಯುತ್ತಿದ್ದು, ಮೂರಕ್ಕಿಂತ ಕಡಿಮೆ ಜನ ಬಾಗವಹಿಸಿದ್ದರೆ ಪುನರ್ ಟೆಂಡರ್ ಕರೆಯುವುದು ಮೊದಲ ಆದ್ಯತೆಯಗಿರಬೇಕು. ಅದರಂತೆ ಮೇಲೆ ಸೂಚಿಸಿದ ಕಾಮಗಾರಿಗಳಲ್ಲಿ ಈ ನಿಯಮದ ಉಲ್ಲಂಘನೆಯಾಗಿದ್ದು, ಈ ಕುರಿತು ಸೂಕ್ತ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂ **08** ದಿನಾಂಕ **10.07.2019** ನೀಡಿದ ಅನುಸರಣೆಯಲ್ಲಿ ಸದರ ಕಾಮಗಾರಿಗಳಿಗೆ ಕರೆದ ಟೆಂಡರ್‌ನಲ್ಲಿ ಗುತ್ತಿಗೆದಾರರು ಅಂದಾಜು ಪತ್ರಿಕೆ ಮೊತ್ತಕ್ಕಿಂತ ಕ್ರಮವಾಗಿ ಶೇ **–16.24** ಮತ್ತು ಶೇ **–16.27** ರಷ್ಟು ಕಡಿಮೆ ದರ ನಮೂದಿಸಿದ್ದು ಮತ್ತೊಮ್ಮೆ ಟೆಂಡರ್ ಕರೆದಲ್ಲಿ ಇಂತಹ ದರಗಳು ಸಿಗುವುದು ಕಷ್ಟ ಎಂದು ತಿಳಿಸಿದ್ದು ಇನ್ನು ಮುಂದೆ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಸೂಚಿಸಿದೆ.

55	**ವಾರ್ಷಿಕ ಲೆಕ್ಕ ಪತ್ರ ಮತ್ತು ಮೈಗ್ರೇಷನ್ ಸರ್ಟಿಪಿಕೇಟ ರಿಜಸ್ಟರ ವ್ಯತ್ಯಾಸ ಕುರಿತು.** **(ಕುಲಸಚಿವರ ಕಛೇರಿ–ಕಂ.ಸಂ.19)** **2017–18**ನೇ ಸಾಲಿನ ಮೈಗ್ರೇಷನ ರಿಜಸ್ಟರ ಪರಿಶೀಲಿಸಲಾಗಿ ಪದವಿ ಮೈಗ್ರೇಷನ್ ಪ್ರಮಾಣ ಪತ್ರ ಮತ್ತು ಇತರೆಗಳಿಂದ ಒಟ್ಟಾರೆ ರೂ.**1,05,650/–** ರೂಗಳು ಜಮೆಯಾಗಿರುವುದು ಕಂಡು ಬರುತ್ತದೆ ಮತ್ತು ವಾರ್ಷಿಕ ಲೆಕ್ಕಪತ್ರದ ಲೆಕ್ಕಶೀರ್ಷಕೆ **108**ರಲ್ಲಿ **1,84,770** ರೂಗಳು ಜಮೆಯಾಗಿರುವುದು ಕಂಡು ಬರುತ್ತದೆ. ವಾರ್ಷಿಕ ಲೆಕ್ಕಪತ್ರ ಮೊತ್ತ **1,84,770** ಮತ್ತು ಮೈಗ್ರೇಷನ ಸರ್ಟಿಫಿಕೇಟ ರಿಜಸ್ಟರನಲ್ಲಿ ಜಮೆಯಾದ ಮೊತ್ತ ರೂ.**1,05,650** ವ್ಯತ್ಯಾಸದ ಮೊತ್ತ ರೂ **79,120** ಈ ವ್ಯತ್ಯಾಸಕ್ಕೆ ಸೂಕ್ತ ವಿವರಣೆ ನೀಡಲು ಕೋರಿ ಲೆಕ್ಕ ಪತ್ರ ವಿಚಾರಣಾ ಪತ್ರಸಂಖ್ಯೆ: **06** ದಿನಾಂಕ:**03.08.2019** ನೀಡಲಾಗಿ ಯಾವುದೇ ಅನುಸರಣೆ ನೀಡಿರುವುದಿಲ್ಲ. ಪದವಿ ಮೈಗ್ರೇಷನ್ ಪ್ರಮಾಣ ಪತ್ರಗಳ ಫೀ ಮೊತ್ತಗಳ ಸ್ವೀಕೃತಿ ಕುರಿತು ಹಣಕಾಸು ವಿಭಾಗದೊಂದಿಗೆ ಮರುಸಮನ್ವಯ ಮಾಡಿಕೊಳ್ಳಲು ಸೂಚಿಸಿದೆ.	**55** **₹.79120** ವ್ಯತ್ಯಾಸದ ಮೊತ್ತಕ್ಕೆ ವಿವರವನ್ನು ಮುಂದಿನ ಲೆಕ್ಕ ತನಿಖೆಯಲ್ಲಿ ಹಾಜರುಪಡಿಸಲಾಗುವುದು.

56	**ವಾರ್ಷಿಕ ಭೌತಿಕ ಪರಿಶೀಲನೆ ವರದಿಯಲ್ಲಿ ಕಂಡು ಬಂದ ನ್ಯೂನ್ಯತೆ. (ವಿಸ್ತರಣಾ ನಿರ್ದೇಶಕರ ಕಛೇರಿ ಕಂ.ಸಂ.15)** **2017–18** ನೇ ಸಾಲಿನ Dead stock ಮತ್ತು ವಾರ್ಷಿಕ ಭೌತಿಕ ಪರಿಶೀಲನಾ ಪಟ್ಟಿ ಪರಿಶೀಲಿಸಲಾಗಿ ಆಡಳಿತಾಧಿಕಾರಿಗಳ ಕಛೇರಿಯ ಪತ್ರ ಸಂ–AO/Est-III/3060A/2017-18 dtd-27.01.2018 ರಂದು ನೀಡಿದ ಸುತ್ತೋಲೆ ಪ್ರಕಾರ ಶ್ರೀಮತಿ ಎ.ಎಸ್.ಪಾಟೀಲ ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿಗಳು ಕೃಷಿ ಮಹಾವಿದ್ಯಾಲಯ ವಿಜಯಪುರ ಇವರು ವಾರ್ಷಿಕ ಭೌತಿಕ ಪರಿಶೀಲನಾ ವರದಿ ನೀಡಿದ್ದು ಅನೇಕ ಸಾಮಗ್ರಿ ಸಲಕರಣೆಗಳು ಕಡಿಮೆ ಇರುವುದು ಕಂಡು ಬಂದಿದ್ದು ಇದು short hand over from smt U.R.Ajjodi ಇವರಿಂದ ರೂ **10,57,791=00** ಮೊತ್ತದ ಸಾಮಗ್ರಿಗಳು Dead stock ನಲ್ಲಿ ಕಡಿಮೆ ಇರುವುದು ಕಂಡುಬಂದಿದ್ದು ಈ ಕುರಿತು ಸೂಕ್ತ ಅನುಸರಣೆ ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ 5 ದಿನಾಂಕ **26.07.2019** ನೀಡಲಾಗಿದ್ದು ಸಲ್ಲಿಸಿದ ಅನುಸರಣೆಯಲ್ಲಿ ಆಡಳಿತಾಧಿಕಾರಿಗಳಿಗೆ ಮುಂದಿನ ಕ್ರಮ ಕೈಗೊಳ್ಳಲು ಮನವಿ ಮಾಡಲಾಗಿದೆ ಎಂದು ತಿಳಿಸಲಾಗಿದೆ. ಕಾರಣ ಡೆಡ್ ಸ್ಟಾಕ್‌ನಲ್ಲಿ ಕಡಿಮೆ ಇರುವ ವಸ್ತುಗಳ ಮೌಲ್ಯ ರೂ **10,57,791=00** ಗಳನ್ನು ವಸೂಲಾತಿಗೆ ಸೂಚಿಸಿದೆ. ಈ ಕುರಿತು ಅನುಬಂಧ **" 13 "** ರಲ್ಲಿ ವಿವರಿಸಿದೆ.	**56** Smt.U.R.Ajjodiಆಪ್ತ ಕಾರ್ಯದರ್ಶಿ, ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿ ಇವರಿಗೆ ವಿಸ್ತರಣಾ ನಿರ್ದೇಶನಾಲಯದ ಕಚೇರಿಯಲ್ಲಿ ಡೆಡ್ ಸ್ಟಾಕ್‌ಗಳನ್ನು ಕಡಿಮೆ ಹಸ್ತಾಂತರಿಸಿದ್ದು, ಸದರಿ ಕಡಿಮೆ ಹಸ್ತಾಂತರಿಸಿದ ಡೆಡ್ ಸ್ಟಾಕ್‌ಗಳನ್ನು ವಿಸ್ತರಣಾ ನಿರ್ದೇಶನಾಲಯಕ್ಕೆ ಒಪ್ಪಿಸುವದಕ್ಕೆ ಈ ಕಛೇರಿಯ ಪತ್ರ ಸಂ: ವಿನಿ/ಸಿಶಾ/**5035/2020–21,** ದಿನಾಂಕ **28.08.2020** ರನ್ವಯ ಆದಷ್ಟು ಬೇಗನೆ ಕಡಿಮೆ ಇರುವ ವಸ್ತುಗಳನ್ನು ಒಪ್ಪಿಸಲು ಸೂಚಿಸಲಾಗಿದೆ
57	**ಹೆಚ್ಚಿನ ಪ್ರಮಾಣದಲ್ಲಿ ಡಿಸೇಲ್ ಖರೀದಿ ಮಾಡಿ ಸಂಗ್ರಹದಲ್ಲಿ ಇಟ್ಟಿರುವ ಕುರಿತು .(ಮುಖ್ಯ ಸಂಶೋಧನಾ ಕೇಂದ್ರ ಕಂ.ಸಂ.26)** ಪ್ರಸಕ್ತ ವರ್ಷದ ಲೆಕ್ಕ ಪರಿಶೋಧನೆಯಲ್ಲಿ ಮುಖ್ಯ ಕೃಷಿ ಸಂಶೋಧನಾ ಕೇಂದ್ರ ಸ್ಟೋರ್‌ನ ರೆಜಿಸ್ಟರ್ ಪರಿಶೀಲಿಸಲಾಗಿ **2017–2018** ರ ಅವಧಿಯಲ್ಲಿ ವಿತರಣೆಗಾಗಿ ಮಾರ್ಚ್–**2018** ರ ಅಂತ್ಯಕ್ಕೆ **1263.91** ಲೀಟರ್ ಸಂಗ್ರಹಣೆಯಲ್ಲಿ ಬಾಕಿ ಉಳಿದಿದೆ. Storage of flammable liquids fire and explosion manual ಪ್ರಕಾರ The dangerous substances and explosive atmosphere Regulations 2002 (DSEAL) ಪ್ರಕಾರ It is recommended that maximum quantities that may be store in cabinets and bins are no more than 50 litre for extremely highly flammable and those flammable liquids with a flash point below the maximum ambient temperature of the work room/working area; and no more than 250 litre for other flammable liquids with a higher flash point of upto 55° C ಎಂದಿರುತ್ತದೆ. ಲೆಕ್ಕ ಪರಿಶೋಧನೆಯಲ್ಲಿ ಗಮನಿಸಿದಂತೆ ವರ್ಷಾಂತ್ಯಕ್ಕೆ **1263.91** ಲೀಟರ್ ಸಂಗ್ರಹಣೆಯಲ್ಲಿ ಬಾಕಿ ಇರುವುದು ಕಂಡು ಬರುತ್ತದೆ. ಈ ಕ್ರಮವು ಮೇಲಿನ ನಿಯಮದ ನೇರ ಉಲ್ಲಂಘನೆಯಾಗಿರುತ್ತದೆ. ಸದರಿ ಇಂಧನದ ದಾಸ್ತಾನಿಗೆ ಅವಘಡ ಸಂಭವಿಸಿದ್ದೇ ಆದಲ್ಲಿ ಸಂಸ್ಥೆಯವರು ಕೈಗೊಳ್ಳುವ ಸುರಕ್ಷತಾ/ಮುಂಜಾಗ್ರತಾ ಕ್ರಮಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕೋರಿ ಲೆಕ್ಕ ಪರಿಶೋಧನೆಗೆ ಸೂಕ್ತ ವಿವರಣೆ ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ **35** ದಿನಾಂಕ **23.07.2019** ರಲ್ಲಿ ವಿಚಾರಿಸಲಾಗಿ ನೀಡಿದ ಅನುಸರಣೆಯಲ್ಲಿ ಕೆಲವು ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಇನ್ನೂ ಹೆಚ್ಚಿನ ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡು ಶಿಲ್ಕಿನಲ್ಲಿ ಉಳಿಸಿಕೊಳ್ಳದೆ ಇರಲು ಸೂಚಿಸಿದೆ.	**57** ಮುಖ್ಯ ಸಂಶೋಧನಾ ಕೇಂದ್ರದ, ವ್ಯಾಪ್ತಿಯಲ್ಲಿ ವಿವಿಧ, ಶೈಕ್ಷಣಿಕ ಸಂಶೋಧನಾ, ಬೀಜೋತ್ಪಾದನಾ ಯೋಜನೆಗಳು ಬರುವುದರಿಂದ ಕೃಷಿ ಯಂತ್ರಗಳಾದ **15** ಟ್ರ್ಯಾಕ್ಟರ್, **1** ಜೆಸಿಬಿ,**1** ಕಂಬಾಯಿಡ್ ಹಾರ್ವೆಸ್ಟರ್, **1** ಬೊಲೆರೋ ಜೀಪ್, **1** ಟಾಟಾಎಸ ಹೀಗೆ **19** ವಾಹನಗಳಿದ್ದುಉಪಯೋಗಕ್ಕಾಗಿ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಡಿಜೆಲ್‌ನ್ನು ಸಂಗ್ರಹ ಮಾಡಲಾಗಿದೆಯಲ್ಲದೆ ಅದನ್ನು ದೈನಂದಿನ ಉಪಯೋಕ್ಕಾಗಿ ವಿವಿಧ ಯಂತ್ರೋಪಕರಣಗಳಿಗಾಗಿ ಉಪಯೋಗಿಸಲಾಗುತ್ತದೆ. **INDIAN PETROLEUM ACT, 1934 Section 7** ರ ಮೇರೆಗೆ **2500** ಲೀಟರಗಳಷ್ಟು ಡಿಜೆಲ್ ನ್ನು ಸಂಗ್ರಹಿಸಿ ಇಡಬಹುದಾಗಿರುತ್ತದೆ ಆದುದರಿಂದ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.

58	**ಹೆಚ್ಚಿನ ಪ್ರಮಾಣದಲ್ಲಿ ಡಿಸೇಲ್ ಖರೀದಿ ಮಾಡಿ ಸಂಗ್ರಹದಲ್ಲಿಟ್ಟಿರುವ ಕುರಿತು.(ಬಿ.ಎಸ್.ಪಿ/ಎನ್.ಎಸ್.ಪಿ ಕಂ.ಸಂ.18)** ಬೀಜ ಘಟಕದ ಸ್ಟೋರ್‌ನ ರಜಿಸ್ಟರ್ ಪರಿಶೀಲಿಸಲಾಗಿ **2017–18** ರ ಅವಧಿಯಲ್ಲಿ ಇಂಧನ ಖರೀದಿ ಮಾಡಿದ್ದು, ವಿತರಣೆಗಾಗಿ ಮಾರ್ಚ–**2018** ರ ಅಂತ್ಯಕ್ಕೆ **170** ಲೀಟರ್ ಸಂಗ್ರಹಣೆಯಲ್ಲಿ ಬಾಕಿ ಉಳಿದಿದೆ. Storage of flammable liquids fire and explosion manual ಪ್ರಕಾರ The dangerous substances and explosive atmosphere Regulations 2002 (HSD) ಪ್ರಕಾರ It is recommended that maximum quantities that may be store in cabinets and bins are no more than 50 liter for extremely highly flammable and those flammable liquids with a flash point below the maximum ambient temperature of the work room/working are; and no more than 250 liter for other flammable liquids with a higher flash point of upto 55°C ಎಂದಿರುತ್ತದೆ. ಲೆಕ್ಕಪರಿಶೋಧನೆಯಲ್ಲಿ ಗಮನಿಸಿದಂತೆ ವರ್ಷಾಂತ್ಯಕ್ಕೆ **170** ಲೀಟರ್ ಸಂಗ್ರಹಣೆಯಲ್ಲಿ ಬಾಕಿ ಇರುವುದು ಕಂಡುಬರುತ್ತದೆ. ಆದರೆ ಇನ್ನೂ ಹೆಚ್ಚಿನ ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡು ಶಿಲ್ಕಿನಲ್ಲಿ ಉಳಿಸಿಕೊಳ್ಳದೆ ಇರಲು ಸೂಚಿಸಿದೆ.	**58** ಕೃವಿವಿ, ಧಾರವಾಡದ ಬೀಜ ಘಟಕದಲ್ಲಿ **4** ಟ್ರ್ಯಾಕ್ಟರ್‌ಗಳಿದ್ದು, ಬೀಜ ಘಟಕದಡಿ ಇರುವ ಜಮೀನಿನಲ್ಲಿ ಅಗತ್ಯತೆಗನುಗುಣವಾಗಿ ವಿವಿಧ ಕೃಷಿ ಚಟುವಟಿಕೆಗಳನ್ನು ಕಾಲೋಚಿತವಾಗಿ ಕೈಗೊಳ್ಳಲು ಡೀಸಲ್ ಸಂಗ್ರಹಿಸಲಾಗುತ್ತಿತ್ತು ಮತ್ತು ಈ ಘಟಕದಡಿ ಕೋಲ್ಡ ಸ್ಟೋರೇಜ ಮತ್ತು ಬೀಜ ಗೋಡೌನ್‌ಗೆ ವಿದ್ಯುತ್ ಪೂರೈಸಲು ಆಗ **50** ಕೆವಿಎ ಸಾಮರ್ಥ್ಯದ (ಪ್ರತಿ ಘಂಟೆಗೆ **2** ಟನ್) ಡಿಸೇಲ್ ಜನರೇಟರ ಇದ್ದು, ಅದಕ್ಕೆ **1** ಘಂಟೆಗೆ ಸುಮಾರು **12** ರಿಂದ **13** ಲೀಟರ್‌ನಷ್ಟು ಡೀಸಲ್ ಬಳಕೆಯಾಗುತ್ತಿತ್ತು. ಏಪ್ರಿಲ್ ಮಾಹೆಯಲ್ಲಿ ವಿದ್ಯುತ್ ಪೂರೈಕೆಯು ಕಡಿತಗೊಂಡಾಗ, ಕೋಲ್ಡ ಸ್ಟೋರೇಜ್‌ಗೆ ವಿದ್ಯುತ್‌ನ್ನು ಸದರಿ ಜನರೇಟರ್ ಮೂಲಕವೇ ನಿರಂತರವಾಗಿ ಪೂರೈಸಲಾಗುತ್ತಿತ್ತು. ಹಾಗೊಂದು ವೇಳೆ ಇಂಧನದ ಕೊರತೆಯಿಂದಾಗಿ ಜನರೇಟರ್ ಬಳಕೆ ಸ್ಥಗಿತಗೊಂಡಲ್ಲಿ ಕೋಲ್ಡ ಸ್ಟೋರೇಜ್‌ನಲ್ಲಿನ ಲಕ್ಷಾಂತರ ರೂಪಾಯಿ ಮೌಲ್ಯದ ಕೃಷಿ ಉತ್ಪನ್ನವು ಅನುಪಯುಕ್ತಗೊಂಡು ಆರ್ಥಿಕ ನಷ್ಟ ಉಂಟಾಗುತ್ತಿತ್ತು. ಈ ಕಾರಣದಿಂದ ಇಂಧನವನ್ನು ಸಂಗ್ರಹಿಸಲಾಗಿತ್ತು ಮತ್ತು ದಾಸ್ತಾನನ್ನು ಅಗತ್ಯತೆಯ ಅನುಸಾರ ಬಳಕೆಮಾಡಲಾಗಿದೆ. ಅಲ್ಲದೇ, ಸದರಿ **170** ಲೀಟರ್ ಡೀಸಲ್ ಅನ್ನು ಒಂದೇ ಸೂರಿನಡಿ ಸಂಗ್ರಿಸದೇ, ಕೆಳಕಾಣಿಸಿದಂತೆ ವಿವಿಧ ವಿಭಾಗಗಳಲ್ಲಿ ಪ್ರತ್ಯೇಕವಾಗಿ ಸಂಗ್ರಹಿಸಲಾಗಿತ್ತು ಮತ್ತು ನಿಯಮಾನುಸಾರ ಅದನ್ನು ಬಳಕೆ ಮಾಡಿಕೊಳ್ಳಲಾಗಿದೆ. **50** ಲೀಟರ್ — ಬೀಜ ಉಗ್ರಾಣ–**1** **50** ಲೀಟರ್ — ಕೋಲ್ಡ ಸ್ಟೋರೇಜ್‌ನ ಮುಂಭಾಗದ ಕೊಠಡಿ **50** ಲೀಟರ್ — ಜನರೇಟರ್ ಕೊಠಡಿ

20 ಲೀಟರ್	ಬೀಜ ಸಂಸ್ಕರಣ ಗೋಡೌನ್

ಮುಂದುವರೆದು, ಭಾರತ ಸರ್ಕಾರದ**The Petroleum Act, 1934 (Act No.30 of 1934)** ರ (ಪ್ರತಿ ಲತ್ತಿಸಿದೆ) ಪರಿಚ್ಛೇದ (7) ರಲ್ಲಿ ಕೆಳಕಾಣಿಸಿದಂತೆ ನಮೂದಿಸಲಾಗಿದೆ.

7. No licence needed for transport or storage of limited quantities of petroleum Class B or petroleum Class C – Not withstanding anything contained in this Chapter, a person need not obtain a licence for the transport of storage of –

(i) petroleum Class B if the total quantity in his possession at any one place does not exceed two thousand and five hundred lires and none of it is contained in a receptacle exceeding one thousand litres in capcity; or

(ii) petroleum Class C if the total quantity in his possession at any one place does not exceed two fourty-five thousand litres and such petroleum is transported or stored in accordance with the reules made under section 4.

ಈ ಎಲ್ಲಾ ಅಂಶಗಳನ್ನು ಹಿನ್ನೆಲೆಯಲ್ಲಿ ಡೀಸಲ್ ಸಂಗ್ರಹಕ್ಕೆ ಸಂಬಂಧಿಸಿದಂತೆ ನಿಯಮಗಳ ಉಲ್ಲಂಘನೆಯಾಗಿರುವುದಿಲ್ಲ ವೆಂಬುದನ್ನು ಗಮನಿಸಿ ಲೆಕ್ಕ ಪರಿಶೋಧನಾ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಿದೆ. ಆದುದರಿಂದ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.

<table>
<tr>
<td>59</td>
<td>
ಕೆಮಿಕಲ್ಸ್‌ಗಳನ್ನು ಒಂದೇ ದಿನ ಖರೀದಿ ಮಾಡಿ ಒಂದೇ ದಿನ ವಿತರಣೆ ಮಾಡಿರುವ ಕುರಿತು. (ಮುಖ್ಯ ಸಂಶೋಧನಾ ಕೇಂದ್ರ ಕಂ.ಸಂ.31)
	6) **31st ಮಾರ್ಚ 2018ಕ್ಕೆ ಕೊನೆಗೊಳ್ಳುವಂತೆ ನೀಡಿದ ಬಳಕೆ ಪ್ರಮಾಣ ಪತ್ರದಲ್ಲಿ ಉಳಿಕೆ ಮೊತ್ತ ರೂ.1282655/– ನ್ನು** Has Been surrendered to government ಎಂದಿದ್ದು Challanಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಈ ಮೇಲಿನ ಎಲ್ಲ ನ್ಯೂನ್ಯತೆಗಳ ಕುರಿತು ಸೂಕ್ತ ವಿವರಣೆ ನೀಡಲು ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:64 ದಿನಾಂಕ:18.01.2020ನ್ನು ನೀಡಿದ್ದು ದಿನಾಂಕ:14.02.2020 ರಂದು ಸಂಬಂಧಿಸಿದ ವಿಭಾಗದವರು ನೀಡಿದ ಅನುಸರಣೆಯಲ್ಲಿ ಅನುದಾನ ಬಿಡುಗಡೆಗೆ ಪ್ರಾಧಿಕಾರದ ಅನುಮೋದನೆ ಪಡೆಯಲಾಗಿದೆ ಎಂದು ತಿಳಿಸಿದ್ದು ದಾಖಲೆಗಳನ್ನು ಲಗತ್ತಿಸಿಲ್ಲ ಮತ್ತು ಕಂಡಿಕೆಯಲ್ಲಿ ತಿಳಿಸಿದ ಎಲ್ಲ ನ್ಯೂನ್ಯತೆಗಳಿಗನುಸಾರವಾಗಿ ಅನುಸರಣೆಯಿರುವುದಿಲ್ಲ ಕಾರಣ ಪ್ರಸಕ್ತ ವರ್ಷದ ಖರ್ಚು ರೂ.19,58,000 ಮತ್ತು ಲೆಕ್ಕಪರಿಶೋಧನೆ ಹಾಜರುಪಡಿಸದ ಚಲನ್ ಮೊತ್ತ ರೂ.12,82,655 ಒಟ್ಟು ರೂ. 32,40,655/– ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ಈ ಆಕ್ಷೇಪಣೆಗೆ ವಿವರಣೆಯನ್ನು 2 ರಲ್ಲಿ ವಿವರಿಸಲಾಗಿದೆ. ಬಾಕಿ ಉಳಿದಿರುವ ಮೊತ್ತ ರೂ.12,82,655.00 ಗಳನ್ನು **DST-FIST Project** ಗೆ ಮರಳಿ ಚೆಕ್ಕ ಸಂ.612097 ದಿನಾಂಕ 10.09.2020 ರಂದು ಸಲ್ಲಿಸಲಾಗಿದೆ (ಪತ್ರ ಹಾಗೂ ಡಿ.ಡಿ. ಪ್ರತಿಯನ್ನು ಲಗತ್ತಿಸಲಾಗಿದೆ) ಆದ ಕಾರಣ ಸದರಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ

78	ಲೆಕ್ಕ ಶೀರ್ಷಿಕೆ 8417 ಯೋಜನೆಯ **Utilisation Certificate**ಹಾಜರುಪಡಿಸುವ ಕುರಿತು.(ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.43) 1. ಲೆಕ್ಕ ಶೀರ್ಷಿಕೆ 8417 Developers Chickpea cultivators Suited to mechanical Harvesting and Tolerant to herbicides Project ಗೆ ಸಂಬಂಧಿಸಿದಂತೆ ಸದರ ಯೋಜನೆಯ 2013–14 ನೇ ಸಾಲಿಗೆ ಪ್ರಾರಂಭವಾಗಿದ್ದು ಯೋಜನೆಯ ಅವಧಿಯು 4 ವರ್ಷಗಳಿಗೆ ಸೀಮಿತವಾಗಿದ್ದು ಈ ಯೋಜನೆಯ ಅವಧಿಯು 2013–14 ರಿಂದ 2016–17 ರವರೆಗೆ ಚಾಲ್ತಿಯಲ್ಲಿರುತ್ತದೆ. 2. ಮುಂದುವರೆದು 31.03.2017 ಕ್ಕೆ ಬಾಕಿ ಇರುವ ಅನುದಾನ ಮೊತ್ತಕ್ಕೆ Funding Agencies ಇಂದ ಸದರಿ Project ಮುಂದುವರೆಯುವುದಕ್ಕೆ ಸದರಿ Agency ಗೆ 3 ತಿಂಗಳ ಅವಧಿ Upto 30th June 2017 ರ ವರೆಗೆ Project ಮುಂದುವರೆಸಲು ಅನುಮತಿ ನೀಡಿದ್ದು ಅದರಂತೆ Comptroller U.A.S ಧಾರವಾಡ ಇವರು 2017–18 ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ರೂ.18,12,079/– ಅನುದಾನ ಅವಕಾಶ ಕಲ್ಪಿಸಿದ್ದು ಕಂಡುಬಂದಿರುತ್ತದೆ. ಸದರಿ ಅನುದಾನದ ಎದುರಾಗಿ 2017–18 ನೇ ಸಾಲಿಗೆ ರೂ.4,57,543/– ಗಳನ್ನು ಖರ್ಚು ಭರಿಸಿದ್ದು ಇರುತ್ತದೆ. ವರ್ಷಾಂತ್ಯಕ್ಕೆ ಅನುದಾನ ಮೊತ್ತ 13,54,536.00 ರೂ. ಬಾಕಿ ಇರುವುದು ಕಂಡು ಬರುತ್ತದೆ. ಬಾಕಿ ಅನುದಾನವನ್ನು ಸಂಬಂಧಪಟ್ಟ Funding Agency ಗೆ ಮರಳಿಸಿದ ಕುರಿತು ಹಾಗೂ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸಿದ ಕುರಿತು ದಾಖಲೆ ಒದಗಿಸಿರುವುದಿಲ್ಲ. 3. ಸದರಿ ಯೋಜನೆಯ ಅನುಷ್ಠಾನ ಅಧಿಕಾರಿಗಳು ದಿ:26.09.2017 ರ ಪತ್ರದ ಮೂಲಕ ComprolelrU.A.S. ಧಾರವಾಡ ಇವರಿಗೆ ಅನುದಾನ ಬಳಕೆ ಪ್ರಮಾಣ ಪತ್ರ ನೀಡುವಂತೆ ಕೋರಿದ್ದು ಇದಕ್ಕೆ Comptroller U.A.S. ಧಾರವಾಡ ಇವರು ದಿ:07.10.2017 ಕ್ಕೆ "ಹಣ ಬಳಕೆ ಪ್ರಮಾಣ ಪತ್ರ" ನೀಡಿದ್ದು ಇದರಲ್ಲಿ ಆರಂಭಿಕ ಶಿಲ್ಕು as on 01.04.2017 ಕ್ಕೆ ರೂ.17,50,567.00 ತೋರಿಸಿದ್ದು ಆದರೆ 2017–18 ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ರೂ.18,12,079/– ಅವಕಾಶ ಕಲ್ಪಿಸಲಾಗಿದೆ. 2017–18 ರಲ್ಲಿ ಯಾವುದೇ ಜಮೆ ಇರುವುದಿಲ್ಲ ಕಾರಣ ಹಣ ಬಳಕೆ ಪ್ರಮಾಣ ಪತ್ರದಲ್ಲಿ ತೋರಿಸಿದ ಆರಂಭಿಕ ಶಿಲ್ಕಿನಲ್ಲಿ ನಮೂದಿಸಿದ ಮೊತ್ತಕ್ಕೂ	78 ₹.18,12,079/– ಮೊತ್ತವನ್ನು ಸದರಿ ವರ್ಷದಲ್ಲಿ ಬಳಕೆಯಾಗಿ ಬಾಕಿ ಉಳಿದಿರುವ ಮೊತ್ತವನ್ನು ಮುಂದಿನ ವಾರ್ಷಿಕ ವರ್ಷದಲ್ಲಿ ಬಳಕೆ ಮಾಡಲಾಗುತ್ತದೆ.

ಬಜೆಟ್ ಅವಕಾಶದಲ್ಲಿ ಕಲ್ಪಿಸಿದ ಮೊತ್ತಕ್ಕೂ ರೂ.61,512/– ಹೆಚ್ಚಿಗೆ ಮೊತ್ತಗಳ ವ್ಯತ್ಯಾಸ ಕಂಡು ಬಂದಿದ್ದು ಅವಶ್ಯಕತೆಗೆ ತಕ್ಕಂತೆ ಅನುದಾನ ಲಭ್ಯವಿಲ್ಲದೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿರುವ ಕುರಿತು ಸೂಕ್ತ ದಾಖಲೆಗಳೊಂದಿಗೆ ಅನುಸರಣೆ ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ 82 ದಿನಾಂಕ 24.01.2020 ನೀಡಲಾಗಿ ವಿಭಾಗದವರು ದಿನಾಂಕ 14.02.2020 ರಂದು ನೀಡಿದ ಅನುಸರಣೆಯಲ್ಲಿ ಈ ಕೆಳಗಿನಂತೆ ಅನುದಾನ ಬಿಡುಗಡೆ ಮತ್ತು ವೆಚ್ಚದ ವಿವರಗಳನ್ನು ತೋರಿಸಲಾಗಿದೆ.

ವರ್ಷ	ಆರಂಭಿಕ ಶಿಲ್ಕು (ರೂ)	ಬಿಡುಗಡೆಯಾದ ಅನುದಾನ(ರೂ)	ಒಟ್ಟು(ರೂ)	ಖರ್ಚು(ರೂ)	ಅಂತಿಮ ಶಿಲ್ಕು(ರೂ)
2013–14	0	1218000	1218000	555178	662822
2014–15	662822	1481000	2143822	726745	1417077
2015–16	1417077	1365600	2782677	1337253	1445424
2016–17	1445422	1858450	3303874	1553307	1750567
2017–18	1750567	0	1750567	457543	1293024
	ಒಟ್ಟು	5923050		4630026	

ಸದರಿ ಯೋಜನೆಗೆ ಫಂಡಿಂಗ್ ಏಜನ್ಸಿಯ ಒಟ್ಟು ರೂ 59,23,050/– ಗಳ ಅನುದಾನ ಒದಗಿಸಿದ್ದು, ಆ ಪೈಕಿ ರೂ 46,30,026=00 ಗಳನ್ನು ಸದರಿ ಯೋಜನೆಯ ಅನುಷ್ಠಾನಕ್ಕೆ ಖರ್ಚು ಮಾಡಲಾಗಿದೆ ಉಳಿದ ರೂ 12,93,024/– ಗಳು ಕೃ.ವಿ.ವಿ ಧಾರವಾಡದ ನಿಧಿಯಲ್ಲಿರುತ್ತವೆ. ಮತ್ತು ದಿನಾಂಕ 07.10.2017 ರಂದು ಸದರಿ ಯೋಜನೆಯ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿದೆ ಹಾಗೂ ಫಂಡಿಂಗ್ ಏಜನ್ಸಿಯ ಉಳಿದ ಅನುದಾನವನ್ನು ಮರಳಿಸಲು ತಿಳಿಸಿದ್ದಲ್ಲಿ ಉಳಿಕೆ ಹಣವನ್ನು ಮರಳಿಸಲಾಗುವುದು. ಇನ್ನು 2017–18 ನೇ ಸಾಲಿನಲ್ಲಿ ಒದಗಿಸಿದ ರೂ 18,12,079/– ಗಳು ಸದರೀ ವರ್ಷಕ್ಕೆ ಬೇಕಾಗುವ ಅಂದಾಜು ಮೊತ್ತವಾಗಿದ್ದು ವರ್ಷದ ಅಂತ್ಯದಲ್ಲಿ ಖರ್ಚು ವೆಚ್ಚದೊಂದಿಗೆ ಹೊಂದಾಣಿಕೆ ಮಾಡಲಾಗುವುದು ಸದರೀ ಮಾಹಿತಿಯನ್ನು ಅನುಷ್ಠಾನ ಅಧಿಕಾರಿಗಳ ಗಮನಕ್ಕೆ ತರಲಾಗಿದೆ ಮತ್ತು ಅವರಿಂದ ಹೆಚ್ಚಿನ ಮಾಹಿತಿ ಒದಗಿಸಲು ತಿಳಿಸಲಾಗಿದೆ ಎಂದು ತಿಳಿಸಿದ್ದನ್ನು ಲೆಕ್ಕ ಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ ಕಾರಣ ಪ್ರಸಕ್ತ ಸಾಲಿನಲ್ಲಿ ಖರ್ಚು ಭರಿಸಿದ ಮೊತ್ತ 4,57,543/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

79	**ಲೆಕ್ಕ ಶೀರ್ಷಿಕೆ 8417/310 ರಡಿ Senior Reaserch Fellow On contract basis ನಡಿ ಶ್ರೀ ಈಶ್ವರ ಹೆಚ್ ಬೂದಿ ಇವರಿಗೆ 01.04.2017 ರಿಂದ 30.06.2017 ವರೆಗೆ ರೂ.81,583.00 ಗಳ ವೇತನ ಪಾವತಿಯಲ್ಲಿ ಕಂಡು ಬಂದ ನ್ಯೂನತೆ. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.44)** ಶ್ರೀಯುತರಿಗೆ ಲೆಕ್ಕ ಶೀರ್ಷಿಕೆ 8417/310 ಯೋಜನೆಯಡಿ ಕಾರ್ಯನಿರ್ವಹಿಸಲು ಕುಲಸಚಿವರು ಕೃವಿವಿ ಧಾರವಾಡ ಇವರು ಸೇವೆಯನ್ನು ಮುಂದುವರೆಸಲು ನೀಡಿದ ಆದೇಶ ದಿ:09.05.2017 ರಲ್ಲಿ ದಿ:21.04.2017 ರಿಂದ 30.06.2017 ರವರೆಗೆ ಕಾರ್ಯ ನಿರ್ವಹಿಸಲು ಆದೇಶ ನೀಡಿದ್ದು ಇದರನ್ವಯ ಸದರಿಯವರು AICRP Dryland agriculture RARS ವಿಜಯಪುರ ಇಲ್ಲಿ ದಿನಾಂಕ: 21.04.2017 ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಮುಂದುವರೆದು ಸದರಿಯವರ ಎಪ್ರೀಲ್–2017 ರ ವೇತನ ಪಾವತಿಯು ಒಂದು ತಿಂಗಳ ಅವಧಿಗೆ ಪಾವತಿಯಾಗಿದ್ದು ಇರುತ್ತದೆ. ಆದರೆ ಸದರಿಯವರು ದಿ:21.04.2017 ರಂದು ಹಾಜರಾಗಿದ್ದು ಇವರ ಕರ್ತವ್ಯದ ದಿ:21.04.2017 ರಿಂದ 29.04.2017 ರವರೆಗೆ 9 ದಿನಗಳಿಗೆ ಮಾತ್ರ ವೇತನ ಪಾವತಿಗೆ ಅವಕಾಶವಿದ್ದು ಆದರೆ ಸದರಿಯವರಿಗೆ 1 ತಿಂಗಳ ವೇತನ ಪಾವತಿ ಮಾಡಿದ ವಿವರ ಈ ಕೆಳಗಿನಂತಿದೆ. ತಿಂಗಳು | ಪಾವತಿಸಿದ ಮೊತ್ತ | ಪಾವತಿಸಬೇಕಾದ ಮೊತ್ತ | ವ್ಯತ್ಯಾಸ ಎಪ್ರೀಲ್–2017 | ರೂ.26,583.00 | ದಿ:21.04.2017 ರಿಂದ 29.04.2017 ರವರೆಗೆ 9ದಿನಗಳು ರೂ.917*9=8250.00 ಪಾವತಿಸಬೇಕಾದ ಮೊತ್ತ | ರೂ.18,333.00 ಸದರಿಯವರ ಹಾಜರಾತಿ ವರದಿ ಪ್ರಕಾರ 9 ದಿನಗಳಿಗೆ ಪಾವತಿಸದೇ ಹೆಚ್ಚುವರಿ 20 ದಿನಗಳಿಗೆ ವೇತನ ಪಾವತಿಸಿದ ಕುರಿತು ಸೂಕ್ತ ವಿವರಣೆಯೊಂದಿಗೆ ಅನುಸರಣೆ ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ 84 ದಿನಾಂಕ 24.01.2020 ನೀಡಲಾಗಿ ವಿಭಾಗದವರು ದಿನಾಂಕ–14.02.2020 ರಂದು ನೀಡಿದ ಅನುಸರಣೆಯಲ್ಲಿ ಎರಡು ಯೋಜನೆಗೆ ಒಬ್ಬರೇ ಪ್ರಧಾನ ಸಂಶೋಧಕರು ಇರುವುದರಿಂದ, ಲೆಕ್ಕ ಶೀರ್ಷಿಕೆ ಒಂದೇ ಇರುವುದರಿಂದ ಒಂದು ತಿಂಗಳ ಪಾವತಿಯನ್ನು ಪಾವತಿಸಲಾಗಿದೆ. ಇದರಿಂದ ಹೆಚ್ಚುವರಿ ಪಾವತಿಯಾಗಿರುವುದಿಲ್ಲವೆಂದು ತಿಳಿಸಿದ್ದು ಲೆಕ್ಕ ಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ ಕಾರಣ ಹೆಚ್ಚುವರಿ ವೇತನ ಪಾವತಿಸಿದ ಮೊತ್ತ ರೂ 18,333/– ಗಳನ್ನು ವಸೂಲಾತಿಗೆ ಸೂಚಿಸಿದೆ.	79 ಸದರಿ ಪಾವತಿಯನ್ನು ಹಿಂದಿನ ಸಾಲಿನ ಮಂಜೂರಾತಿಯನ್ವಯ ನೀಡಲಾಗಿದೆ. ವಿವರವನ್ನು ಮುಂದಿನ ಲೆಕ್ಕ ತನಿಖೆಗೆ ಹಾಜರುಪಡಿಸಲಾಗುವುದು.

80	**AbAc -8248** ರ **Project**ನ ಮಾರ್ಗಸೂಚಿ ಸಂಬಂಧಪಟ್ಟ ದಾಖಲೆ ಹಾಜರುಪಡಿಸುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕ್ರ.ಸಂ.49) **2017–18** ನೇ ಸಾಲಿನ ಪೋಚರಗಳನ್ನು ಪರಿಶೀಲಿಸಲಾಗಿ**ABAC 8248/700** ರಡಿ **Seed production and popularization of new sunflower hybrid DSFH-3** ಯೋಜನೆಯಡಿ **2017–18** ನೇ ಸಾಲಿನಲ್ಲಿ**M/S penkin Elnen Indiapvt Ltd Bangalore Bill No:78385375 Date:28.03.2018** ರೂ. **6,00,000.00** ಮೊತ್ತದ**Software and additional Accessories for FT–NIR Spectrometer** ಸದರಿಖರೀದಿಗೆದಿ:**19.03.2018** ರಂದು **Comptroller**ಧಾರವಾಡಇವರು ಆರ್ಥಿಕ ಮಂಜೂರಾತಿ ನೀಡಿದ್ದು ಇರುತ್ತದೆ, ಮುಂದುವರೆದು ಸದರಿ ಯೋಜನೆಯ ಕಡತ ಪರಿಶೀಲಿಸಲಾಗಿ ಸಂಶೋಧನಾ ನಿರ್ದೇಶಕರು **UAS** ಧಾರವಾಡ ಇವರ ಕಚೇರಿ ಆದೇಶ ದಿ:**05.02.2014** ರ ಪತ್ರದಲ್ಲಿ ಕೃಷಿ ನಿರ್ದೇಶನಾಲಯ ಯೋಜನೆಯ ಅಭಿವೃದ್ಧಿ ಮತ್ತು ಸಂಶೋಧನೆ ಕಾರ್ಯಕ್ರಮ **2013–14** ನೇ ಸಾಲಿನಲ್ಲಿ ಕೃವಿವಿ ಧಾರವಾಡ ಅನುದಾನದ ಮೊತ್ತ ರೂ.**125.00** ಲಕ್ಷಗಳ ವಿವಿಧ ಯೋಜನೆಗಳಿಗೆ ಮರುಹಂಚಿಕೆ ಮತ್ತು ಅನುಷ್ಠಾನಗೊಳಿಸುವ ಬಗ್ಗೆ ತಿಳಿಸಿದ್ದು ಇರುತ್ತದೆ ಆದರೆ ಸಂಬಂಧಪಟ್ಟ ಯೋಜನೆಯ ಕಡತಗಳಲ್ಲಿ ಅನುದಾನ ಬಿಡುಗಡೆ ಆದೇಶ ಪತ್ರ **Project Proposal** ಮತ್ತು ಯೋಜನೆಯ ಮಾರ್ಗಸೂಚಿ **Funding Agency** ಯವರು ಅನುಮೋದನೆ ನೀಡಿರುವ ಉಪಕರಣಗಳ ಪಟ್ಟಿ ಈ ಎಲ್ಲ ದಾಖಲೆಗಳು ಸಂಬಂಧಪಟ್ಟ ಯೋಜನೆಯ ಕಡತದಲ್ಲಿ ಲಭ್ಯವಿರುವುದಿಲ್ಲ ಕಾರಣ ದಾಖಲೆಗಳನ್ನು ಅನುಸರಣೆಯೊಂದಿಗೆ ಸಲ್ಲಿಸಲು ಕೋರಿ, ಲೆ.ಪ.ವಿ.ಪ.ಸಂ.**101,** ದಿ:**28–01–2020** ರಂದು ನೀಡಲಾಗಿ ವಿಭಾಗದವರು ದಿ:**14–02–2020** ರಂದು ಅನುಸರಣೆಯಲ್ಲಿ ಸದರಿ ಮಾಹಿತಿಯನ್ನು ಲಗತ್ತಿಸಲಾಗಿದೆ ಎಂದು ತಿಳಿಸಿದ್ದು ಅನುಸರಣೆಯೊಂದಿಗೆ ಯಾವುದೇ ಮಾಹಿತಿಯನ್ನು ಲಗತ್ತಿಸಿರುವುದಿಲ್ಲ ಕಾರಣ ರೂ.**6,00,000/–** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	**80 AbAc -8248** ರ **Project** ಗೆ ಸಂಬಂದಿಸಿದ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗುವುದು.

81	**Genetic dissection of heat tolerance using bulked segregant RNA sequencing in Ground nut** ಈ ಖಾತೆಗೆ ಮಂಜೂರಾದ ಅನುದಾನವನ್ನು **Funding Agency** ಯವರು ತಿಳಿಸಿದಂತೆ ಪ್ರತ್ಯೇಕ ಖಾತೆಯಲ್ಲಿ (ಬಡ್ಡಿ ಬರುವ) ಜಮೆ ಮಾಡದಿರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.50) ಲೆಕ್ಕ ಶೀರ್ಷಿಕೆ 5666 **Genetic dissection of heat tolerance using bulked segregant RNA sequencing in ground nut funding Agency** ಯವರು ದಿನಾಂಕ 26.09.2017 ರಲ್ಲಿಯ ಆದೇಶದಲ್ಲಿ ತಿಳಿಸದಂತೆ **Institute /Agency Will Keepwhole of the grant in a bank account earning interest and the interest earned should be reported to DB7 in the utilization Certificate and statement of Expenditure The interest so earned will be treated as fund created to the Institute/Agency and shall be adjusted towards further installment of the grant and or the final settlement of acconts** ಎಂದಾದ ಸದರ ಯೋಜನೆ 2017–18 ರಲ್ಲಿ ಪ್ರಾರಂಭವಾಗಿದ್ದು ಇದುವರೆಗೆ ಒಟ್ಟು 11,84,000 ಅನುದಾನ ಬಿಡುಗಡೆಯಾಗಿದ್ದು 2017–18 ರಲ್ಲಿ ರೂ.7,39,295/– ಗಳು ಖರ್ಚಾಗಿರುತ್ತವೆ. ಸದರ ಯೋಜನೆಯಡಿ ಮಂಜೂರಾದ ಅನುದಾನದ ಮೊತ್ತವನ್ನು ಪ್ರತ್ಯೇಕ ಖಾತೆ ತೆರೆಯದೇ ಚಾಲ್ತಿ ಖಾತೆಯಲ್ಲಿ ಇಟ್ಟಿಕೊಂಡಿರುವ ಕುರಿತು ಸೂಕ್ತ ವಿವರಣೆ ನೀಡಲು ಕೋರಿ ಲೆ.ಪ.ವಿ.ಪ.ಸಂ.113, ದಿ:28.01.2020 ನ್ನು ನೀಡಿದ್ದು, ಈ ಬಗ್ಗೆ ದಿ:14–02–2020 ರಂದು ಸದರಿ ವಿಭಾಗದವರು ನೀಡಿದ ಅನುಸರಣೆಯಲ್ಲಿ ಸ್ವೀಕೃತವಾಗುವ ಎಲ್ಲ ಲೆಕ್ಕ ಶೀರ್ಷಿಕೆಗಳ ಮೊತ್ತವನ್ನು ಒಂದೇ ಖಾತೆಯಲ್ಲಿಟ್ಟು ಆಯಾ ಯೋಜನೆಯ ಅನುದಾನ ಮತ್ತು ವೆಚ್ಚವನ್ನು ನಿಖರವಾಗಿ ಇಡುವುದರಿಂದ ಬೇರೆ ಖಾತೆ ತೆಗೆಯುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ತಿಳಿಸಿದ್ದು ಲೆಕ್ಕ ಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ ಕಾರಣ ರೂ.11,84,000/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	81 ಕೃಷಿ ವಿಶ್ವವಿದ್ಯಾಲಯದ ನಿಯಮಾವಳಿಯನ್ವಯ ಅನುದಾನವನ್ನು ಒಂದೇ ಚಾಲ್ತಿ ಖಾತೆಯಡಿಯಲ್ಲಿ ನಿರ್ವಹಿಸಲಾಗುತ್ತದೆ.

82	**Establishment of digital dying ,printing centre for export promotion of textile by UAS DWD ಈ ಯೋಜನೆ ಮುಂದುವರಿಕೆಗೆ ಅನುಮತಿ ಪಡೆಯದಿರುವ ಕುರಿತು.(ಗ್ರಾಮೀಣ ಗೃಹ ವಿಜ್ಞಾನ ಮಹಾವಿದ್ಯಾಲಯ ಕಂ.ಸಂ.27)** ಮೇಲೆ ತಿಳಿಸಿದ ಯೋಜನೆಯು 10 ನೇ ಯೋಜನೆಯಲ್ಲಿ ಅನುಮೋದಿತ ಯೋಜನೆಯಾಗಿದ್ದು ಅನುಮೋದಿತ ಮೊತ್ತ ರೂ 2.92 ಕೋಟಿಯಿದ್ದು ಲೆ.ಪ.ಗೆ. ಒದಗಿಸಿದ ಪತ್ರ ಸಂ: VITC/ASIDE/2009-10/225 ದಿನಾಂಕ 02.07.2009 ರಲ್ಲಿ ತಿಳಿಸಿದ ಷರತ್ತುಗಳ ಕಂಡಿಕೆ 8 ರಲ್ಲಿ being a plan scheme of tenth plan the project should be completed in all respects within the current plan period during validity period failing which the balance portion of the project has to be completed with your own funds ಎಂದಿದೆ ಆದರೆ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಂತೆ ಸದರ ಯೋಜನೆ 2017–18 ನೇ ಸಾಲಿನಲ್ಲಿಯೂ ಮುಂದುವರೆದಿದ್ದು 10 ನೇ ಯೋಜನೆಯಲ್ಲಿ ಮಂಜೂರಾದ ಮೊತ್ತವನ್ನು ಯೋಜನಾ ವರ್ಷ ಪೂರ್ಣಗೊಂಡ ಬಳಿಕ ಉಳಿಕೆ ಮೊತ್ತವನ್ನು funding agency ಗೆ ಮರುಭರಣ ಮಾಡಿ ಉಳಿದ ಯೋಜನೆಯನ್ನು ವಿವಿಯಿಂದ ಹಣ ಪಡೆದು ಖರ್ಚು ಮಾಡಬೇಕಿತ್ತು ಆದರೆ funding agency ಗೆ ಯಾವುದೇ ರೀತಿಯ ಮಾಹಿತಿಯನ್ನು ನೀಡದೇ ಉಳಿಕೆ ಹಣವನ್ನು ಬಳಸಿಕೊಳ್ಳಲು ಅನುಮತಿಯನ್ನು ಪಡೆಯದೇ ಪ್ರಸಕ್ತ ಸಾಲಿನವರೆಗೂ ಮುಂದುವರೆಸಿರುವ ಕುರಿತು ಸೂಕ್ತ ಅನುಸರಣೆ ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ 18 ದಿನಾಂಕ–24.08.2019 ನೀಡಿದ್ದು ಅನುಸರಣೆಯಲ್ಲಿ funding agency ಗೆ ಈ ಕುರಿತು ಮಾಹಿತಿ ನೀಡಿ ಪತ್ರ ಬರೆಯಲಾಗುವುದು ಎಂದು ತಿಳಿಸಿದ್ದು ಸೂಕ್ತ ಕ್ರಮ ಕೈಗೊಂಡು ಲೆಕ್ಕ ಪರಿಶೋಧನೆಗೆ ಮಾಹಿತಿ ನೀಡಲು ಸೂಚಿಸಿದೆ.	82 ಆಕ್ಷೇಪಣೆ ಪ್ರಕಾರ ಯೋಜನಾ ಅಧಿಕಾರಿಗಳಿಂದ ಈ ಯೋಜನೆಯ ಮುಂದುವರಿಕೆಗೆ ಅನುಮತಿ ಪಡೆದಿರುವ ಪ್ರತಿಯನ್ನು ಲಗತ್ತಿಸಿದೆ. ಆದ್ದರಿಂದ ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.
83	**BIO GAS SCHEME head 7261 AUC (audited utilization certificate) ಪ್ರಕಾರ ಅಂತಿಮ ಶಿಲ್ಕು ಋಣಾತ್ಮಕವಾಗಿರುವ ಕುರಿತು. (ಮುಖ್ಯ ಸಂಶೋಧನಾ ಕೇಂದ್ರ ಕಂ.ಸಂ.18)** ಮುಖ್ಯ ಸಂಶೋಧನಾ ಕೇಂದ್ರ ಕೃಷಿ ವಿಶ್ವವಿದ್ಯಾಲಯ ಧಾರವಾಡದ 2017–18 ನೇ ಸಾಲಿನ ಲೆಕ್ಕ ಪರಿಶೋಧನೆ ವೇಳೆ ಪರಿಶೀಲಿಸಲಾಗಿ BIO GAS SCHEME head 7261 ರ AUC (audited utilization certificate for the period from april 2017-march 2018 vijaya panchappa co charted accountants) ರ ಪ್ರಕಾರ AUC ರಲ್ಲಿ closing balance 1946449=00 ರೂ ಗಳು ಇರುತ್ತವೆ.ವಿವರ ಈ ಕೆಳಗಿನಂತಿರುತ್ತವೆ.	83 Bioconversion Technology scheme head 7261, ರ ಸಾಲಿನ AUC ಪ್ರಕಾರ closing balalnce ರೂ. – 19,46,449 ಗಳು ಇರುತ್ತದೆ. ಈ ಸಾಲಿನಲ್ಲಿ ಒದಗಿದ ಅನುದಾನದ ಪ್ರಕಾರ, ಹೆಚ್ಚು ವೆಚ್ಚವಾಗಿರುವುದು ಸಿಬ್ಬಂದಿಯ ಪಗಾರ ಒದಗಿಸಲು ಆಗಿರುತ್ತದೆ. ಇದರ ಪ್ರಕಾರ, ಪಗಾರಕ್ಕಾಗಿ ಮಾತ್ರ ಹೆಚ್ಚಿನ ವೆಚ್ಚವಾಗಿರುವುದು. ಉಳಿದ ಉಪಖಾತೆಗಳೆಂದರೆ, ORC, contractual services ಹಾಗೂ

Opening balance	From ICAR	Actual payment	ICAR share of sanction grant	ICAR share of Actual payment	closing balance
-1760621	2790000	3967771	3909529	2975828	-1946449

ಈ ರೀತಿ ಋಣಾತ್ಮಕವಾಗಿ ಇರುವುದಕ್ಕೆ ಕಾರಣ ಒದಗಿಸುವುದು ಅದರಂತೆ ಈ ಹೆಚ್ಚಿಗೆ ಮೊತ್ತವನ್ನು ಯಾವ ಮೂಲದಿಂದ ಭರಿಸಲಾಗಿದೆ ಎಂಬ ದಾಖಲೆ ಒದಗಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ 9 ದಿನಾಂಕ 17.07.2019 ರಲ್ಲಿ ವಿಚಾರಿಸಲಾಗಿ ಯಾವುದೇ ಅನುಸರಣೆ ನೀಡಿರುವುದಿಲ್ಲ. ಕಾರಣ ಮೊತ್ತ ರೂ 19,46,449=00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

NRC ಖಾತೆಗಳಲ್ಲಿ ಒದಗಿಸಿದ ಅನುದಾನದ ಮಿತಿಯಲ್ಲಿಯೇ ಬಳಸಲಾಗಿದೆ.
ಋಣಾತ್ಮಕವಾಗಿರುವ ಹಣದ ಬಗ್ಗೆ ನಮ್ಮ Project coordinator ಅವರಿಗೆ ಪತ್ರ ಬರೆದು ಹೆಚ್ಚಿನ ಅನುದಾನವನ್ನು ತರಿಸಲು ಕ್ರಮಕೈಗೊಳ್ಳಲಾಗಿತ್ತು. 2019–20 ನೇ ಸಾಲಿನಲ್ಲಿ ಸಾಕಾಗುವಷ್ಟು ಅನುದಾನ ICAR ನಿಂದ ಪಡೆದಿದ್ದರಿಂದ ಋಣಾತ್ಮಕವಾಗಿರುವ ಹಣವನ್ನು closing balalnce ರೂ. 14,87,031 ಆಗಿರುತ್ತದೆ. AUC 2019–20 ಪ್ರತಿಯನ್ನು ಲಗತ್ತಿಸಲಾಗಿದೆ.
ಸಲ್ಲಿಸಿದ ವಿವರವನ್ನು ಪರಿಗಣಿಸಿ, ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

84

Chick pea project ನಲ್ಲಿ ಕಂಡು ಬಂದ ನ್ಯೂನ್ಯತೆಗಳು (ಕಡಲೆ)

(ಮುಖ್ಯ ಸಂಶೋಧನಾ ಕೇಂದ್ರ ಕಂ.ಸಂ.27)

2017–18 ನೇ ಸಾಲಿನ ಮುಖ್ಯ ಸಂಶೋಧನೆ ವಿಭಾಗದ chick pea project ನ್ನು ಪರಿಶೀಲಿಸಲಾಗಿ ಈ ಕೆಳಗೆ ವಿವರಿಸಿದಂತೆ DAP MOP UREA VERMICOMPOST ನ್ನು ಖರೀದಿಸಲಾಗಿದೆ ಆದರೆ ಇದರ ಉಪಯೋಗದ ಬಗ್ಗೆ DMS ನಲ್ಲಿ ದಾಖಲೆ ಇರುವುದಿಲ್ಲ ಮತ್ತು ಯಾವ ಯಾವ ಇಳುವರಿಗೆ ಉಪಯೋಗಿಸಲಾಗಿದೆ ಎಂಬ ದಾಖಲೆ ಇರುವುದಿಲ್ಲ. ವಿವರ ಈ ಕೆಳಗಿನಂತಿವೆ.

Particulars	Qty	DBR	AMOUNT
DAP	50	19/7	1100
MOP	25	19/7	300
DAP	25	19/9	550
MOP	10	19/9	120
DAP	300	19/12	6600
-	100	19/12	600

84 1)2017–18 ನೇ ಸಾಲಿನಲ್ಲಿ ಖರೀದಿಸಿದ ಎಲ್ಲ ತರಹದ ಗೊಬ್ಬರ ಬೀಜಗಳನ್ನು ಎಲ್ಲವುಗಳನ್ನು ಉಪಯೋಗಿಸಿದ ದಿನಾಂಕದಂದೇ ಡಿ.ಎಮ್.ಎಸ್ ನಲ್ಲಿ ನಮೂದಿಸಲಾಗಿರುತ್ತದೆ. ಮತ್ತು ಈ ಎಲ್ಲ ವಸ್ತುಗಳನ್ನು ವಿತರಣೆ ಪುಸ್ತಕದಲ್ಲಿ ಯಾವುದಕ್ಕೆ ಉಪಯೋಗಿಸಲಾಗುತ್ತದೆ. ಎಂಬುದನ್ನು ನಮೂದಿಸಿ ದಾಸ್ತಾನು ಪುಸ್ತಕದಿಂದ ಕಡಿಮೆ ಮಾಡಲಾಗಿರುತ್ತದೆ. ನಂತರ ಹೊಲದಲ್ಲಿ ಉಪಯೋಗಿಸದ ನಂತರ ಡಿ.ಎಮ್.ಎಸ್. ನಲ್ಲಿ ನಮೂದಿಸಿರುತ್ತದೆ.
2) ದಿನಾಂಕ 23–09–2017 ಕ್ಕೆ ಕೃಷಿ ಮೇಳದ ಅಂಗವಾಗಿ ರೈತರಿಗೆ ಕಡಲೆ ಬಗ್ಗೆ ತಿಳುವಳಿಕೆ ಕೊಡುವ ಪುಸ್ತಕಗಳನ್ನು ಮಾರಾಟ ಮಾಡಲಾಯಿತು. ಆದರೆ ಕಚೇರಿಯಲ್ಲಿ ಸ್ವೀಕೃತಿ ಪುಸ್ತಕ ಲಭ್ಯವಿಲ್ಲದ್ದರಿಂದ ಬ್ಯಾಂಕಿಗೆ ಜಮಾ ಮಾಡುವಲ್ಲಿ ವಿಳಂಭವಾಗಿರುವುದು. ಕಾರಣ

MOP	100	19/12	1200
Vermicompost	1500	20/13	7500
Vermicompost	2000	-	10000
Chemicals	All chemicals	20/6(nitin scientific & surgical)	9566
Chemicals	All chemicals	22/26(nitin scientific & surgical)	49264
Bengal gram	5 kg	Main store	290
			87090

ಈ ಕುರಿತು ದಾಖಲೆ ಒದಗಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ 36 ದಿನಾಂಕ 23.07.2019 ರಲ್ಲಿ ವಿಚಾರಿಸಲಾಗಿ ನೀಡಿದ ಅನುಸರಣೆಯಂತೆ ಕಂಡಿಕೆಯಲ್ಲಿ ವಿವರಿಸಿದ 3 ಪೊರೈಕೆದಾರರಿಂದ ಪ್ರತಿ ಸಲ ದರಪಟ್ಟಿ ತರಿಸಿ ಪರಿಶೀಲಿಸಿ ಶ್ರೀ ಮೃತ್ಯುಂಜಯ ಸೀಡ್ಸ್‌ನಲ್ಲಿ ದರ ಕಡಿಮೆ ಇರುವುದರಿಂದ ಖರೀದಿ ಮಾಡಲಾಗುತ್ತದೆ ಎಂದು ಹೇಳಿದ್ದು ಲೆಕ್ಕ ಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ ಕಾರಣ ಮೊತ್ತ ರೂ **87,090=00**ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಕಂಡಿಕೆ ಕೈ ಬಿಡಬೇಕೆಂದು ಕೋರಲಾಗಿದೆ

ಎಸ್.ಸಿ.ಪಿ/ಟಿ.ಎಸ್.ಪಿ

85

2017–18 ನೇ ಸಾಲಿನಲ್ಲಿ SCP ಹಾಗೂ TSP ಯೋಜನೆಗಳಡಿ ಅನುದಾನಗಳ ಖರ್ಚಿನ ಓಚರಗಳ ನ್ಯೂನ್ಯತೆಗಳ ಬಗ್ಗೆ(ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.19)

2017–18 ನೇ ಸಾಲಿನಲ್ಲಿ SCP ಯೋಜನೆ ಹಾಗೂ TSP ಯೋಜನೆಗಳಡಿ ಕ್ರಮವಾಗಿ ಲೆಕ್ಕಶೀರ್ಷಿಕೆ 5565 ಹಾಗೂ 5527 ಲೆಕ್ಕಶೀರ್ಷಿಕೆ ಅಡಿ ಅನುದಾನ ಬಿಡುಗಡೆ, ಖರ್ಚು ಮಾಡಿದ ವಿವರ ಹಾಗೂ ಬಾಕಿ ಉಳಿದ ಅನುದಾನಗಳ ವಿವರ ಈ ಕೆಳಗಿನಂತಿದೆ.

ಲೆ ಶಿ	O B	Receipt	Total	Expenditure	Balance
5565	3,05,82,521.00	75,00,000.00	3,80,82,521.00	23463322.00	1,46,19,199.00
5527	95,77,964.00	25,00,000.00	1,20,77,964.00	74,30,979.00	46,46,985.00

ಸ.ಆ.ಸಂ.ಪಿ.ಎಲ್ ಎಸ್–1/ ತಾಂ–2/2017–18 ದಿನಾಂಕ:23.10.2017 ರ ಪ್ರಕಾರ 2017–18 ನೇ

85 ಕರ್ನಾಟಕ ಸರ್ಕಾರದ ಪತ್ರ ಸಂ.ಕೃಇ 77 ಕೃಯೋಕಾ 2017 (ಭಾಗ–1) ದಿನಾಂಕ 23.04.2018(ಕೃಷಿ ಇಲಾಖೆ) ರಂತೆ 2017–18 ನೇ ಸಾಲಿಗೆ ಬಾಕಿ ಉಳಿದಿರುವ ಅನುದಾನವನ್ನು ಉಪಯೋಗಿಸಲು ಅನುಮತಿ ನೀಡಿರುತ್ತಾರೆ (ಪ್ರತಿ ಲಗತ್ತಿಸಿದೆ) ಈ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ವಿದ್ಯಾರ್ಥಿಗಳ ಫೀ/ಪ್ರಯಾಣ ಭತ್ಯೆ ಪಾವತಿಸಲು **PG Acdemic information & Regulations** ದಂತೆ ಕರ್ನಾಟಕ ಸರ್ಕಾರದ ಸಮಾಜ

	ಸಾಲಿನಲ್ಲಿ ಪ.ಜಾತಿ ಉಪಯೋಜನೆ ಅಡಿ ರೂ.75.00 ಲಕ್ಷಗಳ ಅನುದಾನ ಹಾಗೂ ಗಿರಿಜನ ಉಪಯೋಜನೆ ಅಡಿ ರೂ.25.00ಲಕ್ಷಗಳ ಅನುದಾನಗಳನ್ನು ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ ಅಧ್ಯಯನ ಮಾಡುವ ಪ.ಜಾತಿ ಹಾಗೂ ಪ.ಪಂಗಡ ವಿದ್ಯಾರ್ಥಿಗಳಿಗೆ ಲ್ಯಾಪಟಾಪ ವಿತರಣೆ ಹಾಗೂ ಹೆಚ್ಚುವರಿ ಭೋಧನಾ ವೆಚ್ಚ (E.B.L) ಗಾಗಿ ಮಂಜೂರಾತಿ ನೀಡಲಾಗಿದೆ. ಆದರೆ ವೋಚರಗಳನ್ನು ಪರಿಶೀಲಿಸಲಾಗಿ, ಲ್ಯಾಪಟಾಪ ವಿತರಣೆ ಹಾಗೂ EBL ವೆಚ್ಚಗಳನ್ನು ಹೊರತುಪಡಿಸಿ "Tour Allowance" SC/ST ವಿದ್ಯಾರ್ಥಿಗಳ ಬಾಕಿ ಫೀ ಕ್ಲೇಮ್‌ಗಳ ವೆಚ್ಚ ಭರಿಸಿದ್ದು ಕಂಡುಬಂದಿರುತ್ತದೆ. ಸದರಿ ವೆಚ್ಚಗಳಿಗೆ ಸರ್ಕಾರದಿಂದ ಪೂರ್ವಾನುಮತಿ ಪಡೆದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ಲೆಕ್ಕ ವಿಚಾರಣಾ ಪತ್ರ ಸಂ 81 a ದಿನಾಂಕ 24.01.2020 ರಲ್ಲಿ ಕೋರಿದ್ದು ನೀಡಿದ ಅನುಸರಣೆಯಲ್ಲಿ ಪಜಾ/ಪಪಂ ವಿದ್ಯಾರ್ಥಿಗಳ Tour allowance, fee claim ಗಳನ್ನು ಭರಿಸಲು ಲಗತ್ತಿಸಿದ ಆದೇಶದ ಪ್ರತಿ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಗಳಿಗೆ ಸಂಬಂಧಿಸಿದ್ದು ಕೃಷಿ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿರುವುದಿಲ್ಲ ಆದ್ದರಿಂದ ಪಜಾ/ಪಪಂ ವಿದ್ಯಾರ್ಥಿಗಳ Tour allowance, fee claim ಗಳನ್ನು ಪಾವತಿಸಿದ ಮೊತ್ತ SCP ಅಡಿ ರೂ 69,45,322+ TSP ಅಡಿ 23,27,979=92,73,301/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ಕಲ್ಯಾಣ ಇಲಾಖೆ, ಬೆಂಗಳೂರು ಇವರ ಆದೇಶ ಸಂ.ಸಕಇ 178 ಪಕವಿ 2015 ದಿನಾಂಕ 31.12.2015 ರಂತೆ ಅನುಮತಿ ಪಡೆಯಲಾಗಿದೆ (ಪ್ರತಿ ಲಗತ್ತಿಸಿದೆ) ಕಾರಣ ಸದರಿ ದಾಖಲೆಗಳನ್ನು ಪರಿಶೀಲಿಸಿ ಸದರಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ
86	**2017–18 ನೇ ಸಾಲಿನಲ್ಲಿ SCP ಹಾಗೂ TSP ಯೋಜನೆ ಅಡಿ ಲ್ಯಾಪಟಾಪಗಳ ಖರೀದಿಗಳಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತು.(ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.20)** **2017–18 ನೇ ಸಾಲಿನಲ್ಲಿ SCP ಹಾಗೂ TSP ಯೋಜನೆ ಅಡಿ 572 ಲ್ಯಾಪಟಾಪಗಳನ್ನು ಖರೀದಿಸಿದ ವಿವರ ಈ ಕೆಳಗಿನಂತಿದೆ.** **(437 ಸಂಖ್ಯೆ ಲ್ಯಾಪಟಾಪ SC ವಿದ್ಯಾರ್ಥಿಗಳಿಗೆ, 135 ಸಂಖ್ಯೆ:ಲ್ಯಾಪ ಟಾಪ ST ವಿದ್ಯಾರ್ಥಿಗಳಿಗೆ)** ಕ್ರ ಸಂ | ಚೆಕ್ ಸಂಖ್ಯೆ: ದಿನಾಂಕ | ವಿವರ | ಮೊತ್ತ 01 | 2017081014/16.08.2017 | M/S plexus IT System pvt. ltd Bhopal | ರೂ.2,16,21,600.00 **1. ಸರ್ಕಾರದ ಆದೇಶ ಸಂಖ್ಯೆ ಕೃ ಇ ಕೃಯೋಕಾ 2016 (ಭಾಗ–2) ದಿ:02.02.2017 ರನ್ವಯ 2014–15 ನೇ ಸಾಲಿನ ಪ.ಜಾತಿ ಉಪಯೋಜನೆ ಹಾಗೂ ಗಿರಿಜನ ಉಪಯೋಜನೆ ಉಳಿಕೆ ಅನುದಾನವನ್ನು 2016–17 ನೇ**	**86** ಕಂಡಿಕೆಯಲ್ಲಿ ಆಕ್ಷೇಪಿಸಿದಂತೆ ವಿದ್ಯಾರ್ಥಿಗಳ ಪ್ರವೇಶಾತಿಯನುಸಾರ ಸಕಾರದಿಮದ 652 ಲ್ಯಾಪಟಾಪಗಳ ಖರೀದಿಗೆ ಬೇಡಿಕೆಗೆ ಅನುಮೋದಿಸಲ್ಪಟ್ಟಿತ್ತು. ಇದರಲ್ಲಿ ಅನೇಕ ವಿದ್ಯಾರ್ಥಿಗಳು ಪ್ರವೇಶಾತಿ ನಂತರ ಕಾಲೇಜಿಗೆ ಹಾಜರಾಗಿರುವುದಿಲ್ಲ. ಖರೀದಿಯ ಸಂದರ್ಭದಲ್ಲಿ ಹಾಜರಾತಿ ವಿದ್ಯಾರ್ಥಿಗಳ 572 ಸಂಖ್ಯೆಗಳನ್ನು ಆಧರಿಸಿ ಖರೀದಿ ಮಾಡಲಾಗಿದೆ. ಕರ್ನಾಟಕ ಸರಕಾರದ ಅಧಿಸೂಚನೆ ಸಂ.ಶಾಇ 27 ಶಾಸನ 2017 ದಿನಾಂಕ 17.07.2017 ರ ನುಸಾರ ಬಾಕಿ ಉಳಿದ ಅನುದಾನವನ್ನು ಮುಂದಿನ ಆರ್ಥಿಕ ವರ್ಷದಲಿ ಬಳಕೆಗೆ ಕ್ರಮ ಜರುಗಿಸಲಾಗಿದೆ. ಅಲ್ಲದೆ ಸರಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು ಇವರ ಪತ್ರಸಂ.ಕೃಇ 77 ಕೃಯೋಕಾ 2017(ಭಾಗ–1) ದಿನಾಂಕ

ಸಾಲಿನಲ್ಲಿ ಕೃಷಿ ವಿಶ್ವವಿದ್ಯಾಲಯ ಧಾರವಾಡಕ್ಕೆ ಹಂಚಿಕೆ ಮಾಡಿದ ವಿವರಗಳು ಹಾಗೂ ಅದಕ್ಕೆದುರಾಗಿ ಲ್ಯಾಪಟ್ಯಾಪ ಖರೀದಿಸಿದ ವಿವರಗಳು ಈ ಕೆಳಗಿನಂತಿವೆ.

ಕ್ರ ಸಂ	ಅನುದಾನ ಹಂಚಿಕೆ	ಖರೀದಿಸಿದ ವಿವರ	ಬಾಕಿ ವಿವರ
	'ಪ.ಜಾತಿ ಉಪಯೋಜನೆ (SCP)		
01	1)ಲ್ಯಾಪ ಟಾಪ ಭೌತಿಕ 483(No)	437 (No)	46 (No)
02	2)ಲ್ಯಾಪ ಟಾಪ ಆರ್ಥಿಕ 241.50	165.18 (ಲಕ್ಷ)	76.32 (ಲಕ್ಷ)

ಕ್ರ ಸಂ	ಅನುದಾನ ಹಂಚಿಕೆ	ಖರೀದಿಸಿದ ವಿವರ	ಬಾಕಿ ವಿವರ
	ಗಿರಿಜನ ಉಪಯೋಜನೆ (TSP)		
01	1)ಲ್ಯಾಪ ಟಾಪ ಭೌತಿಕ 169(No)	135 (No)	34 (No)
02	2)ಲ್ಯಾಪ ಟಾಪ ಆರ್ಥಿಕ 76.00	51.03(ಲಕ್ಷ)	24.97 (ಲಕ್ಷ)

ಒಟ್ಟಾರೆ 652 ಲ್ಯಾಪಟಾಪಗಳ ಬೇಡಿಕೆಯ ಪ್ರಸ್ತಾವನೆ ಸರ್ಕಾರದಿಂದ ಅನುಮೋದನೆಗೊಂಡಾಗ್ಯೂ ಕೂಡಾ 572 ಲ್ಯಾಪಟಾಪಗಳನ್ನು ಖರೀದಿಸಿದ್ದು ಪಜಾ/ಪಪಂ ವಿದ್ಯಾರ್ಥಿಗಳ ಪ್ರವೇಶಾತಿ ದಾಖಲೆಗಳನ್ನು ಪರಿಶೀಲಿಸದೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ ಕುರಿತು ಸೂಕ್ತ ವಿವರಣೆ ನೀಡಿರುವುದಿಲ್ಲ ಸದರ ಖರ್ಚಿಗೆ ಸಂಬಂಧಿಸಿದಂತೆ ಬಳಕೆ ಪ್ರಮಾಣ ಪತ್ರ ಹಾಗೂ ಬಾಕಿ ಉಳಿದ ರೂ.101.29 ಲಕ್ಷಗಳು ಬಾಕಿ ಉಳಿದಿದ್ದು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂವ್ಯಶಾಇ 27 ಶಾಸನ 2017 ಬೆಂಗಳೂರು ದಿನಾಂಕ–17.07.2017 ರನ್ವಯ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು ಆರ್ಥಿಕ ಸಂಪನ್ಮೂಲ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) 2017 ರನ್ವಯ ಕ್ರಮ ಕೈಗೊಂಡ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ಈ ಕುರಿತು ಲೆಕ್ಕ ವಿಚಾರಣಾ ಪತ್ರ 88 ನ್ನು ನೀಡಿದ್ದು ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ವಿವರಣೆ ನೀಡಿರುವುದಿಲ್ಲ ಕಾರಣ ಮೊತ್ತ ರೂ 1,01,29,000/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

23.04.2018 ರನುಸಾರ 2017–18 ನೇ ಸಾಲಿನಲ್ಲಿ ಬಾಕಿ ಉಳಿದ ಅನುದಾನವನ್ನು 2018–19 ನೇ ಸಾಲಿನಲ್ಲಿ ಉಪಯೋಗಿಸಲು ಸರಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು ಇವರ ಪತ್ರಸಂ.ಕೃಇ 77 ಕೃಯೋಕಾ 2017(ಭಾಗ–1) ದಿನಾಂಕ 15.10.2018 ರ ಪ್ರಕಾರ ಅನುಮತಿ ನೀಡಿರುತ್ತಾರೆ

ಕಾರಣ ಸದರಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.

87 **ಲೆಕ್ಕ ಶೀರ್ಷಿಕೆ 3698 ಎಸ್.ಸಿ.ಪಿ/ಟಿ. ಎಸ್.ಪಿ ಯೋಜನೆಯಡಿ ಅನುದಾನಗಳ ವೆಚ್ಚಗಳ ಕುರಿತು.(ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.21)**

2017–18 ನೇ ಸಾಲಿನಲ್ಲಿ ಲೆಕ್ಕ ಶಿರ್ಷಿಕೆ **3698** ಎಸ್.ಸಿ.ಪಿ/.ಟಿ. ಎಸ್ ಪಿ ಯೋಜನೆಯಡಿ ಆಯವ್ಯಯ ಪುಸ್ತಕದ ಪ್ರಕಾರ ಪರಿಷ್ಕೃತ ಅನುದಾನ ಹಂಚಿಕೆ ಹಾಗೂ ವಾರ್ಷಿಕ ಲೆಕ್ಕ ಪತ್ರ ಪ್ರಕಾರ ದಾಖಲಿಸಿದ ವೆಚ್ಚಗಳ ವಿವರಗಳು ಈ ಕೆಳಗಿನಂತಿವೆ.

ಅ.ಸಂ	ಯೋಜನೆಗಳು	ಎಬಿಎಸಿ	ಪರಿಷ್ಕೃತ ವೆಚ್ಚ	ವೆಚ್ಚ	ಬಾಕಿ
1	ಎಸ್.ಸಿ.ಪಿ	3698	10,00,000	6,63,000	3,37,000
2	ಟಿ. ಎಸ್.ಪಿ	3699	3,50,000	3.02,000	48,000

ಪರಿಷ್ಕೃತ ಆಯವ್ಯಯ ಕಲ್ಪಿಸಿದ ಮೊತ್ತಗಳ ಎದುರಾಗಿ ಸರ್ಕಾರದಿಂದ ಬಿಡುಗಡೆಯಾದ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವುದು. ಲೆಕ್ಕ ಶಿರ್ಷಿಕೆ **3638** ಯೋಜನೆಯಡಿ ರೂ **6,63,000=00** ಗಳನ್ನು ಎಸಿ ಬಿಲ್ ಮೂಲಕ ಡ್ರಾ ಮಾಡಿದ್ದು National Council for Training and Social Research New Delhi at Singapore Malayasi & Thailand on 16.11.2017 to 23.11.2017 Rs 3,61,000=00 And Air fare, visa charges, DA, Medical Insurance, Domestic Travel and Miscellaneous charges of 1 SC Category merit student for study abroad programme Rs. 3,02,000 ಒಟ್ಟು ರೂ **6,63,000=00** ಹಾಗೂ ಲೆಕ್ಕ ಶಿರ್ಷಕೆ **3699** ಯೋಜನೆಯಡಿ ರೂ **3.02,000** ಗಳನ್ನು ಎಸಿ ಬಿಲ್ ಮೂಲಕ ಡ್ರಾ ಮಾಡಿದ್ದು Air fare, visa charges, DA, Medical insurance, Domestic travel and miscellaneous charges of one ST Category mertit student for study abroad programme ವರ್ಷಾಂತ್ಯಕ್ಕೆ ಹೊಂದಾಣಿಕೆ ಮಾಡಿರುವುದಿಲ್ಲ.

ಇದರಿಂದಾಗಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಗಳ ಉದ್ದೇಶಿತ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಅನುದಾನವನ್ನು ನಿರ್ದಿಷ್ಟ ಅವಧಿಯಲ್ಲಿ ವೆಚ್ಚಕ್ಕೆ ಭರಿಸದೆ ಇರುವುದರಿಂದ ಯೋಜನೆಗಳ ಉದ್ದೇಶ ಈಡೇರಿಸದೇ ಇರುವುದಕ್ಕೆ ಸೂಕ್ತ ವಿವರಣೆ ನೀಡುವುದು. ಹಣ ಬಳಕೆ ಪ್ರಮಾಣ ಪತ್ರ ಸರ್ಕಾರಕ್ಕೆ ಸಲ್ಲಿಸಿದ ದಾಖಲೆಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ **89** ದಿನಾಂಕ **25.01.2020** ನೀಡಲಾಗಿ ವಿಭಾಗದವರು ಯಾವುದೇ ಅನುಸರಣೆ ನೀಡಿರುವುದಿಲ್ಲ ಕಾರಣ ಮೊತ್ತ ರೂ **9,65,000/–** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

87 ಕಂಡಿಕೆಯಲ್ಲಿ ತೋರಿಸಿದ ಆಕ್ಷೇಪಣೆಯಂತೆ **₹.9,65,000** ಗಳಲ್ಲಿ ಈ ಕೆಳಗಿನಂತೆ ಹೊಂದಾಣಿಕೆಯಾಗಿದೆ

ಅ. ಸಂ	ಯೋಜನೆಗಳು	ಎಬಿಎಸಿ	ವೆಚ್ಚ ಹೊಂದಾಣಿಕೆ	ಬಿ.ಆರ್.ಸಂ.
1	ಎಸ್.ಸಿ.ಪಿ	3698	302000	29495 31.03.2019
2	ಟಿ. ಎಸ್.ಪಿ	3699	302000	29496 31.03.2019
		ಒಟ್ಟು	604000	

₹.6,04,000 ರಷ್ಟು **2018–19** ನೇ ಸಾಲಿನಲ್ಲಿ ಹೊಂದಾಣಿಕೆಯಾಗಿರುತ್ತದೆ. ಕಾರಣ ಒಟ್ಟು ರಕಮಿನಲ್ಲಿ **6,04,000** ರಷ್ಟು ಕಡಿಮೆ ಮಾಡಿ ಬಾಕಿ ಉಳಿದ ಮೊತ್ತ ರಕಮು **₹.3,61,000** ಗಳನ್ನು ಮುಂದುವರೆಸಲು ಕೋರಲಾಗಿದೆ.

88	ಲೆಕ್ಕ ಶಿರ್ಷಿಕೆ 3814 ಹಾಗೂ 3815 ಯೋಜನೆ ಅಡಿ 2017–18 ರ ಬಜೆಟ್‌ನಲ್ಲಿ ಕಂಡು ಬಂದ ನ್ಯೂನತೆ(ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.22) ಲೆಕ್ಕ ಶಿರ್ಷಿಕೆ 3814 ಹಾಗೂ 3815 ಯೋಜನೆಯಡಿ 2017–18 ಆಯವ್ಯಯ ಅಂದಾಜು ಪುಸ್ತಕ ಪ್ರಕಾರ ರೂ.95,12,000.00ಗಳ ಮೊತ್ತಕ್ಕೆ ಪರಿಷ್ಕೃತ ಅನುದಾನ ಕಲ್ಪಿಸಲಾಗಿದೆ. ಇದಕ್ಕೆ ಎದುರಾಗಿ ರೂ.57,18,101.00ಗಳ ವೆಚ್ಚ ಮಾಡಲಾಗಿದೆ. ಹಾಗೂ ಲೆಕ್ಕಶೀರ್ಷಿಕೆ 3815 TSP ಯೋಜನೆ ಅಡಿ ರೂ.15,00,000/– ಗಳ ಮೊತ್ತಕ್ಕೆ ಎದುರಾಗಿ ರೂ8,45,664.00 ಗಳ ವೆಚ್ಚ ಮಾಡಲಾಗಿದೆ. ಲೆಕ್ಕಶೀರ್ಷಿಕೆ 3814 ಹಾಗೂ 3815 ಅಡಿವೆಚ್ಚಗಳ ಕುರಿತು ವೋಚರಗಳನ್ನು ಪರಿಶೀಲಿಸಲಾಗಿ ಲ್ಯಾಪಟಾಪ ಸಮಿನಾರ್ ಚೇರ್ಸ್, ಮಲ್ಟಿಮೀಡಿಯಾ ಪ್ರೋಜೆಕ್ಟರ್, ಗುತ್ತಿಗೆ ಆಧಾರದ ಕೆಲಸಕ್ಕಾಗಿ ವೆಚ್ಚಗಳನ್ನು ಮಾಡಿದ್ದು ಈ ಕುರಿತು. SCP ಹಾಗೂ TSP ಯೋಜನೆಗಳ ಉದ್ದೇಶಿತ ಕಾರ್ಯಕ್ರಮಕ್ಕಾಗಿ ವೆಚ್ಚ ಮಾಡಿದ ಕುರಿತು ದಾಖಲೆ ಹಾಗೂ ಅನುದಾನ ಬಿಡುಗಡೆ ವಿವರಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಹಣ ಬಳಕೆ ಪ್ರಮಾಣ ಪತ್ರ ಸರ್ಕಾರಕ್ಕೆ ಸಲ್ಲಿಸಿದ ಕುರಿತು ದಾಖಲೆಗಳನ್ನು ಹಾಜರಪಡಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ 83 ದಿನಾಂಕ 24.01.2020 ನೀಡಲಾಗಿ ವಿಭಾಗದವರು ಯಾವುದೇ ಅನುಸರಣೆ ನೀಡಿರುವುದಿಲ್ಲ ಕಾರಣ ಮೊತ್ತ ರೂ (5718101+845664)=65,63,765/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	88 ಕಂಡಿಕೆಯಲ್ಲಿ ವಿವರಿಸಿದ ದಾಖಲೆಗಳನ್ನು ಪರಿಶೋಧನೆಯ ಸಮಯದಲ್ಲಿ ಹಾಜರುಪಡಿಸಲಾಗಿದೆ. ಆದಾಗ್ಯೂ ಸದರಿ ದಾಖಲೆಗಳನ್ನು ಮುಂದಿನ ಲೆಕ್ಕ ಪರಿಶೋಧನೆಯಲ್ಲಿ ಪುನಃ ಹಾಜರುಪಡಿಸಲಾಗುವುದು.
	ಟಿಡಿಎಸ್	
89	TDS ಕಟಾಯಿಸದೇ ಇರುವ ಕುರಿತು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.71) ಕೃಷಿ ವಿಶ್ವವಿದ್ಯಾಲಯ ಧಾರವಾಡ ಹಣಕಾಸು ನಿಯಂತ್ರಣಾಧಿಕಾರಿಗಳ ಕಾರ್ಯಾಲಯದ 2017–18 ನೇ ಸಾಲಿನ ಲೆಕ್ಕಪರಿಶೋಧನೆ ವೇಳೆ ಪರಿಶೀಲಿಸಲಾಗಿ ಆದಾಯ ತೆರಿಗೆ ಕಾಯ್ದೆ–1961 ರ ನಿಯಮ 194(C) ಪ್ರಕಾರ ಒಂದು ಬಿಲ್ ರೂ.30,000/– ಮೀರಿದ ಮೊತ್ತಕ್ಕೆ. ಹಾಗೂ ಒಬ್ಬನೆ ಪೂರೈಕೆದಾರರರಿಂದ ಸೇವೆ ಪಡೆದ ಮೊತ್ತ ವಾರ್ಷಿಕವಾಗಿ ರೂ.1,00,000/– ಮೀರಿದ ಮೊತ್ತಕ್ಕೆ ಪೂರೈಕೆದಾರ ವ್ಯಕ್ತಿಯಾಗಿದ್ದರೆ 1% ಮತ್ತು ಸಂಸ್ಥೆಯಾಗಿದ್ದರೆ 2%TDSಅನ್ನು ಕಟಾಯಿಸಬೇಕೆಂದು ನಿಯಮವಿದ್ದು ಕಟಾಯಿಸಿದ ದಾಖಲೆ ನೀಡಲು ಕೋರಿದೆ. ವಿವರ ಈ	89 ಆದಾಯ ತೆರಿಗೆಯನ್ನು ಕಟಾಯಿಸುವ ಕುರಿತು ಸದರಿ ಎಜೆನ್ಸಿಗಳನ್ನು ವಿಚಾರಿಸಲಾಗಿ ಪ್ರತಿ ವರ್ಷ ಆದಾಯ ತೆರಿಗೆ ಲೆಕ್ಕ ವಿವರಣೆ ಸಲ್ಲಿಸುವಾಗ ಪರಿಶೀಲಿಸಿ ಹೆಚ್ಚುವರಿ/ಕಡಿಮೆ ಯಾದಲ್ಲಿ ಬರಣಾ ಮಾಡಲಾಗುತ್ತದೆ ಎಂದು ತಿಳಿಸಿರುತ್ತಾರೆ.

ಕೆಳಗಿನಂತಿವೆ.

ಕ್ರ.ಸಂ	ಬಿಲ್ ಸಂಖ್ಯೆ/ದಿನಾಂಕ	ವಿವರ	ಮೊತ್ತ	ಟಿ ಡಿ ಎಸ್ ಮೊತ್ತ @ 2%
1	199/15.05.17	I A Decorator	69,700	1394
2	758/28.09.17	ಕನ್ನಿಕಾ ಪ್ಲೇಕ್ಸ್ ಪ್ರಿಂಟ್ಸ್	83,600	1672
3	0004	ಅನ್ನಪೂರ್ಣೆಶ್ವರ ಕೆಟರಿಂಗ್ಸ್	82,500	1650
		ಒಟ್ಟು	2,35,800	4716

ಈ ಕುರಿತು ವಿಚಾರಣಾ ಪತ್ರಸಂಖ್ಯೆ:05ದಿನಾಂಕ:07.01.2020ರಂದು ಕೋರಿದ್ದು ನೀಡಿದ ಅನುಸರಣೆಯಲ್ಲಿ ಕಛೇರಿಗೆ ಮಾಹಿತಿ ಲಭ್ಯವಿಲ್ಲದ ಕಾರಣ ಹಾಗೂ ನಜರಚೂಕಿನಿಂದ TDS ಕಟಾಯಿಸಿರುವುದಿಲ್ಲ ಎಂದು ತಿಳಿಸಿದ್ದು ಲೆಕ್ಕ ಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ ಕಾರಣ ರೂ.4,716/–ಗಳನ್ನು ವಸೂಲಾತಿ ಮಾಡಿ ಸಂಬಂಧಿಸಿದ ಇಲಾಖೆಗೆ ಭರಣ ಮಾಡಲು ಸೂಚಿಸಲಾಗಿದೆ.

90 ಶ್ರೀ.ಎಮ್.ಕೆ.ಕುಳ್ಳೇಗೌಡ ಇವರಿಗೆ ನೀಡಿರುವ ಗೌರವ ಧನಕ್ಕೆ **IT.R.194 (J)** ಪ್ರಕಾರ **TDS** ಕಟಾವಣೆ ಮಾಡದಿರುವ ಕುರಿತು.
(ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.72)

ಲೆಕ್ಕ ಶೀರ್ಷಿಕೆ 1004/300 ಅಡಿಯಲ್ಲಿ ಶ್ರೀ ಎಮ್.ಕೆ.ಕುಳ್ಳೇಗೌಡ ಸಂಪನ್ಮೂಲ ವ್ಯಕ್ತಿ ಎಂದು ಪ್ರತಿ ಆರು ತಿಂಗಳಿಗೊಮ್ಮೆ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಪಡೆದು ಮುಂದುವರೆಸಲಾಗಿದೆ. ಶ್ರೀಯುತರಿಗೆ 2017–18 ನೇ ಸಾಲಿನಲ್ಲಿ ಪಾವತಿಯಾದ ಗೌರವಧನದ ವಿವರ ಈ ಕೆಳಗಿನಂತಿದೆ.

ತಿಂಗಳು	ಮೊತ್ತ
ಏಪ್ರೀಲ್ – ಜೂನ್–2017	30000
ಆಗಸ್ಟ–2017	10000

90 ಶ್ರೀ.ಎಮ್.ಕೆ.ಕುಳ್ಳೇಗೌಡ ಇವರು ಪ್ರತಿ ವರ್ಷ ಆದಾಯ ತೆರಿಗೆ ವಿವರವನ್ನು ಸಲ್ಲಿಸುತ್ತಿರುವುದಾಗಿ ತಿಳಿಸಿರುತ್ತಾರೆ. ವಿವರವನ್ನು ಪಡೆದು ಮುಂದಿನ ಲೆಕ್ಕ ತನಿಖೆಗೆ ಒದಗಿಸಲಾಗುವುದು

ಸೆಪ್ಟಂಬರ್–2017	10000
ಅಕ್ಟೋಬರ್–2017	10000
ನವ್ಹಂಬರ್–2017	10000
ಡಿಸೆಂಬರ್–2017	10000
ಜನೇವರಿ–2018	10000
ಫೆಬ್ರುವರಿ–2018	10000
ಮಾರ್ಚ್–2018	10000
ಒಟ್ಟು	110000

ವರ್ಷ ಪೂರ್ತಿ ರೂ 1,10,000=00 ಗಳಷ್ಟು ಮೊತ್ತವನ್ನು ಗೌರವಧನವೆಂದು ಪಾವತಿಸಿದ್ದು ಆದಾಯ ತೆರಿಗೆ ನಿಯಮ 194(j) ಪ್ರಕಾರ fees for professional services or technical services Including architectural service TDS to be deducted at 10% **ಎಂದಿದ್ದು ಮೇಲೆ ತೋರಿಸಿದ ಪಾವತಿಗೆ 11,000 ಗಳ** TDS **ಕಟಾವಣೆ ಮಾಡಬೇಕಿದ್ದು ಈ ಕುರಿತು ಸೂಕ್ತ ವಿವರಣೆ ನೀಡಲು ಕೋರಿ,** ಲೆಕ್ಕಪರಿಶೋಧನಾ ವಿಚಾರಣಾ ಪತ್ರಸಂಖ್ಯೆ:06 ನ್ನು ದಿನಾಂಕ:08.01.2020 ರಂದು ನೀಡಲಾಗಿತ್ತು ದಿನಾಂಕ:14.02.2020ರಂದು ನೀಡಿದ ಅನುಸರಣೆಯಲ್ಲಿ **ಶ್ರೀ ಎಮ್.ಕೆ.ಕುಳ್ಳೇಗೌಡ ಅವರು ಪ್ರತಿ ವರ್ಷ** TDS **ಮಾಡಿರುವುದಾಗಿ ತಿಳಿಸಿರುತ್ತಾರೆ ಎಂದು ಬರಕೊಂಡಿದ್ದು ಈ ಕುರಿತು ಸೂಕ್ತ ದಾಖಲೆಗಳಿಲ್ಲದೇ ಇರುವುದರಿಂದ ಲೆಕ್ಕ ಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ**ಕಾರಣ **ರೂ.11,000/– ಗಳನ್ನು ವಸೂಲಾತಿ ಮಾಡಿ ಸಂಬಂಧಿಸಿದ ಇಲಾಖೆಗೆ ಭರಣ ಮಾಡಲು ಸೂಚಿಸಲಾಗಿದೆ.**

91 ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಪಡೆದು ಭೂಮಾಪಕರ ಹುದ್ದೆಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿರುವ ಕುರಿತು ಮತ್ತು ಇವರ ವೇತನದಲ್ಲಿ ವೃತ್ತಿ ತೆರಿಗೆಯನ್ನು ಕಟಾಯಿಸದಿರುವ ಕುರಿತು.(ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.73)

ಲೆಕ್ಕ ಶೀರ್ಷಿಕೆ 1015/300 ಅಡಿಯಲ್ಲಿ ಖಾಲಿ ಇರುವ ಭೂಮಾಪಕರ ಹುದ್ದೆಗೆ ದಿನಾಂಕ 22.02.2017 ರಂದು ಜರುಗಿದ 33 ನೇ ವ್ಯವಸ್ಥಾಪನಾ ಮಂಡಳಿಯು ವಿಶೇಷ ಪ್ರಕರಣವೆಂದು ಪರಿಗಣಿಸಿ ಶ್ರೀ ಎಸ್.ಬಿ.ಕಾಳಗಿ ಇವರನ್ನು ಮಾಸಿಕ ರೂ 15,000=00 ವೇತನದೊಂದಿಗೆ ಗುತ್ತಿಗೆ ಆಧಾರದಲ್ಲಿ ಸೇವೆ ಪಡೆಯಲು ಅನುಮೋದನೆ ನೀಡಿದ್ದು ಅವಶ್ಯಕತೆ ಇದ್ದಲ್ಲಿ ವಿಶ್ವವಿದ್ಯಾಲಯದ ನಿಯಮಾವಳಿಗಳನ್ನು ಪಾಲಿಸಿ ಬಾಹ್ಯಮೂಲಗಳಿಂದ ಸೇವೆಗಳನ್ನು ಪಡೆಯಲು ಸೂಚಿಸಿದೆ. ಭೂಮಾಪಕ ಹುದ್ದೆಗೆ ಸೇವೆ ಪಡೆಯುವುದಾದಲ್ಲಿ ವಿಶ್ವವಿದ್ಯಾಲಯದ ನಿಯಮಗಳಂತೆ Notification ನೀಡಿ ಸಂದರ್ಶನದ ಮೂಲಕ ಆಯ್ಕೆ ಮಾಡಬೇಕಿದ್ದು ಈ ರೀತಿ ಯಾವುದೇ ಒಬ್ಬ ವ್ಯಕ್ತಿಯನ್ನು ನೇರವಾಗಿ ವ್ಯವಸ್ಥಾಪನಾ ಮಂಡಳಿ ಶಿಫಾರಸ್ಸು ಮಾಡಲು ಪರಿಗಣಿಸಿದ ಮಾನದಂಡಗಳ ಕುರಿತು ಲೆಕ್ಕ ಪರಿಶೋಧನೆಗೆ ವಿವರಣೆ ಒದಗಿಸಲು ಕೋರಿದೆ. ಮುಂದುವರೆದು ಶ್ರಿಯುತರಿಗೆ ಮಾಸಿಕವಾಗಿ ಪಾವತಿಯಾದ 15000 ಗಳ ಸಂಬಳಕ್ಕೆ ವೃತ್ತಿ ತೆರಿಗೆ ಕಟಾಯಿಸಿರುವುದಿಲ್ಲ ವಿವರ ಈ ಕೆಳಗಿನಂತಿವೆ.

Vr.No	Br.No.	Amount	PT
1666	7674	13548	0
27	23655	15000	200
960	16609	15000	200
1719	12137	15000	200
563	10963	15000	200
857	13485	14516	0
1878	20180	12580	0
	Total	**1,00,644**	**800**

ಈ ಕುರಿತು ಲೆಕ್ಕಪರಿಶೋಧನೆ ವಿಚಾರಣಾ ಪತ್ರ ಸಂಖ್ಯೆ:31 ದಿನಾಂಕ:14.01.2020 ನ್ನು ನೀಡಿದ್ದು ದಿನಾಂಕ:14.02.2020 ರಂದು ವಿಭಾಗದವರು ನೀಡಿದ ಅನುಸರಣೆಯಲ್ಲಿ ವ್ಯವಸ್ಥಾಪಣಾ ಮಂಡಳಿಯಲ್ಲಿ ಕೂಲಂಕುಷವಾಗಿ ಚರ್ಚಿಸಿ ನಿರ್ಣಯ ತೆಗೆದುಕೊಂಡಿರುವುದಾಗಿ ತಿಳಿಸಿದ್ದು ಲೆಕ್ಕಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ ಕಾರಣ ವೇತನ ಮೊತ್ತ ರೂ.1,00,644/– ಆಕ್ಷೇಪಣೆಯಲ್ಲಿಡಲಾಗಿದೆ. ಮತ್ತು ವೃತ್ತಿ ತೆರಿಗೆ ರೂ.800/– ಗಳನ್ನು ವಸೂಲಾತಿಗೆ ಸೂಚಿಸಿದೆ.

91 ಕೆಲಸದ ಅವಶ್ಯಕತೆಯಂತೆ ವ್ಯವಸ್ಥಾಪನಾ ಮಂಡಳಿಯಲ್ಲಿ ಅನುಮೋದನೆ ಪಡೆದು ನಿವೃತ್ತ ಅಧಿಕಾರಿ/ಸಿಬ್ಬಂದಿಗಳಿಂದ ಸೇವೆ ಪಡೆಯಲಾಗಿದೆ. ಕೆಲಸ ಕಾರ್ಯಗಳು ಮುಗಿದ ನಂತರ ಅಂತಹ ಭೂ ಮಾಪಕರ ಸೇವೆಯನ್ನು ಮುಂದುವರೆಸಲಾಗುವುದಿಲ್ಲ.

92	ಲೆಕ್ಕಶೀರ್ಷಿಕೆ 1451/300 ಅಡಿಯಲ್ಲಿ **Property tax** ಭರಣಾ ಮಾಡಿದ್ದು ಪಾವತಿಯಲ್ಲಿ ಕಂಡು ಬಂದ ನ್ಯೂನ್ಯತೆಗಳು. (ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕಂ.ಸಂ.74) ಲೆಕ್ಕಶೀರ್ಷಿಕೆ 1451/300 ಅಡಿಯಲ್ಲಿ 16,02,797 ಗಳಷ್ಟು ಮೊತ್ತವನ್ನು Property tax ಎಂದು ಆಯುಕ್ತರು ಮಹಾನಗರ ಪಾಲಿಕೆ ಹುಬ್ಬಳ್ಳಿ ಧಾರವಾಡ ಇವರಿಗೆ ಸಂದಾಯ ಮಾಡಿದ್ದು ಒಟ್ಟು 87 ಆಸ್ತಿಗಳಿಂದ ದಂಡ ಸಹಿತ ಪಾವತಿಯಾಗಿದೆ Karnataka municipal corporation Act 1976 Chapter X ನಿಯಮ 110 ರಲ್ಲಿ ತಿಳಿಸಿದಂತೆ ಆಸ್ತಿ ತೆರಿಗೆಗೆ ವಿನಾಯತಿ ಪಡೆಯಬಹುದಿತ್ತು. ಮುಂದುವರೆದು ಒಟ್ಟು ದಂಡದ ರೂಪದಲ್ಲಿ ರೂ.3,01,587.00 ಗಳನ್ನು ಪಾವತಿಸಲಾಗಿದೆ ಆಸ್ತಿ ತೆರಿಗೆ ಪಾವತಿಸುವಾಗ ಮಹಾನಗರ ಪಾಲಿಕೆ ಕಡೆಯಿಂದ ಎಪ್ರೀಲ್ ತಿಂಗಳಲ್ಲಿ ತೆರಿಗೆ ಪಾವತಿ ಮಾಡುವವರಿಗೆ 10% ರಿಯಾಯತಿ ನೀಡಲಾಗುತ್ತದೆ ಇಂತ ಸೌಲಭ್ಯಗಳನ್ನು ಮಹಾನಗರ ಪಾಲಿಕೆಯವರು ಒದಗಿಸಿದಾಗಲೂ ಕೂಡಾ ಜೂನ್–30 ರ ನಂತರ ತೆರಿಗೆ ಪಾವತಿಸಿ ದಂಡವನ್ನು ಕಟ್ಟಿರುವುದು ಕರ್ನಾಟಕ ಆರ್ಥಿಕ ಸಂಹಿತೆ–1958 ಅನುಚ್ಛೇಧ 15ರಲ್ಲಿ ತಿಳಿಸಿದ ಆರ್ಥಿಕ ಔಚಿತ್ಯ ಸೂತ್ರಗಳ ಉಲ್ಲಂಘನೆ ಎಂದು ಪರಿಗಣಿಸಬಹುದಾಗಿದೆ. ಕಾರಣ ಮೇಲೆ ತಿಳಿಸಿದ ನ್ಯೂನ್ಯತೆಗಳ ಕುರಿತು ಸೂಕ್ತ ವಿವರಣೆ ನೀಡಲು ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:77 ದಿನಾಂಕ: 24.01.2020 ರಂದು ನೀಡಿದ್ದು, ದಿನಾಂಕ 14.02.2020 ರಂದು ವಿಭಾಗದವರು ಸಲ್ಲಿಸಿದ ಅನುಸರಣೆಯಲ್ಲಿ ಏಪ್ರೀಲ್ ತಿಂಗಳಲ್ಲಿ ಆಯವ್ಯಯ ಹಂಚಿಕೆಯಾಗದ ಪ್ರಯುಕ್ತ ಈ ತಿಂಗಳಲ್ಲಿ ಪಾವತಿ ಮಾಡುವುದು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿದ್ದು ಲೆಕ್ಕ ಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ ಕಾರಣ ರೂ 16,02,797/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	92 ಕಂಡಿಕೆಯಲ್ಲಿ ವಿವರಿಸಿದಂತೆ ಕ್ರಮ ಜರುಗಿಸಲಾಗುವುದು

93 ಟಿಡಿಎಸ್(TDS)ಕಟಾಯಿಸಿದ ದಾಖಲೆಗಳನ್ನು ಒದಗಿಸುವ ಕುರಿತು.
(ಕುಲಸಚಿವರ ಕಛೇರಿ–ಕಂ.ಸಂ.18)

ಕೃಷಿ ವಿಶ್ವವಿದ್ಯಾಲಯ ಕುಲಸಚಿವರ ಕಾರ್ಯಾಲಯ, ಧಾರವಾಡದ 2017–18ನೇ ಸಾಲಿನ ಲೆಕ್ಕಪರಿಶೋಧನೆ ವೇಳೆ ಪರಿಶೀಲಿಸಲಾಗಿ ಆದಾಯ ತೆರಿಗೆ ಕಾಯ್ದೆ 194(c) ಪ್ರಕಾರ ಸಂಘ ಸಂಸ್ಥೆಗಳಿಂದ ಮೂಲದಲ್ಲಿಯೇ ತೆರಿಗೆ ಕಟಾಯಿಸಿದ ದಾಖಲೆ ಅಂದರೆ ಪೂರೈಕೆದಾರ, ಸಂಸ್ಥೆಯಾದಲ್ಲಿ 2% & ವ್ಯಕ್ತಿಯಾದಲ್ಲಿ 1% ರಂತೆ ಮೂಲದಲ್ಲಿಯೇ ತೆರಿಗೆ ಕಟಾಯಿಸಿ ಬಿಲ್ಲನ್ನು ಪಾವತಿಸಬೇಕೆಂಬ ನಿಯಮವಿರುತ್ತದೆ, ಆದರೆ TDS ಕಟಾಯಿಸದೇ ಪಾವತಿಸಿದ ಬಿಲ್ಲುಗಳ ವಿವರ ಈ ಕೆಳಗಿನಂತಿವೆ.

Sl.No.	Invoice No.	Particulars	Amt	TDS
1	880/18.12.2017	Deshpande Publicity	46086	923
2	851/14.11.2017	Deshpande Publicity	96718	1934
3	D0000078/ 12.7.17	Deshpande Publicity	34529	691
4	D0000097/29.7.2017	Deshpande Publicity	62189	1244
5	0024/5.9.2017	Yakshi Communications	40479	811
6	393/5.9.2017	Deshpande Publicity	58272	1165
				6767 +19680
				26447

ಈ ಕುರಿತು ಸೂಕ್ತ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರಪಡಿಸಲು ಕೋರಿದೆ, ಹಾಗೇ ರೂ.19,680/– ರೂ ಗಳ ಟಿಡಿಎಸ್ ಕಟಾಯಿಸಿದ ದಾಖಲೆ ಹಾಜರಪಡಿಸಲು ಕೋರಿ ಲೆಕ್ಕ ಪತ್ರ ವಿಚಾರಣಾ ಪತ್ರಸಂಖ್ಯೆ: 05 ದಿನಾಂಕ; 03.08.2019 ನೀಡಲಾಗಿ ಯಾವುದೇ ಅನುಸರಣೆ ಸಲ್ಲಿಸಿರುವುದಿಲ್ಲ. ಕಾರಣ ಮೊತ್ತ ರೂ 26,447=00 ಗಳನ್ನು ವಸೂಲಾತಿಯಲ್ಲಿಡಲಾಗಿದೆ.

93 ಟಿಡಿಎಸ್ ಕಟಾಯಿಸಿದ ದಾಖಲೆಗಳನ್ನು ಮೂಂದಿನ ಲೆಕ್ಕ ತನಿಖೆಯಲ್ಲಿ ಹಾಜರಪಡಿಸಲಾಗುವುದು.

94

ಆದಾಯ ತೆರಿಗೆ ಕಾಯ್ದೆ 194(c) ಪ್ರಕಾರ ಮೂಲದಲ್ಲಿಯೇ TDS ಕಟಾಯಿಸದೇ ಇರುವ ಕುರಿತು. (ಸ.ಹ.ನಿ–ವೈಯಕ್ತಿಕ ಖಾತೆ ಕಂ.ಸಂ.10)

2017–18 ನೇ ಲೆಕ್ಕ ಪರಿಶೋಧನೆ ವೇಳೆ ಪರಿಶೀಲಿಸಲಾಗಿ ಈ ಕೆಳಕಂಡಂತೆ ಎನ್.ಡಿ.ಸಿ ಬಿಲ್ಲುಗಳಲ್ಲಿ ನ್ಯೂನ್ಯತೆಗಳು ಕಂಡುಬರುತ್ತವೆ.

1) Income tax rule 194(c) ಪ್ರಕಾರ catering service ಗಳಿಗೆ ಬಿಲ್ಲುಗಳ ಮೂಲದಲ್ಲಿಯೇ Income tax ಕಟಾವಣೆ ಮಾಡುವುದು ಕಡ್ಡಾಯವಾಗಿರುತ್ತದೆ. ಆದರೆ Devraj caterers ಅವರಿಗೆ ಒಟ್ಟು **1,52,630/–** ರೂಗಳನ್ನು ಟಿ.ಡಿ.ಎಸ್. ಕಟಾಯಿಸದೇ ಬಿಲ್ಲುಗಳನ್ನು ಪಾವತಿ ಮಾಡಲಾಗಿದೆ. Income tax rule 194(c) ಪ್ರಕಾರ ಒಂದು ಬಿಲ್ಲು **30,000/–** ಮತ್ತು ಒಂದು ವರ್ಷಕ್ಕೆ **1,00,000/–** ದಾಟಿದರೆ ಮೂಲ ಬಿಲ್ಲಿನಲ್ಲಿಯೇ ಟಿ.ಡಿ.ಎಸ್. ಕಟಾಯಿಸುವುದು ಕಡ್ಡಾಯವಾಗಿರುತ್ತದೆ. ವಿವರ ಕೆಳಗಿನಂತಿರುತ್ತದೆ.

Devraj caterers ನ ಊಟ ಮತ್ತು ಉಪಹಾರದ ವಿವರ

NDC BILL	Amount	Quatation	TDS 1%
431/31.03.18/5331/300(580)	19000	-	
124/08.09.17/5007/581(362)	30031	-	
25/30.06.17/1331/300(1482)	11954	-	
03/12.05.17/1331/300(572)	15750	-	
08/24.05.17/1331/300(837)	16150	ಇರುವುದಿಲ್ಲ	
239/29.12.17/1331/300(1806)	15115	ಇರುವುದಿಲ್ಲ	
57/15.07.17/1331/300(839)	18930	-	
194/22.11.17/1331/300(2005)	25700	Original bill ಇರುವುದಿಲ್ಲ ಝೆರಾಕ್ಸ ಮೇಲೆ payment ಮಾಡಲಾಗಿದೆ.	
93/24.08.17/3823/300(1347)	37500	-	
Total	190130		1901

94 Devraj caterers ಇವರು ಆದಾಯ ತೆರಿಗೆ ಭರಣಾ ವಿವರವನ್ನು ಸಲ್ಲಿಸುತ್ತಿರುವುದಾಗಿ ತಿಳಿಸಿದ್ದರಿಂದ ಆದಾಯ ತೆರಿಗೆಯನ್ನು ಕಡಿತಗೊಳಿಸಿರುವುದಿಲ್ಲ

	ವಿಶ್ವವಿದ್ಯಾಲಯದ guest house ನಲ್ಲಿ ವಿಶ್ವವಿದ್ಯಾಲಯವು ನೇಮಕ ಮಾಡಿದ ಸರ್ಕಾರಿ ಕುಕ್ ಕಮ್ care taker ಇದ್ದಾಗಲೂ ವಿಶ್ವವಿದ್ಯಾಲಯದಿಂದ ಹೊರಗೆ ಊಟ ಮತ್ತು ಉಪಹಾರವನ್ನು ಮಾಡಿಸಿರುವುದಕ್ಕೆ ವಿವರಣೆ ಮತ್ತು ಕಾರಣ ಇರುವುದಿಲ್ಲ. ಈ ಎಲ್ಲ ದಾಖಲೆಗಳನ್ನ ಒದಗಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ 2 ದಿನಾಂಕ 18.06.19 ನೀಡಲಾಗಿ ಅನುಸರಣೆಯಲ್ಲಿ Income tax ಕಟಾವಣೆ ಮಾಡಿದ ಮೊತ್ತವನ್ನು ವರ್ಷದ ಕೊನೆಗೆ ತುಂಬುವುದಾಗಿ ತಿಳಿಸಿದ್ದು ಪ್ರತಿಯೊಂದು ಬಿಲ್ಲಿಗೆ Income tax ಕಟಾವಣೆ ಮಾಡಿರುವುದಿಲ್ಲ ಕಾರಣ ಮೊತ್ತ ರೂ 1,901/- ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.	
95	2017-18 ನೇ ಸಾಲಿನಲ್ಲಿ ಸಾಮಾನ್ಯ ಭವಿಷ್ಯ ನಿಧಿಯಿಂದ ತೊಡಗಿಸಿದ ಮುದ್ದತ್ ಠೇವಣಿಗಳಿಗೆ **bank confirmation** ಪಡೆದಿಯದಿರುವ ಕುರಿತು ಮತ್ತು ಬ್ಯಾಂಕ್‌ನಲ್ಲಿ **TDS** ಕಟಾವಣೆ ಮಾಡಿರುವ ಕುರಿತು. (ಸಾಮಾನ್ಯ ಭವಿಷ್ಯ ನಿಧಿ ಕಂ.ಸಂ.5) 2017-18 ನೇ ಸಾಲಿನಲ್ಲಿ ಸಾಮಾನ್ಯ ಭವಿಷ್ಯ ನಿಧಿಯಿಂದ ರೂ 52,50,00,000/- ಗಳಷ್ಟು ಮುದ್ದತ್ ಠೇವಣಿಗಳನ್ನು ತೊಡಗಿಸಿದ್ದು ಮಾರ್ಚ್ 31 2018 ರ ಅಂತ್ಯಕ್ಕೆ ಮುದ್ದತ್ ಠೇವಣಿಗಳಿಗೆ **bank confirmation** ಪಡೆದಿದ್ದಲ್ಲಿ ಲೆಕ್ಕ ಪರಿಶೋಧನೆಗೆ ಒದಗಿಸಲು ಕೋರಿದೆ. ಮುಂದುವರೆದು ಸದರ ವರ್ಷದಲ್ಲಿ ಅವಧಿ ಪೂರ್ಣಗೊಂಡ ಮೊತ್ತಕ್ಕೆ **TDS** ಕಟಾವಣೆ ಮಾಡಿದ್ದು (ಕೆ.ವಿ.ಜಿ. ಬ್ಯಾಂಕ್ ಹೊರತುಪಡಿಸಿ) ಎಸ್.ಬಿ.ಆಯ್ ಮತ್ತು ಅಲಹಾಬಾದ್ ಬ್ಯಾಂಕ್‌ನವರು ಒಟ್ಟಾರೆ 9,35,873/- ಕಟಾವಣೆ ಮಾಡಿಕೊಂಡಿದ್ದು ಕೆ.ವಿ.ಜಿ. ಬ್ಯಾಂಕ್‌ನವರು **TDS** ಕಟಾವಣೆ ಮಾಡಿಲ್ಲದಿರುವುದರಿಂದ **educational institute rebate** ನೀಡಿರುವುದಾಗಿರುವುದನ್ನು ದೃಢೀಕರಿಸಿಕೊಂಡು **TDS** ಕಟಾವಣೆ ಮಾಡಿಕೊಂಡ ಬ್ಯಾಂಕ್‌ಗಳಿಂದ ರಿಯಾಯಿತಿ ಪಡೆಯಲು ಕ್ರಮ ಕೈಗೊಳ್ಳಲು ಕೋರಿ ಲೆಕ್ಕ ವಿಚಾರಣಾ ಪತ್ರ 1 ನ್ನು ದಿನಾಂಕ 15.06.2019 ರಲ್ಲಿ ನೀಡಲಾಗಿ ಯಾವುದೇ ಅನುಸರಣೆ ನೀಡಿರುವುದಿಲ್ಲ ಕಾರಣ ಸೂಕ್ತ ಅನುಸರಣೆ ನೀಡುವವರೆಗೆ ರೂ 9,35,873/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	95 ಒಂದು ಬ್ಯಾಂಕಿನಿಂದ ಇನ್ನೊಂದು ಬ್ಯಾಂಕಿನ ನಿಯಮಾವಳಿಗಳು ಬೇರೆ ಬೇರೆ ಇರುವುದರಿಂದ ಸದರಿ ಬ್ಯಾಂಕಿನ ನಿಯಮಾವಳಿಯನ್ವಯ ಕಟಾವು ಮಾಡಿದ್ದಾರೆ. ಆದಾಗ್ಯೂ ಈ ಕುರಿತು ಸದರಿ ಬ್ಯಾಂಕಿನ ವ್ಯವಸ್ಥಾಪಕರೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಂಡು ಮುಂದಿನ ಲೆಕ್ಕ ತನಿಖೆಗೆ ಒದಗಿಸಲಾಗುವುದು

96 **ಆದಾಯ ತೆರಿಗೆ ಕಟಾವಣೆ ಮಾಡದಿರುವ ಕುರಿತು.**

(ಕೃಷಿ ಸಂಶೋಧನಾ ಕೇಂದ್ರ ಪ್ರಭುನಗರ ಕಂ.ಸಂ.15)

2017–18 ನೇ ಸಾಲಿನ AbAc/3563/501 ವೋಚರ್‌ಗಳನ್ನು ಪರಿಶೀಲಿಸಲಾಗಿ ಮೆ॥ ಕರ್ನಾಟಕ ಅಗ್ರೋ ಕೆಮಿಕಲ್ಸ್ ಧಾರವಾಡ ಇವರಿಂದ ವಿವಿಧ ಕೆಮಿಕಲ್ಸ್ ಸಾಮಗ್ರಿಗಳನ್ನು ಖರೀದಿಸಲಾಗಿರುತ್ತದೆ ಸದರಿ ಖರೀದಿಸಿದ ಕೆಮಿಕಲ್ಸ್ ಸಾಮಗ್ರಿಗಳ ಒಟ್ಟು ಮೊತ್ತ ರೂ **128920=00** ಗಳಾಗಿರುತ್ತವೆ ಆದಾಯ ತೆರಿಗೆ ನಿಯಮ **194**(C) ಪ್ರಕಾರ ರೂ **1** ಲಕ್ಷ ಮೀರಿದ ಮೊತ್ತಕ್ಕೆ ಆದಾಯ **2%** ತೆರಿಗೆ ಕಟಾಯಿಸುವುದು ಕಡ್ಡಾಯವಾಗಿರುತ್ತದೆ. ಆದರೆ ಆದಾಯ ತೆರಿಗೆ ಕಟಾಯಿಸದೆ ಪಾವತಿಸಿದ ಬಿಲ್ಲುಗಳ ವಿವರ ಈ ಕೆಳಗಿನಂತಿವೆ.

Bill no/date	Item	Amount	1% TAX
1386/12.08.17	Excel mera-71	14000	140
1453/11.10.17	Falkor 250 gm Excel –mera-71 Prokisan-1 kg Indofill-M45-K	23020	230
1463/27.10.17	Excel mera-71	8400	84
1483/17.11.17	Melplex-Prokijian	6600	66
1499/24.11.17	Tilt	10400	104
1501/29.11.17	Mera 71	5600	56
1538/22.12.17	Tilt	15600	156
1578/17.03.18	Excel Mera 71	14000	140
1385/05.08.17	Gramaxne	10000	100
1324/19.06.17	Lasson Rogarin(rounded)	13800	138
1274/02.05.17	Copper sulphate	7500	75
	Total	128920	1289

ಈ ಕುರಿತು ಸೂಕ್ತ ಅನುಸರಣೆ ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ **06** ದಿನಾಂಕ **24.09.2019** ನೀಡಲಾಗಿ ಯಾವುದೇ ಅನುಸರಣೆ ಸಲ್ಲಿಸಿರುವುದಿಲ್ಲ ಕಾರಣ ಮೊತ್ತ ರೂ **1,289=00** ಗಳನ್ನು ವಸೂಲಾತಿಯಲ್ಲಿಡಲಾಗಿದೆ.

96 ಕರ್ನಾಟಕ ಅಗ್ರೋ ಕೆಮಿಕಲ್ಸ್, ಧಾರವಾಡ ಇವರಿಂದ ಖರೀದಿಸಿದ ಕೆಮಿಕಲ್ಸ ಸಾಮಾಗ್ರಿಗಳ ಒಟ್ಟು ಮೊತ್ತ ರೂ. **1,28,920/–** ಗಳಾಗಿದ್ದು ಇವರಲ್ಲಿ ಸನ್ **2017–18** ರಲ್ಲಿ ಸಲ್ಲಿಸಿದ ಆದಾಯ ತೆರಿಗೆ ತುಂಬಿದ ಮಾಹಿತಿಯನ್ನು ನೀಡಲು ತಿಳಿಸಿದಾಗ ಸಂಬಂಧಿಸಿದವರು ಇದರ ಮಾಹಿತಿ ಕೊಡುತ್ತಿಲ್ಲ. ಆದಾಯ ತೆರಿಗೆ ವೈಯಕ್ತಿಕವಾಗಿದ್ದು ಅದು ನಮ್ಮ ಪರಿಮಿತಿ ವ್ಯಾಪ್ತಿಗೆ ಒಳಪಡುವದಿಲ್ಲವಾದ್ದರಿಂದ ಸಂಬಂಧಿಸಿದ ಆಕ್ಷೇಪಣೆಯನ್ನು ಈ ಅನುಸರಣೆಯೊಂದಿಗೆ ಕೈ ಬಿಡಲು ಕೋರಲಾಗಿದೆ.

97	ಬಿತ್ತನೆ ಬೀಜಗಳನ್ನು ಬಲ್ಕ್ ಆಗಿ ಮಾರಾಟ ಮಾಡಿದ ಕುರಿತು. (ಬಿ.ಎಸ್.ಪಿ/ಎನ್.ಎಸ್.ಪಿ ಕಂ.ಸಂ.36) ಕೃಷಿ ವಿಶ್ವವಿದ್ಯಾಲಯ, ಧಾರವಾಡ ಬಿಎಸ್‌ಪಿ/ಎನ್‌ಎಸ್‌ಪಿ ಘಟಕದ 2017–18 ನೇ ಲೆಕ್ಕಪರಿಶೋಧನಾ ವೇಳೆ ಪರಿಶೀಲಿಸಲಾಗಿ, ಬಿತ್ತನೆ ಬೀಜದ ವಿವಿಧ ವರ್ಗಗಳಾದ ತಳಿವರ್ಧಕ ಬೀಜ, ಮೂಲ ಬೀಜ, ಪ್ರಮಾಣೀಕೃತ ಬೀಜ ಮತ್ತು ನಿಜ ಚೀಟಿ ಬೀಜ ಹಾಗೂ ತೋಟಗಾರಿಕೆ ವಿವಿಧ ಬಗ್ಗೆ 3078.02 ಕ್ವಿಂ. ಬಿತ್ತನೆ ಬೀಜಗಳನ್ನು ಬಲ್ಕ್ ಆಗಿ ಪರಿವರ್ತಿಸಿ ಮಾರಾಟ ಮಾಡಿದ್ದು ಕಂಡು ಬರುತ್ತದೆ. ಈ ಕುರಿತು ಪರಿಶೀಲಿಸಲಾಗಿ, ICAR, KSSC & KOF ಸಂಸ್ಥೆಗಳು ನೀಡಿದ ಬೇಡಿಕೆಗನುಗುಣವಾಗಿ ವಿಶ್ವವಿದ್ಯಾಲಯವು ಬಿಜ ಘಟಕದ ಮತ್ತು ವಿಶ್ವವಿದ್ಯಾಲಯದ ಸಂಶೋಧನಾ ಕೇಂದ್ರಗಳು ಉತ್ಪಾದಿಸಿದ ಹಾಗೂ ರೈತರಿಂದ ಸಂಗ್ರಹಿಸಿದ ವಿವಿಧ ತಳಿಯ ಬಿತ್ತನೆ ಬೀಜಗಳನ್ನು ಸಂಗ್ರಹಿಸಿರುತ್ತದೆ, ಆದರೆ ICAR, KSSC & KOF ಸಂಸ್ಥೆಗಳು ನೀಡಿದ ಬೇಡಿಕೆಯಂತೆ ಬೀಜಗಳನ್ನು ಖರೀದಿಸದೆ ಕಡಿಮೆ ಪ್ರಮಾಣದಲ್ಲಿ ಖರೀದಿಸಿರುತ್ತದೆ ಹೀಗೆ ಖರೀದಿಸದೇ ಬಾಕಿ ಉಳಿದ ಬೀಜಗಳ ಬಿತ್ತನೆ ಬೀಜಗಳ ಬಿತ್ತನೆ ಮಾಡುವ ನೈಸರ್ಗಿಕ ಅವಧಿಯು ಮೀರುವುದರಿಂದ ಸದರಿ ಬೀಜಗಳು ನಿರ್ಧಿಷ್ಟ ಸಮಯದ ನಂತರ ಮೊಳಕೆ ಸಾಮರ್ಥ್ಯ ಕಳೆದುಕೊಂಡು ಬಲ್ಕ ಆಗಿ ಪರಿವರ್ತನೆಯಾಗಿರುತ್ತವೆ. ಇದರಿಂದ ಬಿತ್ತನೆ ಬೀಜವಾಗಿ ಮಾರಾಟವಾಗದೇ ವಾಣಿಜ್ಯ ಉದ್ದೇಶಕ್ಕಾಗಿ ಅನಿವಾರ್ಯವಾಗಿ ಬಲ್ಕ ಆಗಿ ಪರಿವರ್ತಿಸಿ ಮಾರಾಟ ಮಾಡಲಾಗಿದೆ. ಹೀಗೆ ಸದರಿ ಸಂಸ್ಥೆಗಳು ತಮ್ಮ ಬೇಡಿಕೆಗಿಂತಲೂ ಕಡಿಮೆ ಪ್ರಮಾಣದಲ್ಲಿ ಬಿತ್ತನೆ ಬೀಜಗಳನ್ನು ಖರೀದಿಸಿರುವುದರಿಂದ, ಬಲ್ಕ್ ಆಗಿ ಪರಿವರ್ತನೆಯಾದ ಬೀಜಗಳು ಕಡಿಮೆ ಬೆಲೆಗೆ ಮಾರಾಟವಾಗಿರುತ್ತವೆ. ಇದರಿಂದ ವಿಶ್ವವಿದ್ಯಾಲಯಕ್ಕೆ ರೂ.2,05,18,408/– ಆರ್ಥಿಕ ನಷ್ಟ ಉಂಟಾಗಿದ್ದು ಈ ಕುರಿತು 2016–17ನೇ ಸಾಲಿನಲ್ಲಿಯೂ	97	ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಬೀಜ ಘಟಕವು ಕೇಂದ್ರ ಸರ್ಕಾರದ ರಾಷ್ಟ್ರೀಯ ಬೀಜ ನಿಗಮ, ICARಪ್ರಾಯೋಜಿತ ಯೋಜನೆಗಳು,National Food Security Missionಇತ್ಯಾದಿ ಯೋಜನೆಗಳಡಿ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳು, ಇಲಾಖಾ ಪ್ರಾತ್ಯಕ್ಷಿಕೆಗಳು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಕರ್ನಾಟಕ ರಾಜ್ಯ ಬೀಜ ನಿಗಮ, ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆಯವರು ಕಾಲಾನುಕ್ರಮವಾಗಿ ಅಳವಡಿಸಿಕೊಳ್ಳುವ ಕಾರ್ಯನೀತಿಯಂತೆ (policy decision) ಬೀಜೋತ್ಪಾದನೆ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ. ವಾರ್ಷಿಕವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಳವಡಿಸಿಕೊಳ್ಳುವ ಬೀಜೋತ್ಪಾದನಾ ಕಾರ್ಯಕ್ರಮಗಳಂತೆ ವಿವಿಧ ಬೆಳೆಗಳ ತಳಿಗಳ ಮತ್ತು ವರ್ಗಗಳ ಬೀಜೋತ್ಪಾದನೆ ಮಾಡಿ ಆಯಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಬೇಡಿಕೆಗನುಗುಣವಾಗಿ ಪೂರೈಸುವ ಹೊಣೆಗಾರಿಕೆಯನ್ನು ಬೀಜ ಘಟಕವು ಹೊಂದಿರುತ್ತದೆ. ಅಲ್ಲದೇ, ಜನಪ್ರಿಯ ಬೆಳೆಗಳ ಬೀಜಕ್ಕಾಗಿ ಸ್ಥಳೀಯ ರೈತರ ಬೀಜದ ಬೇಡಿಕೆಯನ್ನು ಪೂರೈಸುವ ಜವಾಬ್ದಾರಿಯನ್ನು ಬೀಜ ಘಟಕವು ನಿರ್ವಹಿಸುತ್ತದೆ. ಆದರೆ, ಕೆಲ ಸಂದರ್ಭಗಳಲ್ಲಿ ಹವಾಮಾನದಲ್ಲಿನ ವ್ಯತ್ಯಾಸದಿಂದ (ಮಳೆ ಕೊರತೆ, ತೇವಾಂಶ ಕೊರತೆ ಇತ್ಯಾದಿ) ಕ್ರಿಯಾ ಯೋಜನೆಯನ್ವಯ ಉತ್ಪಾದಿಸಲಾದ ಬೀಜದ ದಾಸ್ತಾನು ಮಾರಾಟವಾಗದೇ ಉಳಿಯುತ್ತದೆ ಮತ್ತು ಕೃಷಿ ಚಟುವಟಿಕೆಗಳು ಮಂದಗತಿಯಲ್ಲಿದ್ದ ಸಂದರ್ಭದಲ್ಲಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಸಲ್ಲಿಸಿದ ಬೇಡಿಕೆಯನ್ವಯ ಬೀಜವನ್ನು ಖರೀದಿ ಮಾಡುವುದಿಲ್ಲ. ಈ ರೀತಿಯಾದ ಅನಿರ್ಧಿಷ್ಟ ಸಂದರ್ಭಗಳಲ್ಲಿ ಉತ್ಪಾದನೆಯಾದ ಬೀಜದ ದಾಸ್ತಾನು ಮೊಳಯುವಿಕೆ ಅವಧಿಯನ್ನು ಮೀರುತ್ತದೆ ಮತ್ತು ಅಂತಹ ದಾಸ್ತಾನನ್ನು ಬಲ್ಕ ಎಂದು ಪರಿವರ್ತಿಸಿ ವಾಣಿಜ್ಯ ಬಳಕೆಗೆ ಮಾರಾಟ ಮಾಡಿ ಆಗಬಹುದಾದ ಹೆಚ್ಚಿನ ನಷ್ಟವನ್ನು ತಡೆಯಲಾಗುತ್ತದೆ. ರಾಜ್ಯ ಬಹುತೇಕ ಪ್ರದೇಶದಲ್ಲಿ ಹವಾಮಾನ ಆಧಾರಿತ ಕೃಷಿ ಪ್ರಚಲಿತವಿರುವುದರಿಂದ ಅನಿರ್ಧಿಷ್ಟ ಮಳೆಗಾಳದಿಂದ ಉತ್ಪಾದನೆಯಾದ ಬೀಜ

	ಸೂಚಿಸಲಾಗಿದ್ದಾದರೂ, ಸದರಿ ನಷ್ಟವನ್ನು ತಪ್ಪಿಸಲು ವಿಶ್ವವಿದ್ಯಾಲಯವು ಮೇಲೆ ತಿಳಿಸಿದ ಸಂಸ್ಥೆಗಳೊಂದಿಗೆ ಕರಾರು ಒಪ್ಪಂದ ಮಾಡಿಕೊಂಡಾಗಿಯೂ ಸಂಸ್ಥೆಗಳು ಇಂಡೆಂಟ್ ಪ್ರಕಾರ ಬೀಜಗಳನ್ನು ಖರೀದಿಸಿ ಮಾರಾಟವಾಗದ ಕಾರಣ ನೀಡಿ ಮರಳಿ ಕಳುಹಿಸುತ್ತಿದ್ದು ಕರಾರು ಒಪ್ಪಂದವನ್ನು ಪಾಲಿಸುತ್ತಿಲ್ಲ. ಹೀಗೆ ಹಲವಾರು ವರ್ಷಗಳಿಂದ ವಿಶ್ವವಿದ್ಯಾಲಯಕ್ಕೆ ನಷ್ಟ ಉಂಟಾಗುತ್ತಿದ್ದು ಈ ಕುರಿತು ಲೆ.ಪ.ವಿ.ಪ.–44 ದಿ:26–9–19 ನೀಡಲಾಗಿ, ಸಲ್ಲಿಸಿದ ಅನುಸರಣೆಯಲ್ಲಿ ಬೀಜ ವಿಶ್ಲೇಷಣಾ ವರದಿಗಳನ್ನು ಹಾಜರುಪಡಿಸಲಾಗುವುದು ಎಂದು ತಿಳಿಸಿದ್ದು ಲೆಕ್ಕ ಪರಿಶೋಧನೆಗೆ ಸೂಕ್ತ ದಾಖಲೆಗಳೊಂದಿಗೆ ಅನುಸರಣೆ ನೀಡಲು ಸೂಚಿಸಿದೆ.	ಮಾರಾಟವಾಗದೇ ಉಳಿಯುವುದು ಅನಿವಾರ್ಯವಾಗಿದೆ. ವಿವಿಧ ಋತುಮಾನದಲ್ಲಿ ನೈಸರ್ಗಿಕ ಕಾರಣಗಳಿಂದಾಗಿ ಬೀಜದ ಬೇಡಿಕೆಯು ಕಡಿಮೆಯಾದಾಗ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳೂ ಸಹ ಬೇಡಿಕೆಯನ್ವಯ ಬೀಜ ಖರೀದಿ ಮಾಡುವಲ್ಲಿ ನಿಸ್ಸಹಾಯಕವಾಗುತ್ತವೆ. ನೈಸರ್ಗಿಕ ಕಾರಣಾಂತರಗಳಿಂದ ಬೀಜ ಮಾರಾಟವಾಗದೇ ಉಳಿಯುವುದರಿಂದ ಉಂಟಾಗುವ ನಷ್ಟಕ್ಕೆ ಯಾವುದೊಂದು ಬೀಜತ್ಪಾದನಾ ಸಂಸ್ಥೆಯನ್ನು ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಹೊಣೆಗಾರರನ್ನಾಗಿಸುವುದು ಸೂಕ್ತವಾಗಲಾರದು. ಆದಾಗ್ಯೂ ಸಹ, ಹವಾಮಾನದ ಕುರಿತು ಯಾವುದೇ ಮುನ್ಸೂಚನೆ ಇಲ್ಲದೇ ಕ್ರಿಯಾ ಯೋಜನೆಯನ್ವಯ ಬೀಜೋತ್ಪಾದನೆ ಮಾಡುವುದರಿಂದ ರೈತರಿಗೆ ಯಾವುದೇ ಸಂದರ್ಭದಲ್ಲಿ ಬಿತ್ತನೆ ಬೀಜದ ಕೊರತೆ ಉಂಟಾಗದಂತೆ ಖಾತರಿ ಪಡಿಸಿಕೊಳ್ಳುವ ಪ್ರಮುಖ ಉದ್ದೇಶ ಈಡೇರುತ್ತದೆ. ಇದರ ಹೊರತಾಗಿ ತಿಳಿಸುವುದೇನೆಂದರೆ, ಇತ್ತೀಚಿನ ದಿನಗಳಲ್ಲಿ ಬದಲಾದ ಸನ್ನಿವೇಶವು ಇದ್ದು, 3 ವರ್ಷಗಳ ಅವಧಿಗಿರುವ Seed Roll Plan ಅನ್ವಯ ಬೀಜೋತ್ಪಾದನೆಯನ್ನು ಕೈಗೊಳ್ಳಲಾಗುತ್ತಿದೆ. ಮುಂದುವರೆದು, ದಿನಾಂಕ 15.6.2020 ರಂದು ನಡೆದ ಕೃಷಿ ಇಲಾಖೆಯ ಉನ್ನತ ಮಟ್ಟದ ಸಭೆಯಲ್ಲಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಇಂಡೆಂಟ್ ಪ್ರಕಾರ ಬೀಜದ ದಾಸ್ತಾವನ್ನು ಖರೀದಿಸುವುದಿಲ್ಲವೆಂಬ ಅಂಶವನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, Seed Roll Plan ಒಡಂಬಡಿಕೆಯಂತೆ ಬೇಡಿಕೆಯನ್ವಯ ಬೀಜವನ್ನು ಬೀಜೋತ್ಪಾದನಾ ಸಂಸ್ಥೆಗಳಿಂದ ಕಡ್ಡಾಯವಾಗಿ ಖರೀದಿಸಬೇಕೆಂದು ಠರಾವು ಅಂಗೀಕರಿಸಲಾಗಿದೆ (ಪ್ರತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ). ಈ ಕ್ರಮದಿಂದಾಗಿ ವಿವಿಯು ಎದುರುಸುತ್ತಿರುವ ನಷ್ಟವನ್ನು ತಡೆಯಬಹುದಾಗಿದೆ. ಈ ಕರಿತು ವಿಶ್ವವಿದ್ಯಾಲಯವು ನಷ್ಟವನ್ನು ತಡೆಯಲು ಅಗತ್ಯ ಕ್ರಮವನ್ನು ಜರುಗಿಸಿರುವುದರಿಂದ ಸದರಿ ಆಕ್ಷೇಪಿತ ಮೊತ್ತವನ್ನು ಕೈಬಿಡುವಂತೆ ಕೋರಿದೆ.

98	**2017–18 ನೇ ಸಾಲಿನ ಲೆಕ್ಕ ಪರಿಶೋಧನೆ ಅಡಿಯಲ್ಲಿ ಗೋಡಂಬಿ ಬೀಜ ಮಾರಾಟ ಮಾಡಿರುವ ಮೊತ್ತ ರೂ.19,780/–(ಕೃಷಿ ವಿಜ್ಞಾನ ಕೇಂದ್ರ ಶಿರಸಿ ಕಂ.ಸಂ.28)** ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ ಶಿರಸಿ ಇವರ 2017–18ನೇ ಸಾಲಿನ ಲೆಕ್ಕ ಪರಿಶೋಧನೆ ಕಾಲಕ್ಕೆ ಕಂಡು ಬಂದ ನ್ಯೂನತೆ. ವಿತರಣಾ ಚೀಟಿ ಸಂ"7265/1–4–2017 ರೂ.19780/– ಮೊತ್ತದ ಗೊಡಂಬಿ ಬೀಜವನ್ನು ಸಹ ವ್ಯವಸ್ಥಾಪಕರು, ಕದಂಬಾ ಮಾರ್ಕೇಟಿಂಗ್ ಸೌಹಾರ್ದ ಸಹಕಾರ ನಿಯಮಿತ ಶಿರಸಿ ಇವರಿಗೆ ನೇರವಾಗಿ ಹಣಕಾಸು ನಿಯಂತ್ರಣಾಧಿಕಾರಿಗಳು ಕೃಷಿ ವಿಶ್ವವಿದ್ಯಾಲಯ ಧಾರವಾಡ ಇವರು ನಿಗದಿ ಪಡಿಸಿದ ದರವನ್ನು ಪರಿಗಣಿಸದೇ ಸದರಿ ಏಜೆನ್ಸಿಯವರಿಗೆ ರೂ.19280/– ಮೊತ್ತಕ್ಕೆ ಗೊಡಂಬಿ ಬೀಜಗಳನ್ನು ಮಾರಾಟ ಮಾಡಿರುವುದಕ್ಕೆ ನಿರ್ಧಿಷ್ಟ ದಾಖಲೆಗಳನ್ನು ಹಾಜರುಪಡಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ –21 ದಿನಾಂಕ 18.12.2019 ರಂದು ನೀಡಲಾಗಿ ಸಲ್ಲಿಸಿದ ಅನುಸರಣೆಯಲ್ಲಿ ಕೃ.ವಿ.ವಿ ಧಾರವಾಡ ಇವರು ಯಾವುದೇ ದರವನ್ನು ಗೊಡಂಬಿ ಬೀಜಕ್ಕೆ ನಿಗದಿಪಡಿಸಿರುವುದಿಲ್ಲ ಆದ್ದರಿಂದ ಸ್ಥಳೀಯ ಕೃಷಿ ಉತ್ಪನ್ನ ಮಾರುಕಟ್ಟೆ ಆಧಾರದ ಮೇಲೆ ಕದಂಬಾ ಮಾರ್ಕೇಟಿಂಗ್ ಇವರಿಗೆ ಅಂದಿನ ದರಕ್ಕೆ ಮಾರಾಟ ಮಾಡಲಾಗಿದೆ ಎಂದು ತಿಳಿಸಿದ್ದು ಲೆಕ್ಕ ಪರಿಶೋಧನೆ ಒಪ್ಪಲಾಗುವುದಿಲ್ಲ ಕಾರಣ ರೂ 19,780=00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	**98** ಕೃ.ವಿ.ವಿ ಧಾರವಾಡ ಇವರು ಯಾವುದೇ ದರವನ್ನು ಗೊಡಂಬಿ ಬೀಜಕ್ಕೆ ನಿಗದಿಪಡಿಸಿರುವುದಿಲ್ಲ ಆದ್ದರಿಂದ ಸ್ಥಳೀಯ ಕೃಷಿ ಉತ್ಪನ್ನ ಮಾರುಕಟ್ಟೆ ಆಧಾರದ ಮೇಲೆ ಕದಂಬಾ ಮಾರ್ಕೇಟಿಂಗ್ ಇವರಿಗೆ ಅಂದಿನ ದರಕ್ಕೆ ಮಾರಾಟ ಮಾಡಲಾಗಿದೆ. ಆದ್ದರಿಂದ ಈ ಪ್ರಸ್ತಾವನೆಯನ್ನು ಕೈ ಬಿಡುವಂತೆ ಕೋರಲಾಗಿದೆ.
99	**2017–18 ನೇ ಸಾಲಿನ ಭತ್ತದ ಒಣ ಹುಲ್ಲು ಹರಾಜು ಮಾಡಿರುವ ಕುರಿತು. (ಕೃಷಿ ವಿಜ್ಞಾನ ಕೇಂದ್ರ ಶಿರಸಿ ಕಂ.ಸಂ.33)** ಕೃಷಿ ವಿಜ್ಞಾನ ಕೇಂದ್ರ ಶಿರಸಿ ಘಟಕದ 2017–18 ನೇ ಸಾಲಿನ ಭತ್ತದ ಒಣ ಹುಲ್ಲಿನ ಹರಾಜು ಮಾಡಿರುವ ವಿವರದಂತೆ ಹರಾಜಿಗೆ ಭತ್ತದ ಹುಲ್ಲಿನ ಅಂದಾಜು ಮಾಡಿರುವುದಿಲ್ಲ. ಅಲ್ಲದೇ ಇದಕ್ಕೆ ಸಕ್ಷಮ ಪ್ರಾಧಿಕಾರದಿಂದ ನಿಗದಿಪಡಿಸಿರುವ ದರವನ್ನು ಕನಿಷ್ಠ ದರದಿಂದ ಹರಾಜು ಪ್ರಕ್ರಿಯೆ ಕೈಗೊಂಡಿರುವುದಿಲ್ಲಾ ಈ ಕುರಿತು ಲೆಕ್ಕ ವಿಚಾರಣಾ ಪತ್ರ ಸಂ–27 ದಿನಾಂಕ 19.12.2019 ನೀಡಲಾಗಿ ಯಾವುದೇ ಅನುಸರಣೆ ನೀಡಿರುವುದಿಲ್ಲ ಕಾರಣ ರೂ 47,500/– ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.	**99** ಕೃಷಿ ವಿಜ್ಞಾನ ಕೇಂದ್ರ ಶಿರಸಿ ಘಟಕದ 2017–18 ನೇ ಸಾಲಿನ ಭತ್ತದ ಒಣ ಹುಲ್ಲಿನ ಹರಾಜಿನ ಪ್ರಕ್ರಿಯೆಯನ್ನು ಹಣಕಾಸು ನಿಯಂತ್ರಣಧಿಕಾರಿಗಳ ಅನುಮೋಧನೆಯ ಮೇರೆಗೆ ಮಾಡಲಾಗಿರುತ್ತದೆ. ಮತ್ತು ಮಾದ್ಯಮದಲ್ಲಿ ಪತ್ರಿಕಾ ಜಾಹಿರಾತನ್ನು ನೀಡಿ ಕಮೀಟಿಯನ್ನು ರಚಿಸಿ ಮಾರಾಟ ಮಾಡಲಾಗಿದೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಲಾಗಿದೆ. ಆದ್ದರಿಂದ ಈ ಪ್ರಸ್ತಾವನೆಯನ್ನು ಕೈ ಬಿಡುವಂತೆ ಕೋರಲಾಗಿದೆ.

	ಭೂ ಸ್ವಾಧೀನ	
100	**ಕೃಷಿ ಸಂಶೋಧನಾ ಕೇಂದ್ರ ಅಣ್ಣಿಗೇರಿ ಘಟಕದ ಜಮೀನನ್ನು ಭೂ ಸ್ವಾಧೀನ ಪಡೆಸಿಕೊಂಡ ಕುರಿತು.(ಕೃಷಿ ಸಂಶೋಧನಾ ಕೇಂದ್ರ ಅಣ್ಣಿಗೇರಿ ಕಂ.ಸಂ.19)** **2017–18 ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಕೃಷಿ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ನವಲಗುಂದ ತಾಲೂಕಾ ಅಣ್ಣಿಗೇರಿ ಗ್ರಾಮದ ರಿಸನ 1094 ಹಾಗೂ 1091/1+2 ಗಳ ಒಟ್ಟು ಕ್ಷೇತ್ರ 0ಎ–30 ಗುಂಟೆ ಜಮೀನನ್ನು ಭೂ ಸ್ವಾಧೀನಗೊಳಿಸಿ ದಿನಾಂಕ 14.01.2015 ರಂದು ಐತೀರ್ಪು ಘೋಷಿಸಿದ್ದು ಮತ್ತು ಸೈದಾಪುರ ಗ್ರಾಮದ ರಿಸನ 20 ಕ್ಷೇತ್ರ 9 ಎಕರೆ 37 ಗುಂಟೆ ಜಮೀನಿನ ಒಟ್ಟು ಮೊತ್ತ ರೂ 41,63,919=00 ಸಂಖ್ಯೆ:202/2003, 206/203 ರಂತೆ ಕೃಷಿ ವಿಶ್ವವಿದ್ಯಾಲಯ ಧಾರವಾಡ ಖಾತೆಗೆ ಸದರಿ ಮೊತ್ತವು ಜಮೆಯಾಗಿರುವ ಬಗ್ಗೆ ನಿಖರವಾದ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂ 09 ದಿನಾಂಕ 24.08.2019 ರಲ್ಲಿ ನೀಡಲಾಗಿ ಯಾವುದೇ ಅನುಸರಣೆ ನೀಡಿರುವುದಿಲ್ಲ ಕಾರಣ ಸದರಿ ಮೊತ್ತ ರೂ 41,63,919=00 ಗಳನ್ನು ಷರತ್ತು ಬದ್ದ ಆಕ್ಷೇಪಣೆಯಲ್ಲಿಡಲಾಗಿದೆ.**	**100 ಸದರಿ ದಾಖಲೆಗಳನ್ನು ಮುಂದಿನ ಲೆಕ್ಕ ತನಿಖೆಯಲ್ಲಿ ಹಾಜರುಪಡಿಸಲಾಗುವುದು**
	ನಗದು	
101	**ನಗದು ರೂಪದಲ್ಲಿ ಸಂಭಾವನೆ, ಊಟದ ವೆಚ್ಚ, ದಿನಭತ್ಯೆಗಳನ್ನು ಪಾವತಿಸಿದ ಕುರಿತು.** ಕೃಷಿ ವಿಶ್ವವಿದ್ಯಾಲಯದ ವಿವಿಧ ಘಟಕಗಳಲ್ಲಿ ವಿದ್ಯಾರ್ಥಿಗಳಿಗೆ, ಸಂಪನ್ಮೂಲ ವ್ಯಕ್ತಿಗಳಿಗೆ ರೈತರಿಗೆ ತರಬೇತಿದಾರರಿಗೆ ನಗದು ರೂಪದಲ್ಲಿ ಸಂಭಾವನೆ, ಊಟದ ವೆಚ್ಚ, ದಿನಭತ್ಯೆಗಳನ್ನು ಪಾವತಿಸಿದ್ದು ಕಂಡುಬಂದಿರುತ್ತದೆ. ಕರ್ನಾಟಕ ಆರ್ಥಿಕ ಸಂಹಿತೆ 70ನಿಯಮದನ್ವಯ ನಗದು ರೂಪದಲ್ಲಿ ಪಾವತಿಸಲು ಅವಕಾಶವಿಲ್ಲ. ಇಂತಹ ವಿವರ ಈ ಕೆಳಗಿನಂತಿವೆ. ಕ್ರ.ಸಂ. | ವಿವರ | ಮೊತ್ತ 1 | ಪಂದ್ಯಾವಳಿಗಳಿಗಾಗಿ ತರಬೇತುದಾರರಿಗೆ ನಗದು ಪಾವತಿಸಿರುವ ಕುರಿತು. (ಗ್ರಾಮೀಣ ಗೃಹ ವಿಜ್ಞಾನ ಮಹಾವಿದ್ಯಾಲಯ ಧಾರವಾಡ ಕಂ.ಸಂ. 20) | 20000 2 | ವಿವಿಧ ಕಾರ್ಯಕ್ರಮದ ಕಲಾವಿದರಿಗೆ ಮತ್ತು ತರಬೇತಿದಾರರಿಗೆ ನಗದು ಪಾವತಿಸಿರುವ ಕುರಿತು. (ಗ್ರಾಮೀಣ ಗೃಹ ವಿಜ್ಞಾನ ಮಹಾವಿದ್ಯಾಲಯ ಧಾರವಾಡ ಕಂ.ಸಂ. 21) | 108500 3 | ಎಸಿ ಬಿಲ್ ಸಂ:2/30.08.2017 ಆಲ್ ಇಂಡಿಯಾ ಟೂರ್ (03.12.2017 –24.12.2017) ರ ಹೊಂದಾಣಿಕೆ ಬಿಲ್‌ನಲ್ಲಿ ಕಂಡು ಬಂದ ನ್ಯೂನ್ಯತೆಗಳು (ಗ್ರಾಮೀಣ ಗೃಹ ವಿಜ್ಞಾನ ಮಹಾವಿದ್ಯಾಲಯ ಧಾರವಾಡ ಕಂ.ಸಂ. 22) | 126000 4 | All India tour programme (BHSC) ದಿನಾಂಕ 06.12.2017 ರಿಂದ 26.12.2017 ರ | 384300	**101 ತರಬೇತಿಗಳು ಹೊರ ಜಿಲ್ಲೆಗಳಲ್ಲಿ/ ಹೊರ ರಾಜ್ಯಗಳಲ್ಲಿ ನಡೆಯುವುದರಿಂದ, ತರಬೇತಿಯಲ್ಲಿ ಭಾಗವಹಿಸಿದ ರೈತರಿಗೆ ಹಾಗೂ ತರಬೇತಿ ನೀಡಿದ ಸಂಪನ್ಮೂಲ ವ್ಯಕ್ತಿಗಳಿಗೆ ನಗದು ರೂಪದಲ್ಲಿ ಊಟ ಮತ್ತು ವಸತಿಗೆ ಹಣವನ್ನು ನೀಡಿದೆ. ಏಕೆಂದರೆ, ಹೊರ ಜಿಲ್ಲೆ ಹಾಗೂ ಹೊರ ರಾಜ್ಯದಲ್ಲಿ ತರಬೇತುದಾರರನ್ನು ಬಸ್ಸುಗಳಲ್ಲಿ ಕರೆದುಕೊಂಡು ಹೋಗುವಾಗ ಊಟದ ಸಮಯದಲ್ಲಿ ಖಾನಾವಳಿ / ಹೋಟೆಲ್ ಗಳಲ್ಲಿ ಊಟ ಮಾಡಬೇಕಾಗುತ್ತದೆ.**

		ವೋಚರ್‌ನಲ್ಲಿ ಕಂಡು ಬಂದ ನ್ಯೂನ್ಯತೆಗಳು. (ಗ್ರಾಮೀಣ ಗೃಹ ವಿಜ್ಞಾನ ಮಹಾವಿದ್ಯಾಲಯ ಧಾರವಾಡ ಕಂ.ಸಂ. 23)		ತರಬೇತುದಾರರು ತಮಗೆ ಬೇಕಾದ ಊಟವನ್ನು ತಮ್ಮ ಅವಶ್ಯಕತೆಗೆ ಅನುಗುಣವಾಗಿ (ಸಸ್ಯಾಹಾರಿ/ಮಾಂಸಾಹಾರಿ) ಹೆಚ್ಚುವರಿ ಹಣವನ್ನು ಭರಿಸಿ ಊಟ ಮಾಡುತ್ತಾರೆ. ಪ್ರತಿ ತರಬೇತುದಾರರಿಗೆ ಊಟ ಹಾಗೂ ವಸತಿಗೆ ಹಣವನ್ನು ನಿರ್ದಿಷ್ಟ ಪಡಿಸಲಾಗಿರುತ್ತದೆ. ಹೀಗಾಗಿ ಅವರಿಗೆ ನಗದು ರೂಪದಲ್ಲಿ ನೀಡಿ, ಅವರಿಂದ ಹಣ ಸ್ವೀಕೃತಿ ಪತ್ರ ಪಡೆಯಲಾಗಿದೆ. ಮೇಲಾಗಿ ರೈತರ ಬ್ಯಾಂಕ್ ಅಕೌಂಟ್ ವಿವರಗಳನ್ನು ಕೇಳಿದಲ್ಲಿ ಅವರು ತರಬೇತಿಗೆ ಪಾಲ್ಗೊಳ್ಳುವುದಿಲ್ಲ ಎನ್ನುತ್ತಿದ್ದಾರೆ. ಕಾರಣ, ಸದರಿ ಖಂಡಿಕೆಯನ್ನು ಕೈಬಿಡಲು ಕೋರಿದೆ.
	5	NSS Special campus ನಲ್ಲಿ ವಿದ್ಯಾರ್ಥಿಗಳಿಗೆ ನಗದು ರೂಪದಲ್ಲಿ ಪಾವತಿಸಿರುವ ಕುರಿತು. (ಗ್ರಾಮೀಣ ಗೃಹ ವಿಜ್ಞಾನ ಮಹಾವಿದ್ಯಾಲಯ ಧಾರವಾಡ ಕಂ.ಸಂ. 24)	78750	
	6	ಸಂಪನ್ಮೂಲ ವ್ಯಕ್ತಿಗಳಿಗೆ ನಗದು ರೂಪದಲ್ಲಿ ಗೌರವ ಧನ ಪಾವತಿಸಿರುವ ಕುರಿತು. (ಕೃಷಿ ಮಹಾವಿದ್ಯಾಲಯ ವಿಜಯಪುರ ಕಂ.ಸಂ. 34)	10000	
	7	ಕರ್ನಾಟಕ ಆರ್ಥಿಕ ಸಂಹಿತೆ 70ನಿಯಮ ಮೀರಿ ನಗದು ಪಾವತಿಸಿರುವ ಕುರಿತು. (ಕೃಷಿ ವಿಜ್ಞಾನ ಕೇಂದ್ರ ಸೈದಾಪುರಕಂ.ಸಂ. 18)	66000	
	8	ನಗದು ರೂಪದಲ್ಲಿ ಪಾವತಿಸಿದ ಕುರಿತು. (ಕೃಷಿ ಸಂಶೋಧನಾ/ವಿಸ್ತರಣಾ ಶಿಕ್ಷಣ ಘಟಕ ಗದಗಕಂ.ಸಂ. 19)	112000	
	9	ರೈತರಿಗೆ ನಗದು ರೂಪದಲ್ಲಿ ಹಣ ಸಂದಾಯ ಮಾಡಿದ ಕುರಿತು. (ಕೃಷಿ ವಿಜ್ಞಾನ ಕೇಂದ್ರ ಹನುಮನಮಟ್ಟಿ ಕಂ.ಸಂ. 13)	45140	
	10	ಎಸಿ ಬಿಲ್ 24 /06.12.2017 ಮತ್ತು ಎಸಿ ಬಿಲ್ 28/016.01.2018 ಗಳ ಎನ್‌ಡಿಸಿ ಬಿಲ್ಲುಗಳಲ್ಲಿ ನಗದು ಪಾವತಿಸಿರುವ ಕುರಿತು ಮತ್ತು ಇತರೆ ನ್ಯೂನ್ಯತೆಗಳು. (ಕೃಷಿ ಮಹಾವಿದ್ಯಾಲಯ ವಿಜಯಪುರ ಕಂ.ಸಂ. 26)	210834	
	11	Skill Training Programme Of Rural Youth (STRY) in North Karnataka ಈ ಕಾರ್ಯಕ್ರಮದಡಿ ನಗದು ರೂಪದಲ್ಲಿ ಪಾವತಿಸಿರುವ ಕುರಿತು. (ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ ವಿಜಯಪುರ ಕಂ.ಸಂ. 22)	30500	
	12	ವಿವಿಧ ಎಸಿ ಬಿಲ್ಲುಗಳಲ್ಲಿ ರೈತರಿಗೆ ತರಬೇತಿ ಅಭ್ಯರ್ಥಿಗಳಿಗೆ ಸಂಪನ್ಮೂಲ ವ್ಯಕ್ತಿಗಳಿಗೆ ನಗದು ರೂಪದಲ್ಲಿ ಹಣಪಾವತಿಸಿರುವ ಕುರಿತು.(ಕೃಷಿ ವಿಸ್ತರಣಾ ಶಿಕ್ಷಣ ಘಟಕ/ವಿಜ್ಞಾನ ಕೇಂದ್ರ ವಿಜಯಪುರ ಕಂ.ಸಂ. 12)	387025	
	13	ನಗದು ರೂಪದಲ್ಲಿ ರೈತರಿಗೆ / ತರಬೇತಿ ಅಭ್ಯರ್ಥಿಗಳಿಗೆ ಹಣ ಪಾವತಿಸಿರುವ ಕುರಿತು. (ಕೃಷಿ ವಿಸ್ತರಣಾ ಶಿಕ್ಷಣ ಘಟಕ/ವಿಜ್ಞಾನ ಕೇಂದ್ರ ವಿಜಯಪುರ)	33500	
	14	ನಗದು ನಿರ್ವಹಣೆ ಮಾಡಿರುವ ಕುರಿತು. (ಕೃಷಿ ಸಂಶೋಧನಾ ಕೇಂದ್ರ ನಿಪ್ಪಾಣಿಕಂ.ಸಂ. 18)	90568	
	15	ನಗದು ನಿರ್ವಹಣೆ ಕುರಿತು. (ರಾಜ್ಯಮಟ್ಟದ ಸಾಂಬರ ಮೇಳ) (ಕೃಷಿ ವಿಜ್ಞಾನ ಕೇಂದ್ರಕಂ.ಸಂ. 29)	10000	
	16	2017–18 ನೇ ಸಾಲಿನ ರೈತರಿಂದ ರೈತರಿಗಾಗಿ ಕಾರ್ಯಕ್ರಮ ಆಯೋಜಿಸಿದ ಕುರಿತು. (ಕೃಷಿ ವಿಜ್ಞಾನ ಕೇಂದ್ರ ಶಿರಸಿಕಂ.ಸಂ. 32)	168000	
	17	AC bill No. 2/11.11.2017 ರ ಹೊಂದಾಣಿಕೆ ವೋಚರ್‌ಗಳಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತು. (ಕೃಷಿ ವಿಜ್ಞಾನ ಕೇಂದ್ರ ಇಂಡಿ ಕಂ.ಸಂ. 9)	85964	

18	ವಿವಿಧ ತರಬೇತಿಗಳಡಿ ರೈತರಿಗೆ ನಗದು ರೂಪದಲ್ಲಿ ಹಣ ಪಾವತಿಸಿದ ಕುರಿತು. (ಕೃಷಿ ವಿಜ್ಞಾನ ಕೇಂದ್ರ ಇಂಡಿ ಕಂ.ಸಂ. 10)	136970
19	2017–18 ನೇ ಸಾಲಿನಲ್ಲಿ ಕೃಷಿ ವಿಸ್ತರಣಾ ಘಟಕ ಮುಧೋಳದಲ್ಲಿ ಪ್ರಗತಿಪರ ರೈತರಿಂದ ಇತರ ರೈತರಿಗೆ ನೀಡಿದ ತರಬೇತಿಯಲ್ಲಿ ಊಟ ಉಪಹಾರ ಹಾಗೂ ಗೌರವ ಧನವನ್ನು ನಗದು ರೂಪದಲ್ಲಿ ಪಾವತಿಸಿದ ಕುರಿತು. (ಕೃಷಿ ವಿಸ್ತರಣಾ ಶಿಕ್ಷಣ ಘಟಕ ಮುಧೋಳ ಕಂ.ಸಂ. 5)	258000
20	2017–18 ನೇ ಸಾಲಿನಲ್ಲಿ DAESI CLASS ನಗದು ರೂಪದಲ್ಲಿ ಪಾವತಿಸಿದ ಕುರಿತು. (ಕೃಷಿ ವಿಸ್ತರಣಾ ಶಿಕ್ಷಣ ಘಟಕ ಮುಧೋಳ ಕಂ.ಸಂ. 6)	26000
21	ಎನ್.ಎಸ್.ಎಸ್ Special camp ನಲ್ಲಿ ವಿದ್ಯಾರ್ಥಿಗಳಿಗೆ ನಗದು ರೂಪದಲ್ಲಿ ಹಣ ಪಾವತಿಸಿರುವ ಕುರಿತು. (ಕೃಷಿ ಡಿಪ್ಲೊಮಾ ವಿಜಯಪುರ ಕಂ.ಸಂ. 9)	15300
22	AC Bill ಗಳ ಹೊಂದಾಣಿಕೆ ವೋಚರುಗಳಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತು. (ಕೃಷಿ ವಿಸ್ತರಣಾ ಶಿಕ್ಷಣ ಘಟಕ ಕುಮಟಾ ಕಂ.ಸಂ. 9)	359000
23	Post Graduate Research Conference on 26-27 May 2016 ಈ ಕಾರ್ಯಕ್ರಮದಲ್ಲಿ ನಗದು ರೂಪದಲ್ಲಿ ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ ಪಾವತಿಸುವ ಕುರಿತು.(ಡೀನ್ ಪಿ.ಜಿ. ಕಂ.ಸಂ. 9)	34000
24	SRP ಯೋಜನೆಯಡಿ ಕಿರುಧಾನ್ಯಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಒಂದು ದಿನದ ಕಾರ್ಯಾಗಾರಕ್ಕೆ ನಗದು ರೂಪದಲ್ಲಿ ಹಣ ಪಾವತಿಸಿರುವ ಕುರಿತು. (ಕೃಷಿ ಮಹಾವಿದ್ಯಾಲಯ ವಿಜಯಪುರ ಕಂ.ಸಂ. 33)	8000
25	ಎನ್.ಎಸ್.ಎಸ್. ಸ್ವಯಂ ಚಾಲಕರಿಗೆ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ವೆಚ್ಚ ಹಾಗೂ ಶೈಕ್ಷಣಿಕ ಪ್ರವಾಸದ ವಿದ್ಯಾರ್ಥಿಗಳ ವಸತಿ ವೆಚ್ಚ ಮತ್ತು ವಿವಿಧ ಟೂರ್ನಮೇಂಟ್‌ಗಳಲ್ಲಿ ಆಫಿಸಿಯೆಟಿಂಗ್ ಚಾರ್ಜಿಸ್ ಎಂದು ನಗದು ರೂಪದಲ್ಲಿ ಹಣ ಸಂದಾಯ ಮಾಡಿದ ಕುರಿತು. (ಕೃಷಿ ಮಹಾವಿದ್ಯಾಲಯ ಧಾರವಾಡ ಕಂ.ಸಂ. 24)	547460
26	ನಗದು ರೂಪದಲ್ಲಿ ರೈತರಿಗೆ/ಅಧಿಕಾರಿಗಳಿಗೆ ಹಣ ಪಾವತಿಸಿರುವ ಕುರಿತು. (ವಿಸ್ತರಣಾ ನಿರ್ದೇಶಕರ ಕಛೇರಿ ಕಂ.ಸಂ. 14)	393750
27	ಸಂಕ್ಷಿಪ್ತ ಸಾದಿಲ್ವಾರು ಹೊಂದಾಣಿಕೆ ವೋಚರುಗಳಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತು. (ಕೃಷಿ ವಿಜ್ಞಾನ ಕೇಂದ್ರ ಹನುಮನಮಟ್ಟಿ ಕಂ.ಸಂ. 15)	360750
	ಒಟ್ಟು	4106311

ಈ ಕುರಿತು ವಿವಿಧ ಘಟಕಗಳಲ್ಲಿ ವಿಚಾರಣಾ ಪತ್ರ ನೀಡಲಾಗಿ ಇನ್ನು ಮುಂದೆ RTGS ಮುಖಾಂತರ ನಿರ್ವಹಿಸುವುದಾಗಿ ತಿಳಿಸಿದ್ದು ಅದರಂತೆ ಕ್ರಮ ವಹಿಸಲು ಸೂಚಿಸಿದೆ.

	ಇತರೆ	
102	ನಿವ್ವಳ ವೇತನಕ್ಕಿಂತ 50% ಜಾಸ್ತಿ ಕಟಾವು ಮಾಡಿ ಗೃಹ ನಿರ್ಮಾಣ ಸಾಲ ನೀಡಿರುವುದು.(ಗೃಹ ನಿರ್ಮಾಣ ಮತ್ತು ವಾಹನ ಮುಂಗಡ ಕಂ.ಸಂ.5) ಕೃ.ವಿ.ವಿ. ಧಾರವಾಡದ ಗೃಹ ನಿರ್ಮಾಣ ಸಾಲ ಮತ್ತು ಮುಂಗಡ ವಿಭಾಗದ 2017–18 ನೇ ಲೆಕ್ಕ ಪರಿಶೋಧನೆ ವೇಳೆ ಪರಿಶೀಲಿಸಲಾಗಿ, ಸರ್ಕಾರಿ ಆದೇಶ ಸಂ.ಆಇ02 ಮಕಮು 2014 ಬೆಂಗಳೂರು ದಿ:05.05.2015 ಆರ್ಥಿಕ ಇಲಾಖೆ (ಆಡಳಿತ & ಮುಂಗಡ) ರವರ ಪ್ರಕಾರ ಗೃಹ ನಿರ್ಮಾಣ ಮುಂಗಡ ಎಲ್ಲ ಕಟಾವುಗಳ ನಂತರ ಒಟ್ಟು ಸಂಬಳದ ಅರ್ಧದಷ್ಟು ಕಡಿಮೆ ಬೀಳದಂತೆ ಖಚಿತ ಪಡಿಸಿಕೊಂಡು ಮುಂಗಡ ಮಂಜೂರು ಮಾಡಬೇಕು ಎಂದಿದ್ದು ಆದರೆ ಸದರಿ ಪ್ರಕರಣದಲ್ಲಿ ಶ್ರೀಮತಿ ಮಮ್ತಾಜ ಜಮಾದಾರ (ಫಾರ್ಮ್ ಲೇಬರ್) EMP NO-12603 ರವರಿಗೆ ಅರ್ಧಕ್ಕಿಂತ ಹೆಚ್ಚು ವೇತನ ಕಟಾವು ಮಾಡಿ ರೂ 13,00,000/– ಗಳನ್ನು ಗೃಹ ನಿರ್ಮಾಣ ಮುಂಗಡವಾಗಿ ಮಂಜೂರು ಮಾಡಿದ್ದು ಲೆಕ್ಕ ಪರಿಶೋಧನೆ ವೇಳೆ ಗಮನಿಸಲಾಗಿದ್ದು ಈ ಕುರಿತು ಸೂಕ್ತ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕೋರಿದೆ. ನಿವ್ವಳ ಸಂಬಳ: 27776 ಕಟಾಯಿಸಿಬೇಕಾಗಿದ್ದು 50%: 13888 ಕಟಾವು ಮಾಡಿದ್ದು60.76%: 16739 ವ್ಯತ್ಯಾಸ: 2851 ಈ ಮೇಲೆ ತಿಳಿಸಿದ ವ್ಯತ್ಯಾಸ ಲೆಕ್ಕ ಪರಿಶೋಧನೆ ವೇಳೆ ಗಮನಿಸಲಾಗಿದ್ದು ಈ ಕುರಿತು ಸೂಕ್ತ ದಾಖಲೆಗಳನ್ನು ನೀಡಲು ಕೋರಿ ವಿಚಾರಣಾ ಪತ್ರ–2 ದಿನಾಂಕ–01.04.2019 ನೀಡಲಾಗಿ, ನೀಡಿದ ಅನುಸರಣೆಯಲ್ಲಿ take home salary ಯು 50% ಕಡಿಮೆಯಾದ ಬಗ್ಗೆ ಸಂಬಂಧಿಸಿದ ಹಣ ಸೆಳೆಯುವ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗುವುದು ಎಂದು ತಿಳಿಸಿದ್ದು ಈ ರೀತಿ ಪ್ರಕರಣಗಳು ಮರುಕಳಿಸದಂತೆ ನಿಗಾವಹಿಸಲು ಸೂಚಿಸಿದೆ.	102 ಸದರ ನೌಕರರಿಗೆ ಮಂಜೂರಾತಿ ನೀಡುವಾಗ ವೇತನದ ಶೆಕಡಾ 50% ಬಿಟ್ಟು ಉಳಿದ ಮೊತ್ತ ಪರಿಗಣಿಸಿ ಮಂಜೂರಾತಿ ಮಾಡಿರುವುದು. ಸದರ ವೇತನದಲ್ಲಿ ನೌಕರನ ಮನವಿ ಅರ್ಜಿಯಂತೆ ಕಡಿಮೆ ಕಂತಿನಲ್ಲಿ ಸಾಲದ ಮೊತ್ತದ ಕಡಿತಗೊಳಿಸಿರುವುದರಿಂದ ಬಡ್ಡಿಯ ಮೊತ್ತ ಸೇರಿ ಶೇಕಡಾ 50% ಕ್ಕಿಂತಲೂ ಹೆಚ್ಚಾಗಿರುವುದು. ಮುಂದೆ ಇಂತಹ ಪ್ರಕರಣಗಳು ಮರುಕಳಿಸದಂತೆ ನಿಗಾವಹಿಸಲಾಗುವುದು. ಸದರ ನೌಕರರ ವೇತನದಲ್ಲಿ ಇಲ್ಲಿಯವರೆಗೆ ಅಸಲು ಬಡ್ಡಿ ಸೇರಿ ಈಗಾಗಲೆ 120 ಕಂತುಗಳಲ್ಲಿ 24 ಮಾಸಿಕ ಕಂತುಗಳು ಕಡಿತವಾಗಿ ಕೃಷಿ ವಿಶ್ವವಿದ್ಯಾಲಯದ ನಿಧಿಗೆ ಜಮೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಕಂಡಿಕೆಯನ್ನು ಕೈ ಬಿಡಲು ಕೋರಲಾಗಿದೆ.

103	2017–18 ನೇ ಸಾಲಿನಲ್ಲಿ ವಿಶ್ವವಿದ್ಯಾಲಯದಿಂದ ಮತ್ತು ಸರ್ಕಾರದಿಂದ ವಸತಿ ನಿಲಯದ ವಿದ್ಯಾರ್ಥಿನಿಯರಿಗೆ ಊಟದ ವೆಚ್ಚಕ್ಕಾಗಿ ಮಂಜೂರಾದ ಮೊತ್ತ ಮತ್ತು ವೆಚ್ಚದ ವಿವರಗಳನ್ನು ಒದಗಿಸುವ ಕುರಿತು. (ಗ್ರಾಮೀಣ ಗೃಹ ವಿಜ್ಞಾನ ಮಹಾವಿದ್ಯಾಲಯ ಧಾರವಾಡ ಕಂ.ಸಂ.25) 2017–18 ನೇ ಸಾಲಿನಲ್ಲಿ ಗ್ರಾಮೀಣ ಗೃಹ ವಿಜ್ಞಾನ ಮಹಾವಿದ್ಯಾಲಯದ ವತಿಯಿಂದ ವಿದ್ಯಾರ್ಥಿನಿಯರ ವಸತಿ ನಿಲಯದಲ್ಲಿರುವ ವಿದ್ಯಾರ್ಥಿನಿಯರಿಗೆ ಊಟದ ವೆಚ್ಚಕ್ಕಾಗಿ ವಿಶ್ವವಿದ್ಯಾಲಯದ ವತಿಯಿಂದ EBL ಮತ್ತು ZERO balance a/c ನಿಂದ ಪಾವತಿಯಾದ ಮೊತ್ತ ಮತ್ತು ಸರ್ಕಾರದಿಂದ ಮಂಜೂರಾದ ಮೊತ್ತದ ವಿವರಗಳನ್ನು ದಾಖಲೆಗಳೊಂದಿಗೆ ಕೂಡಲೇ ಹಾಜರುಪಡಿಸಲು ಸೂಚಿಸಲಾಗಿSC/ST/CAT-1 ವಿದ್ಯಾರ್ಥಿನಿಯರ ಮೆಸ್ ಬಿಲ್ ವಿವರ ಮತ್ತು ಅದಕ್ಕೆದುರಾಗಿ ಸರ್ಕಾರ ವಿಶ್ವವಿದ್ಯಾಲಯ ಲೆಕ್ಕ ಶೀರ್ಷಿಕೆಗಳಿಂದ ಪಾವತಿಯಾದ ಮೊತ್ತದ ವಿವರಗಳ ದಾಖಲೆಗಳನ್ನು ನೀಡಲಾಗಿತ್ತು ಅದಕ್ಕೆದುರಾಗಿ ಲೆಕ್ಕ ವಿಚಾರಣಾ ಪತ್ರ ಸಂ 15 ದಿನಾಂಕ 23.08.2019 ರಂದು ನೀಡಲಾಗಿ ದಿನಾಂಕ 28.08.2019 ರಲ್ಲಿ ಒದಗಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಏಪ್ರೀಲ್ 2017 ರಿಂದ ಫೆಬ್ರವರಿ–2018 ರವರೆಗೆ ವಸತಿ ನಿಲಯದಲ್ಲಿರುವ ವಿದ್ಯಾರ್ಥಿನಿಯರ ಊಟದ ವೆಚ್ಚಕ್ಕೂ ಮತ್ತು ಒಟ್ಟಾರೆ ಮಂಜೂರಾದ ಮೊತ್ತಕ್ಕೂ (Government Of India +Extra Boarding & Lodging +Zero Balance) ವ್ಯತ್ಯಾಸಗಳು ಕಂಡು ಬಂದಿವೆ. ಈ ಕುರಿತು ಲೆಕ್ಕ ವಿಚಾರಣಾ ಪತ್ರ ಸಂ 19 ದಿನಾಂಕ 26.08.2019 ನ್ನು ನೀಡಿದ್ದು ಲೆಕ್ಕ ಪರಿಶೋಧನೆಗೆ ಒದಗಿಸಿದ ಅನುಸರಣೆ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ ರೂ 3,36,813=00 ಗಳಷ್ಟು ವ್ಯತ್ಯಾಸ ಕಂಡು ಬಂದಿದೆ. ದಿನಾಂಕ 28.08.2019 ರಂದು ನೀಡಿದ ಅನುಸರಣೆಯಲ್ಲಿ ಖರ್ಚಾಗದೇ ವಸತಿ ನಿಲಯದ ಖಾತೆಯಲ್ಲಿ ಸದರ ಮೊತ್ತ ಉಳಿದಿರುವುದಾಗಿ ವಸತಿ ನಿಲಯ ಪಾಲಕರು ತಿಳಿಸಿದ್ದು ಚಕ್ ಸಂ:758571 ದಿನಾಂಕ 28.08.2019 ರ ಮೂಲಕ ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿಗೆ ಮರಳಿಸಿದ್ದಾಗಿ ಅನುಸರಣೆ ಸಲ್ಲಿಸಿದ್ದಾರೆ ಆದರೆ ಸದರ ಮೊತ್ತ ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಖಾತೆಗೆ ಜಮೆಯಾದ ಕುರಿತು ದೃಢೀಕರಿಸಿ ಮಾಹಿತಿಯನ್ನು ಲೆಕ್ಕ ಪರಿಶೋಧನೆಗೆ ಒದಗಿಸುವವರೆಗೆ ರೂ. 3,36,813=00 ಆಕ್ಷೇಪಣೆಯಲ್ಲಿಡಲಾಗಿದೆ. ವಿವರ ಅನುಬಂಧ–20 ರಲ್ಲಿ ವಿವರಿಸಿದೆ.	103 ಚೆಕ್ಕ್ ಸಂ.758571 ದಿನಾಂಕ 28.08.2019 ರ ಪ್ರಕಾರ ರೂ.3,36,813.00 ಗಳನ್ನು ಹಣಕಾಸು ನಿಯಂತ್ರಣಾಧಿಕರಿಗಳು, ಕೃವಿವಿ, ಧಾರವಾಡ ಇವರಿಗೆ ಸಲ್ಲಿಸಲಾಗಿದ್ದು ಅದರಂತೆ ಸದರಿ ರಕಮು ಕೃಷಿ ವಿಶ್ವವಿದ್ಯಾಲಯದ ನಿಧಿಗೆ ಜಮೆಯಾದ ಕುರಿತಾದ ರಶೀದಿ ಸಂ.09008 ದಿನಾಂಕ 03.09.2020 ರಪ್ರಕಾರ ಸ್ವೀಕೃತಿ & ಬ್ಯಾಂಕಿಗೆ ಜಮೆಯಾದ ಚಲನ ಪ್ರತಿಯನ್ನು ಅನುಸರಣೆಯೊಂದಿಗೆ ಲಗತ್ತಿಸಲಾಗಿದೆ. ಕಾರಣ ದಾಖಲೆಗಳನ್ನು ಪರಿಶೀಲಿಸಿ ಕಂಡಿಕೆಯನ್ನು ಕೈಬಿಡಲು ಕೋರಿದೆ.

104 ಪೂರೈಕೆ ಆದೇಶಗಳಲ್ಲಿ ನೀಡಿದ ದಿನಾಂಕವನ್ನು ಖರೀದಿ ಮತ್ತು ಸಂಗ್ರಹ ಅಧಿಕಾರಿಗಳು ತಮ್ಮ ಹಂತದಲ್ಲಿಯೇ ಪೊರೈಕೆ ಆದೇಶಗಳನ್ನು ತಿದ್ದುಪಡಿ ಮಾಡಿ ಕಡತಗಳನ್ನು ನಿರ್ವಹಿಸಿರುವಕುರಿತು. (ಸರಕು ಖರೀದಿ ಅಧಿಕಾರಿಗಳ ಕಛೇರಿ ಕಂ.ಸಂ.16)

2017–18 ನೇ ಸಾಲಿನ ಕಡತಗಳಲ್ಲಿ ಪೊರೈಕೆ ಆದೇಶಗಳಲ್ಲಿ ದಿನಾಂಕ ತಿದ್ದುಪಡಿ ಮಾಡಿದ್ದು ಕೆಲವು ಉದಾಹರಣೆಗಳು ಕೆಳಗಿನಂತಿವೆ.

